ಮಂಗಳವಾರ, ಏಪ್ರಿಲ್ 21, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 110 | ಪುಟ 14

prajavani.net prajavani | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ



ತಿಲಕ್ ಶತಕ

ಮುಂಬೈ ಇಂಡಿಯನ್ಸ್ ಬ್ಯಾಟರ್ ತಿಲಕ್ ವರ್ಮಾ (ಔಟಾಗದೆ 101;45ಎ) ಸೋಮವಾರ ಗುಜರಾತ್ ಟೈಟನ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಶತಕ ಬಾರಿಸಿದರು

ಸೆನ್ಸೆಕ್ಸ್ 78,520 | ನಿಫ್ಟಿ 24,364 | $/₹ 93.16 | ಚಿನ್ನ (Std. 10g) ₹1,59,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,65,700 (ಬೆಂಗಳೂರು)

ಮಾತುಕತೆಗೆ ಇರಾನ್ ಹಿಂದೇಟು

ಪ್ರಯತ್ನ ಮುಂದುವರಿಸಿದ ಪಾಕಿಸ್ತಾನ ಇರಾನ್ ಹಡಗು ಅಮೆರಿಕ ವಶಕ್ಕೆ

ಇಸ್ಲಾಮಾಬಾದ್/ದುಬೈ (ಎಪಿ/ಎಎಫ್‌ಪಿ): ಹೊರ್ಮುಜ್ ಜಲಸಂಧಿ ವಿಚಾರದಲ್ಲಿ ಅಮೆರಿಕ ಮತ್ತು ಇರಾನ್ ನಡುವೆ ಉದ್ವಿಗ್ನ ಸ್ಥಿತಿ ಮತ್ತಷ್ಟು ಹೆಚ್ಚಿರುವುದರಿಂದ ಎರಡನೇ ಸುತ್ತಿನ ಮಾತುಕತೆ ಬಗ್ಗೆ ಅನಿಶ್ಚಿತತೆ ಮುಂದುವರಿದಿದೆ. ಅಮೆರಿಕವು ಮಾತುಕತೆಗೆ ಉತ್ಸುಕತೆ ತೋರಿದೆಯಾದರೂ, ಇರಾನ್ ಸಕಾರಾತ್ಮಕವಾಗಿ ಸ್ಪಂದಿಸಿಲ್ಲ.

ಈ ನಡುವೆ, ಇರಾನ್‌ನ ಸರಕು ಸಾಗಣೆ ಹಡಗನ್ನು ಅಮೆರಿಕ ಸೇನೆ ತನ್ನ ವಶಕ್ಕೆ ತೆಗೆದುಕೊಂಡಿರುವುದು ಹೊಸ ಸಂಘರ್ಷದ ಆತಂಕ ಮೂಡಿಸಿದೆ. ಇರಾನ್‌ನ ಬಂದರುಗಳ ಮೇಲೆ ತಾನು ವಿಧಿಸಿರುವ ದಿಗ್ಬಂಧನವನ್ನು ಉಲ್ಲಂಘಿಸಿರುವುದಕ್ಕೆ ಹಡಗನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಅಮೆರಿಕ ಹೇಳಿದೆ. ಈ ಕ್ರಮಕ್ಕೆ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಇರಾನ್ ಎಚ್ಚರಿಸಿದ್ದು, ಹೊರ್ಮುಜ್ ಜಲಸಂಧಿ ಮೇಲಿನ ತನ್ನ ಹಿಡಿತ ಬಿಗಿಗೊಳಿಸಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವಂತೆ ಎರಡನೇ ಸುತ್ತಿನ ಮಾತುಕತೆಯು ಇಸ್ಲಾಮಾಬಾದ್‌ನಲ್ಲಿ ಮಂಗಳವಾರ ಬೆಳಿಗ್ಗೆ ಆರಂಭವಾಗಬೇಕು. 'ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ಅಮೆರಿಕ ನಿಯೋಗವು ಶೀಘ್ರದಲ್ಲೇ ಪಾಕಿಸ್ತಾನ ತಲುಪಲಿದೆ' ಎಂದು ಟ್ರಂಪ್, ಸೋಮವಾರ 'ನ್ಯೂಯಾರ್ಕ್ ಪೋಸ್ಟ್'ಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದಾರೆ.

'ಶಾಂತಿ ಒಪ್ಪಂದ ಸಾಧ್ಯವಾದರೆ ಇರಾನ್‌ನ ನಾಯಕರನ್ನು ಸ್ವತಃ ಭೇಟಿಯಾಗುವುದನ್ನು ಎದುರು ನೋಡುತ್ತಿದ್ದೇನೆ' ಎಂದೂ ಹೇಳಿದ್ದಾರೆ. ಆದರೆ, ಮಾತುಕತೆಯಲ್ಲಿ ಪಾಲ್ಗೊಳ್ಳುವ ಬಗ್ಗೆ ಇರಾನ್, ಸೋಮವಾರ ರಾತ್ರಿಯವರೆಗೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

'ಅಮೆರಿಕದ ಜತೆ ಎರಡನೇ ಸುತ್ತಿನ ಮಾತುಕತೆಯಲ್ಲಿ ಪಾಲ್ಗೊಳ್ಳುವ ತೀರ್ಮಾನವನ್ನು ಇದುವರೆಗೆ ಮಾಡಿಲ್ಲ' ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಹೇಳಿದ್ದಾರೆ.

'ಅಮೆರಿಕದ ಜತೆ ಮಾತುಕತೆಯಲ್ಲಿ ಪಾಲ್ಗೊಳ್ಳುವುದನ್ನು 'ಸಕಾರಾತ್ಮಕ'ವಾಗಿ ಪರಿಶೀಲಿಸಲಾಗುತ್ತಿದೆಯಾದರೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಇರಾನ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾತುಕತೆ ನಡೆಯುವ ಸಾಧ್ಯತೆ ಕಡಿಮೆ ಎಂದು ಅನಾಮಧೇಯ ಮೂಲಗಳನ್ನು ಉಲ್ಲೇಖಿಸಿ ಇರಾನ್‌ನ ಸರ್ಕಾರಿ ಮಾಧ್ಯಮಗಳು ವರದಿ ಮಾಡಿವೆ.

'ಇರಾನ್‌ನ ಹಡಗುಗಳು ಮತ್ತು ಬಂದರುಗಳಿಗೆ ಅಮೆರಿಕ ಬೆದರಿಕೆ ಹಾಕಿರುವುದು ಯೋಜಿತ ಮಾತುಕತೆಗೆ ಮುನ್ನ ಆ ದೇಶದ 'ಕಪಟತನ'ವನ್ನು ಬಯಲು ಮಾಡಿದೆ' ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರು ಇರಾನ್ ಜತೆಗೆ ಎರಡನೇ ಸುತ್ತಿನ ಮಾತುಕತೆ ನಡೆಯುವುದನ್ನು ಭಾನುವಾರ ಖಚಿತಪಡಿಸಿದ್ದರು. 'ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ನೇತೃತ್ವದ ನಿಯೋಗ ಪಾಕಿಸ್ತಾನಕ್ಕೆ ತೆರಳಲಿದೆ' ಎಂದಿದ್ದರು.

ಪಾಕ್ ಪ್ರಯತ್ನ: ಎರಡು ವಾರಗಳ ಕದನ ವಿರಾಮ ಬುಧವಾರ ಕೊನೆಗೊಳ್ಳಲಿದ್ದು, ಅದಕ್ಕೂ ಮುನ್ನ ಮತ್ತೊಂದು ಸುತ್ತಿನ ಮಾತುಕತೆ ಆಯೋಜಿಸುವ ಪ್ರಯತ್ನವನ್ನು ಪಾಕಿಸ್ತಾನ ಮುಂದುವರಿಸಿದೆ. ಕಳೆದ 24 ಗಂಟೆಗಳಲ್ಲಿ ಪಾಕಿಸ್ತಾನವು ಎರಡೂ ದೇಶಗಳ ಪ್ರತಿನಿಧಿಗಳ ಜತೆ ನಿರಂತರ ಸಂಪರ್ಕ ಇರಿಸಿಕೊಂಡಿದ್ದು, ಶಾಂತಿ ಮಾತುಕತೆಯನ್ನು ಮಂಗಳವಾರ ಆರಂಭಿಸುವ ಗುರಿಯನ್ನು ಹೊಂದಿದೆ ಎಂದು ಮೂಲಗಳು ತಿಳಿಸಿವೆ.

▶10

ದಿನದ ಬೆಳವಣಿಗೆ

- ಹೊರ್ಮುಜ್ ಜಲಸಂಧಿ 'ಅಂತರರಾಷ್ಟ್ರೀಯ ಹಡಗು ಮಾರ್ಗ' ಆಗಿದ್ದು, ಸಂಚಾರಕ್ಕೆ ಮುಕ್ತಗೊಳಿಸಬೇಕು ಎಂದು ಚೀನಾ ಹಾಗೂ ಬ್ರಿಟನ್ ಒತ್ತಾಯಿಸಿವೆ
- ಇರಾನ್ ಮೇಲೆ ದಾಳಿ ನಡೆಸುವಂತೆ ಇಸ್ರೇಲ್, ಅಮೆರಿಕದ ಮನವೊಲಿಸಿರಲಿಲ್ಲ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ
- ಇರಾನ್ ಜತೆ ನಂಟು ಹೊಂದಿರುವ ಆರೋಪದಲ್ಲಿ ಸಂಘಟನೆಯೊಂದರ ಕೆಲವು ಸದಸ್ಯರನ್ನು ಯುಎಇ ಪೊಲೀಸರು ಸೋಮವಾರ ಬಂಧಿಸಿದ್ದಾರೆ

ಹೊರ್ಮುಜ್: ನಿರ್ಬಂಧ ಮುಂದುವರಿಕೆ



ಹೊರ್ಮುಜ್‌ನಲ್ಲಿ ಹಡಗುಗಳ ಸಂಚಾರದ ಮೇಲೆ ಇರಾನ್ ಹೇರಿರುವ ನಿರ್ಬಂಧ ಮುಂದುವರಿದಿದೆ. ಸೋಮವಾರ ಮೂರು ಹಡಗುಗಳು ಮಾತ್ರ ಜಲಸಂಧಿಯನ್ನು ದಾಟಿವೆ ಎಂದು ಉಪಗ್ರಹಗಳ ನೆರವಿನಿಂದ ಹಡಗುಗಳ ಸಂಚಾರದ ದತ್ತಾಂಶ ವಿಶ್ಲೇಷಣೆ ಮಾಡುವ 'ಸಿನ್‌ಮ್ಯಾಕ್ಸ್' ತಿಳಿಸಿದೆ. ತನ್ನ ಬಂದರುಗಳ ಮೇಲೆ ಅಮೆರಿಕ ವಿಧಿಸಿರುವ ದಿಗ್ಬಂಧನಕ್ಕೆ ಪ್ರತಿಯಾಗಿ ಇರಾನ್ ಸೇನೆ ಹೊರ್ಮುಜ್ ಜಲಸಂಧಿಯನ್ನು ಶನಿವಾರದಿಂದ ಸಂಪೂರ್ಣ ಮುಚ್ಚಿದೆ.

'ಮುನೀರ್ ಸಲಹೆ ಪರಿಗಣಿಸಲಿರುವ ಟ್ರಂಪ್'



ಇಸ್ಲಾಮಾಬಾದ್: 'ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರು ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಶಾಂತಿ ಮಾತುಕತೆಗೆ ಅಡ್ಡಿಯಾಗಿರುವ ಹೊರ್ಮುಜ್ ಜಲಸಂಧಿಯ ಕುರಿತು ಮುನೀರ್ ಅವರ ಸಲಹೆಯನ್ನು ಪರಿಗಣಿಸುವುದಾಗಿ ಟ್ರಂಪ್ ಈ ಸಂದರ್ಭದಲ್ಲಿ ಹೇಳಿದ್ದಾರೆ' ಎಂದು ಪಾಕಿಸ್ತಾನದ ಸೇನಾ ಮೂಲಗಳು ಸೋಮವಾರ ಹೇಳಿವೆ.

ಪ್ರತಿರೋಧ ತೋರದ ಇರಾನ್ ಸೇನೆ

ಒಮಾನ್ ಕೊಲ್ಲಿಯಲ್ಲಿ ಸಂಚರಿಸುತ್ತಿದ್ದ ಇರಾನ್‌ನ ಹಡಗನ್ನು ಅಮೆರಿಕದ ನೌಕಾಪಡೆ ಯೋಧರು ತಮ್ಮ ವಶಕ್ಕೆ ತೆಗೆದುಕೊಳ್ಳುವಾಗ ಇರಾನ್ ಸೇನೆ ಯಾವುದೇ ಪ್ರತಿರೋಧ ಒಡ್ಡಲಿಲ್ಲ. ಅಮೆರಿಕದ ಸೈನಿಕರ ವಿರುದ್ಧ ಹೋರಾಡದೆ ಇರುವುದಕ್ಕೆ ಇರಾನ್ ಸೇನೆ ಮತ್ತು ಅರೆಸೇನಾ ಪಡೆಗಳ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡುವ 'ಖಾತಮ್ ಅಲ್ ಅಂಬಿಯಾ' ಕೇಂದ್ರ ಕಚೇರಿ ವಿವರಣೆ ನೀಡಿದೆ.

'ತೌಸ್ಕಾ' ಹೆಸರಿನ ಹಡಗಿನಲ್ಲಿ ಸಿಬ್ಬಂದಿಯ ಜತೆ ಅವರ ಕುಟುಂಬದ ಸದಸ್ಯರೂ ಇದ್ದ ಕಾರಣ ಇರಾನ್ ಸೇನೆ ಪ್ರತಿದಾಳಿ ನಡೆಸದೆ ಸಂಯಮ ವಹಿಸಿದೆ ಎಂದಿದೆ.

'ಹಡಗಿನ ಸಿಬ್ಬಂದಿಯ ಕೆಲವು ಕುಟುಂಬ ಸದಸ್ಯರು ಇದ್ದು, ಅವರ ಜೀವಕ್ಕೆ ಅಪಾಯ ಎದುರಾಗಬಹುದಿತ್ತು. ಅವರ ಸುರಕ್ಷತೆ ಖಾತರಿಪಡಿಸಿಕೊಳ್ಳುವುದು ಮುಖ್ಯವಾಗಿತ್ತು' ಎಂದು ಹೇಳಿದೆ. 'ಅಗತ್ಯ ಬಿದ್ದರೆ ಮುಂದಿನ ದಿನಗಳಲ್ಲಿ ಅಮೆರಿಕ ಸೇನೆ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಸಿದೆ.

ಬಿಟ್‌ಕಾಯಿನ್: ರೆಹಮಾನ್ ಖಾನ್ ಮೊಮ್ಮಗನೂ ಗುರಿ

ಹ್ಯಾರಿಸ್ ಮಕ್ಕಳಿಗೆ ಇ.ಡಿ ಬಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಹಗರಣದ ಪ್ರಮುಖ ಆರೋಪಿ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಜತೆ ಹಣಕಾಸು ವಹಿವಾಟು ನಡೆದಿದೆ ಎಂದು ಆರೋಪಿಸಲಾದ ಪ್ರಕರಣದಲ್ಲಿ ಕಾಂಗ್ರೆಸ್ ಶಾಸಕ ಎನ್‌.ಎ.ಹ್ಯಾರಿಸ್ ಅವರ ಮಕ್ಕಳು ಹಾಗೂ ಕೇಂದ್ರದ ಮಾಜಿ ಸಚಿವ, ಕಾಂಗ್ರೆಸ್ ನಾಯಕ ರೆಹಮಾನ್ ಖಾನ್ ಅವರ ಮೊಮ್ಮಗನ ನಿವಾಸವೂ ಸೇರಿ ಒಟ್ಟು 12 ಕಡೆ ಸೋಮವಾರ ಜಾರಿ ನಿರ್ದೇಶನಾಲಯ (ಇ.ಡಿ) ಶೋಧ ನಡೆಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷರೂ ಆಗಿರುವ ಎನ್‌.ಎ. ಹ್ಯಾರಿಸ್ ಅವರ ಮಕ್ಕಳಾದ ಕಾಂಗ್ರೆಸ್‌ನ ಯುವ ಮುಖಂಡ ಮೊಹಮ್ಮದ್ ನಲಪಾಡ್, ಒಮರ್ ಫಾರೂಕ್ ನಲಪಾಡ್ ಹಾಗೂ ಕೆ.ರೆಹಮಾನ್ ಖಾನ್ ಅವರ ಮೊಮ್ಮಗ ಅಕೀಬ್ ಖಾನ್ ಅವರ ಮನೆ, ಕಚೇರಿ ಮತ್ತು ಶ್ರೀಕಿ ನಿವಾಸದಲ್ಲೂ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ತಂಡ ಶೋಧ ನಡೆಸಿತು.

ಬೆಂಗಳೂರು ನಗರ ಸೇರಿ ರಾಜ್ಯದ ವಿವಿಧೆಡೆ ಏಕಕಾಲದಲ್ಲಿ ಶೋಧ ನಡೆದ ವೇಳೆ ಕೆಲವು ದಾಖಲೆಗಳು ಹಾಗೂ ಮೊಬೈಲ್, ಲ್ಯಾಪ್‌ಟಾಪ್ ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಯಿತು ಎಂದು ಇ.ಡಿ. ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) 2002ರಡಿ ನಡೆದ ತನಿಖೆಯಲ್ಲಿ, ಮೊಹಮ್ಮದ್ ನಲಪಾಡ್ ಮತ್ತು ಒಮರ್ ಫಾರೂಕ್ ನಲಪಾಡ್ ಅವರು ಶ್ರೀಕಿ ಅವರ ಆಪ್ತರು ಮತ್ತು ಅಕ್ರಮ ಹಣದ ಮುಖ್ಯ ಪಾಲುದಾರರು ಎಂಬುದು ಪತ್ತೆಯಾಗಿದೆ ಎಂದು ತನಿಖಾ ಸಂಸ್ಥೆ ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ ಭಾರಿ ಸುದ್ದಿಯಾಗಿದ್ದ ಬಹುಕೋಟಿ ಬಿಟ್‌ಕಾಯಿನ್ ಹಗರಣದ ಪ್ರಮುಖ ಆರೋಪಿ ಶ್ರೀಕಿ ಜೊತೆ ವ್ಯಾವಹಾರಿಕ ನಂಟು ಹೊಂದಿರುವ ಆರೋಪ ಮೊಹಮ್ಮದ್ ನಲಪಾಡ್ ವಿರುದ್ಧ ಕೇಳಿಬಂದಿತ್ತು.

▶6

ಶ್ರೀಕಿ–ನಲಪಾಡ್ ನಡುವೆ ಜಗಳ



ಮೊಹಮ್ಮದ್ ನಲಪಾಡ್

ಸ್ನೇಹಿತರಾಗಿದ್ದ ಶ್ರೀಕಿ ಮತ್ತು ಮೊಹಮದ್ ನಲಪಾಡ್ ಒಟ್ಟಿಗೆ ಪಾರ್ಟಿ ಮಾಡುತ್ತಿದ್ದರು. ಯು.ಬಿ. ಸಿಟಿಯ ಫರ್ಜಿ ಕ್ಲಬ್‌ನಲ್ಲಿ ನಡೆದ ಪಾರ್ಟಿ ವೇಳೆ ಇಬ್ಬರ ನಡುವೆ ಜಗಳವಾಗಿತ್ತು. ಆಗ ಜಗಳ ಬಿಡಿಸಲು ಬಂದ ವಿದ್ವತ್ ಲೋಕನಾಥ್ ಎಂಬವರ ಮೇಲೆ ಹಲ್ಲೆಯಾಗಿತ್ತು. ಈ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ನಂತರ ನಡೆದ ಸಿಸಿಬಿ ವಿಚಾರಣೆ ವೇಳೆ ಇಬ್ಬರ ನಡುವೆ ಬಿಟ್‌ಕಾಯಿನ್ ವಿಚಾರಕ್ಕೆ ಜಗಳವಾಗಿತ್ತು ಎಂಬುದು ಗೊತ್ತಾಯಿತು.

11 ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಬೆಂಗಳೂರು: ಕಲಬುರಗಿ, ಹಾಸನ, ಉಡುಪಿ ಸೇರಿದಂತೆ 11 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಏ.21ರಂದು ಗುಡುಗು ಸಹಿತ ಹಗುರ ಮಳೆಯಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬಡ್ತಿ ಪ್ರಕ್ರಿಯೆ ಇಂದು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಪ್ರಕ್ರಿಯೆ ಮಂಗಳವಾರ (ಏ.21) ಆರಂಭವಾಗಲಿದೆ.

ಜಿಲ್ಲಾ ಹಂತಗಳಲ್ಲಿ ಜ್ಯೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಪ್ರಕ್ರಿಯೆ ಆರಂಭಿಸಬೇಕು. ಅಂಗವಿಕಲ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ವರ್ಗಾವಣಾ ತಂತ್ರಾಂಶದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಅನುಗುಣವಾಗಿ ಬಡ್ತಿ ನೀಡಬೇಕು. ಸುಳ್ಳು ದಾಖಲೆ ಸಲ್ಲಿಸಿ ಬಡ್ತಿ ಪಡೆಯುವ ಪ್ರಕರಣಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕು. ಬಡ್ತಿ ನಿರಾಕರಿಸುವ ಶಿಕ್ಷಕರಿಂದ ಕಡ್ಡಾಯವಾಗಿ ಮುಚ್ಚಳಿಕೆ ಬರೆಯಿಸಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆದೇಶದಲ್ಲಿ ಹೇಳಿದೆ.

ಬಡ್ತಿಗೆ ಅರ್ಹರಾದವರ ಪಟ್ಟಿ ಪ್ರಕಟಿಸಿದ ನಂತರ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಬೇಕು. ಎಲ್ಲ ಪ್ರಕ್ರಿಯೆಗಳನ್ನೂ ಏ.29ರ ಒಳಗೆ ಮುಕ್ತಾಯ ಮಾಡಬೇಕು ಎಂದು ಸೂಚಿಸಲಾಗಿದೆ.

ಹೊಸ ಮಾರ್ಗಸೂಚಿ ಪ್ರಕಾರ ಮೂರು ಹುದ್ದೆಗಳಿದ್ದರೆ ಎರಡು ಹುದ್ದೆಗಳು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಒಂದು ಹುದ್ದೆ ಪದವೀಧರ ಪ್ರಾಥಮಿಕ ಶಿಕ್ಷಕರಿಗೆ ಮೀಸಲಾಗಿರುತ್ತದೆ. ಪದೋನ್ನತಿಗೆ ಪರಿಗಣಿಸಲು ಎರಡೂ ವೃಂದದ ಶಿಕ್ಷಕರು ಕನಿಷ್ಠ 12 ವರ್ಷಗಳ ಕೆಲಸ ಪೂರೈಸಿರಬೇಕು.

ಹಿಂದಿಗೆ ಅಂಕ, ಗ್ರೇಡ್: ಇಂದು ನಿರ್ಧಾರ

ಹಿಂದಿ ಸೇರಿದಂತೆ ಎಸ್‌ಎಸ್‌ಎಲ್‌ಸಿ ತೃತೀಯ ಭಾಷೆಗೆ ಅಂಕ ಅಥವಾ ಗ್ರೇಡ್ ನೀಡುವ ಕುರಿತು ಶಾಲಾ ಶಿಕ್ಷಣ ಇಲಾಖೆ ಮಂಗಳವಾರ (ಏ.21) ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದು, ಫಲಿತಾಂಶದ ದಿನಾಂಕವನ್ನೂ ಪ್ರಕಟಿಸುವ ಸಾಧ್ಯತೆ ಇದೆ.

ಉತ್ತರ ಪತ್ರಿಕೆಗಳನ್ನು ಹಿಂದಿನ ವರ್ಷಗಳಂತೆಯೇ ಮೌಲ್ಯಮಾಪನ ಮಾಡಬೇಕು. ಅಂಕಗಳನ್ನು ನೀಡಬೇಕು ಎಂಬ ಹೈಕೋರ್ಟ್ ನಿರ್ದೇಶನ ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯ ವಿಚಾರಣೆ 21ರಂದು ನಡೆಯಲಿದೆ. ಕೋರ್ಟ್ ನಿರ್ದೇಶನ ಪರಿಗಣಿಸಿ, ತೀರ್ಮಾನ ಪ್ರಕಟಿಸಲಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಮೂಲಗಳು ಹೇಳಿವೆ.

▶6

'ನ್ಯಾಯಮಂಡಳಿಗಳು ಕಾರ್ಯನಿರ್ವಹಿಸುತ್ತಿಲ್ಲ'

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ: 'ಪಶ್ಚಿಮ ಬಂಗಾಳಕ್ಕೆ ಸಂಬಂಧಿಸಿ ಎಸ್‌ಐಆರ್ ಬಳಿಕ ಪ್ರಕಟಿಸಿದ ಮತದಾರರ ಪಟ್ಟಿಯ ಕುರಿತ ಜನರ ಆಕ್ಷೇಪಣೆಗಳ ವಿಚಾರಣೆ ನಡೆಸಲು ನೀವೇ ರಚಿಸಿರುವ ನ್ಯಾಯಮಂಡಳಿಗಳು ನಿಮ್ಮ ಸೂಚನೆಯನ್ನೇ ಪಾಲಿಸುತ್ತಿಲ್ಲ. ಅವುಗಳು ಕೆಲಸ ಮಾಡುವುದನ್ನೇ ನಿಲ್ಲಿಸಿವೆ' ಎಂದು ವಕೀಲರೊಬ್ಬರು ಸೋಮವಾರ ಸುಪ್ರೀಂ ಕೋರ್ಟ್ ಗಮನಕ್ಕೆ ತಂದರು.

ವಕೀಲ ದೇವದತ್ತ ಕಾಮತ್ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠವು, 'ನ್ಯಾಯಮಂಡಳಿಗಳ ಕಾರ್ಯನಿರ್ವಹಣೆ ಕುರಿತು ಕೋಲ್ಕತ್ತ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಿಂದ ನಾವೇ ವರದಿ ತರಿಸಿಕೊಳ್ಳುತ್ತೇವೆ' ಎಂದಿತು.

'ಆಕ್ಷೇಪಣೆ ಸಲ್ಲಿಸಿದವರ ವಕೀಲರಿಗೆ ವಾದ ಮಂಡಿಸಲು ಅವಕಾಶವನ್ನೇ ನೀಡಲಾಗುತ್ತಿಲ್ಲ. ಜನರು ತಾವೇ ಖುದ್ದು ಬಂದು ಆಕ್ಷೇಪಣೆ ಸಲ್ಲಿಸಲೂ ಅವಕಾಶ ನೀಡುತ್ತಿಲ್ಲ' ಎಂದು ಕಾಮತ್ ಹೇಳಿದರು.

'ಸಾವಿರಾರು ಕಿ.ಮೀ ದೂರದಿಂದ ನ್ಯಾಯಮಂಡಳಿ ಮುಂದೆ ಬರುವ ಜನರಿಗೆ ತಮ್ಮ ವಾದ ಮಂಡಿಸಲು ಅವಕಾಶವನ್ನೇ ನೀಡಲಾಗುತ್ತಿಲ್ಲ. ಕೇವಲ ಆನ್‌ಲೈನ್ ಆಕ್ಷೇಪಣೆಗಳನ್ನು ಮಾತ್ರವೇ ಪರಿಗಣಿಸಲಾಗುತ್ತಿದೆ' ಎಂದು ದೂರಿದರು.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ದೂರುಗಳ ಕುರಿತು ಬೇಸರ ವ್ಯಕ್ತಪಡಿಸಿದರು. 'ಪಶ್ಚಿಮ ಬಂಗಾಳದಲ್ಲಿನ ಎಸ್‌ಐಆರ್‌ಗೆ ಸಂಬಂಧಿಸಿ ಪ್ರತಿನಿತ್ಯ ಒಂದಲ್ಲಾ ಒಂದು ದೂರುಗಳು ಬರುತ್ತಲೇ ಇವೆ, ಅರ್ಜಿಗಳು ಸಲ್ಲಿಕೆಯಾಗುತ್ತಲೇ ಇವೆ' ಎಂದರು.

ನ್ಯಾಯಮಂಡಳಿಗಳು ಯಾರ ಆಕ್ಷೇಪಣೆ ಇತ್ಯರ್ಥಪಡಿಸುತ್ತವೆಯೊ ಅವರಿಗೆ ಮತದಾನಕ್ಕೆ ಅವಕಾಶ ನೀಡಬೇಕು ಎಂದು ಕೇಂದ್ರ ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಸೂಚನೆ ನೀಡಿತ್ತು. ಆಯೋಗವು ಇತ್ತೀಚೆಗೆ ಮತದಾರರ ಪೂರಕ ಪಟ್ಟಿಯನ್ನು ಪ್ರಕಟಿಸಿತ್ತು ಮತ್ತು 7 ಲಕ್ಷ ಜನರನ್ನು ಪಟ್ಟಿಗೆ ಸೇರಿಸಿತ್ತು.

▶11

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

‘ಅಂಬೇಡ್ಕರ್ ವಿಚಾರಧಾರೆ ದೇಶಕ್ಕೆ ಆಧಾರ’

ಬೆಂಗಳೂರು: ‘ಭಾರತದ ಭವಿಷ್ಯ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳ ಮೇಲೆ ನಿಂತಿದೆ’ ಎಂದು ನಾಟಕಕಾರ ಕೆ.ವೈ. ನಾರಾಯಣಸ್ವಾಮಿ ಹೇಳಿದರು.

ಸರ್ಕಾರಿ ಕಲಾ ಕಾಲೇಜಿನಲ್ಲಿ ನಡೆದ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮದಲ್ಲಿಯೇ ಅಂಬೇಡ್ಕರ್ ಅವರ ವಿಚಾರಗಳನ್ನು ಮನಮುಟ್ಟುವಂತೆ ರೂಪಿಸಬೇಕು’ ಎಂದು ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಬಿ.ಸಿ. ನಾಗೇಂದ್ರಕುಮಾರ್ ಮಾತನಾಡಿ, ‘ಕೆ.ವೈ. ನಾರಾಯಣಸ್ವಾಮಿ ಅವರು ವರ್ಣ ಪಲ್ಲಟ ನಾಟಕದಲ್ಲಿ ಅಂಬೇಡ್ಕರರ ವಿಚಾರಧಾರೆಗಳನ್ನು ಕಲಾತ್ಮಕವಾಗಿ ಪ್ರಸ್ತುತಪಡಿಸಿದ್ದಾರೆ’ ಎಂದು ತಿಳಿಸಿದರು.



ಕೆ.ವೈ. ನಾರಾಯಣಸ್ವಾಮಿ, ಸುಮಾ ಡಿ., ನಾಜಿಯ ಒಬೇದ್, ಚಲುವರಾಜು, ಬಿ.ಸಿ. ನಾಗೇಂದ್ರಕುಮಾರ್, ನಾಗೇಶ ಜಿ., ನಾರಾಯಣ ಎಚ್.ಜಿ. ಅವರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು

ಅನಾವರಣ ತಂಡ ಶಶಿಧರ್ ಭಾರಿಘಾಟ್‌ನ ನಿರ್ದೇಶನದಲ್ಲಿ ಕೆ.ವೈ. ನಾರಾಯಣಸ್ವಾಮಿ ಅವರು ರಚಿಸಿದ ವರ್ಣ ಪಲ್ಲಟ ನಾಟಕವನ್ನು ಪ್ರಸ್ತುತಪಡಿಸಿದರು.

ಕಾಲೇಜಿನ ಕನ್ನಡ ಸಂಘದ ಸಂಚಾಲಕ ರುದ್ರೇಶ್ ಅದರಂಗಿ, ಅಂಬೇಡ್ಕರ್ ಅಧ್ಯಯನ ಕೇಂದ್ರದ ಸಂಚಾಲಕ ಚಲುವರಾಜು, ಐಕ್ಯುಎಸಿ ಸಂಚಾಲಕ ನಾಗೇಶ ಜಿ., ಕೆಜಿಸಿಟಿಎ ಕಾರ್ಯದರ್ಶಿ ನಾರಾಯಣ ಎಚ್.ಜಿ., ಅಧ್ಯಾಪಕರಾದ ನಾಜಿಯ ಒಬೇದ್, ಸುಮಾ ಡಿ. ಉಪಸ್ಥಿತರಿದ್ದರು.

ಕೊಳಚೆ ನೀರಿನಿಂದ ಅನಿಲ ಉತ್ಪಾದನೆ

ಬೆಂಗಳೂರು ಜಲಮಂಡಳಿಯಿಂದ ಪಿಪಿಪಿ ಮಾದರಿಯ ಯೋಜನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ₹85 ಕೋಟಿ ವೆಚ್ಚದಲ್ಲಿ ಯೋಜನೆ ಅನುಷ್ಠಾನ
- 550 ಎಂಎಲ್‌ಡಿ ತ್ಯಾಜ್ಯ ನೀರು ಬಳಕೆ
- ₹120 ಕೋಟಿ ಹೆಚ್ಚುವರಿ ಆದಾಯ ನಿರೀಕ್ಷೆ

ಬೆಂಗಳೂರು: ಕೊಳಚೆ ನೀರಿನ ತ್ಯಾಜ್ಯದಿಂದ ಅನಿಲ ಉತ್ಪಾದನೆ ಮಾಡುವ ಮೂಲಕ ಆದಾಯ ಗಳಿಸಲು ಬೆಂಗಳೂರು ಜಲಮಂಡಳಿ ಮುಂದಾಗಿದೆ.

ತನ್ನ ಐದು ಪ್ರಮುಖ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ ಉತ್ಪತ್ತಿಯಾಗುವ ಕಚ್ಚಾ ಜೈವಿಕ ಅನಿಲವನ್ನು ಹೆಚ್ಚಿನ ಮೌಲ್ಯದ ಕಂಪ್ರೆಸ್ಡ್ ಬಯೋ-ಗ್ಯಾಸ್ ಆಗಿ ಮೇಲ್ದರ್ಜೆಗೇರಿಸುವ ಮೂಲಕ, ಮಂಡಳಿಯು ಮುಂದಿನ ಎರಡು ದಶಕದಲ್ಲಿ ಅಂದಾಜು ₹120 ಕೋಟಿ ಹೆಚ್ಚುವರಿ ಆದಾಯವನ್ನು ಗಳಿಸುವ ಗುರಿ ಇಟ್ಟುಕೊಂಡಿದೆ.

ಸೂರತ್ ನಗರದಲ್ಲಿ ಕೇವಲ 120 ಎಂಎಲ್‌ಡಿ ಸಾಮರ್ಥ್ಯದ ನೀರಿನ ಬಳಕೆಯೊಂದಿಗೆ ಇಂತಹ ಯೋಜನೆಯನ್ನು ಕಾರ್ಯಗತಗೊಳಿಸಿದ್ದರೆ, ಜಲಮಂಡಳಿ 550 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರಿನ ಬಳಕೆಯೊಂದಿಗೆ ಈ ಬೃಹತ್ ಯೋಜನೆ ಅನುಷ್ಠಾನಗೊಳಿಸುತ್ತಿದೆ.

ಪ್ರಸ್ತುತ, ಈ ಎಸ್‌ಟಿಪಿಗಳಲ್ಲಿ ಉತ್ಪತ್ತಿಯಾಗುವ ಜೈವಿಕ ಅನಿಲವನ್ನು ಸ್ಥಳೀಯ ವಿದ್ಯುತ್ ಉತ್ಪಾದನೆಗೆ ಬಳಸಲಾಗುತ್ತಿದೆ. ಒಂದು ಘಟಕದಲ್ಲಿ ಮಾತ್ರ ಸುಟ್ಟು ಹಾಕಲಾಗುತ್ತಿದೆ. ಈ ಯೋಜನೆಯು ಕಚ್ಚಾ ಜೈವಿಕ ಅನಿಲವನ್ನು ನಗರ ಅನಿಲ ವಿತರಣಾ ಜಾಲಕ್ಕೆ ಪೂರೈಸಲು ಅಥವಾ ಶುದ್ಧ ಸಾರಿಗೆ ಇಂಧನವಾಗಿ ಬಳಸಲು ರಾಷ್ಟ್ರೀಯ ಮಾನದಂಡಗಳನ್ನು ಪೂರೈಸುವ ಸಿಬಿಜಿ ಆಗಿ ಉನ್ನತೀಕರಿಸಲು ಉದ್ದೇಶಿಸಿದೆ.



ಬೆಂಗಳೂರು ಜಲಮಂಡಳಿ ನಿರ್ವಹಿಸುತ್ತಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕ

ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಖಾಸಗಿ ಪಾಲುದಾರರು ಸಂಪೂರ್ಣ ₹85 ಕೋಟಿ ಬಂಡವಾಳ ವೆಚ್ಚದ ಜತೆಗೆ ಎಲ್ಲಾ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳನ್ನು ಭರಿಸಲಿದ್ದಾರೆ. ಮಂಡಳಿಯು ಯೋಜನಾ ಕಾರ್ಯಾಚರಣೆಗಳಿಗಾಗಿ ಎಸ್‌ಟಿಪಿ ಆವರಣದಲ್ಲಿ ಸುಮಾರು 13,000 ಚದರ ಅಡಿ ಜಾಗವನ್ನು ಒದಗಿಸಲಿದ್ದು, ಜಮೀನಿನ ಮಾಲೀಕತ್ವ ಜಲಮಂಡಳಿಯದ್ದೇ ಆಗಿರಲಿದೆ.

ಇದಲ್ಲದೆ, ಈ ಸಾಮರ್ಥ್ಯ ಗರಿಷ್ಠಗೊಳಿಸಲು, ನಗರದಾದ್ಯಂತ ಎಸ್‌ಟಿಪಿಗಳಲ್ಲಿ ಬಯೋ ಡೈಜೆಸ್ಟರ್‌ಗಳಿವೆಯೋ ಅಲ್ಲೆಲ್ಲ ಈ ಅತ್ಯಾಧುನಿಕ ಯೋಜನೆಯನ್ನು ವಿಸ್ತರಿಸಿ ಅಗತ್ಯ ಇರುವ ಕಡೆ ಸ್ಥಾಪಿಸಲು ಜಲಮಂಡಳಿ ಅಧ್ಯಕ್ಷರು ಸೂಚನೆ ನೀಡಿದ್ದಾರೆ.

‘ತ್ಯಾಜ್ಯವನ್ನು ಸಂಪತ್ತಿನ ಬೃಹತ್ ಮೂಲವಾಗಿ ಪರಿವರ್ತಿಸುತ್ತಿದ್ದೇವೆ. ದೇಶದಲ್ಲೇ ತನ್ನದೇ ಮಾದರಿಯ ಮೊದಲ ಮತ್ತು ಅತಿದೊಡ್ಡ ಯೋಜನೆ ಆಗಿರುವುದರಿಂದ ಇದೊಂದು ಐತಿಹಾಸಿಕ ಮೈಲಿಗಲ್ಲು’ ಎಂದು ಜಲಮಂಡಳಿ ಅಧ್ಯಕ್ಷ ಡಾ. ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಕಸ: ಮಾನವ ಸರಪಳಿ ನಿರ್ಮಿಸಿ ಜಾಗೃತಿ



ಅಪಾರ್ಟ್‌ಮೆಂಟ್ ನಿವಾಸಿಗಳು ಕ್ಯಾಲಸನಹಳ್ಳಿಯಲ್ಲಿ ಮಾನವ ಸರಪಳಿ ನಿರ್ಮಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಕೆ.ಆರ್.ಪುರ: ಎಲ್ಲೆಂದರಲ್ಲಿ ಕಸ ಸುರಿಯಬಾರದು, ಮನೆ ಮುಂದೆ ವಾಹನಗಳು ಬಂದಾಗ ಕಸ ನೀಡುವ ಮೂಲಕ ನೈರ್ಮಲ್ಯ ಕಾಪಾಡಬೇಕು ಎಂದು ಅಪಾರ್ಟ್‌ಮೆಂಟ್ ನಿವಾಸಿಗಳು ಕ್ಯಾಲಸನಹಳ್ಳಿಯಲ್ಲಿ ಮಾನವ ಸರಪಳಿ ನಿರ್ಮಿಸಿ ಜಾಗೃತಿ ಮೂಡಿಸಿದರು.

ಪೂರ್ವ ಫಾಮ್ ಬೀಚ್ ಅಪಾರ್ಟ್‌ಮೆಂಟ್, ಭೂ ಆಭರಣ ಅಪಾರ್ಟ್‌ಮೆಂಟ್, ಬಿ.ಹನುಮಂತನಗರ ಬಡಾವಣೆ ಹಾಗೂ ಆಶಾ ಟೌನ್‌ಶಿಪ್ ನಿವಾಸಿಗಳು ಭಾನುವಾರ ಭಿತ್ತಿಪತ್ರ ಹಿಡಿದು ಅರಿವು ಮೂಡಿಸಿದರು.

‘ಎಲ್ಲುಸ್ ರಸ್ತೆ, ಕ್ಯಾಲಸನಹಳ್ಳಿ ರಸ್ತೆ, ಹನುಮಂತಪ್ಪ ಬಡಾವಣೆ, ಹೆಣ್ಣೂರು ರಸ್ತೆಗಳಲ್ಲಿ ವಾಹನಗಳಲ್ಲಿ ಬಂದು ರಸ್ತೆ ಬದಿಗೆ ಕಸ ಎಸೆಯಲಾಗುತ್ತಿದೆ. ಅಂಗಡಿ, ಬೇಕರಿ, ಮಾಂಸದ ತ್ಯಾಜ್ಯವನ್ನು ರಾತ್ರೋರಾತ್ರಿ ಸುರಿಯುತ್ತಿದ್ದಾರೆ. ಪೌರ ಕಾರ್ಮಿಕರು ನಿತ್ಯ ಸ್ವಚ್ಛಗೊಳಿಸುವಂತಾಗಿದೆ’ ಎಂದು ಸ್ಥಳೀಯ ಎ.ರಾಘವೇಂದ್ರ ಆಕ್ರೋಶ ಹೊರಹಾಕಿದರು.

‘ಎಲ್ಲೆಂದರಲ್ಲಿ ಕಸ ಎಸೆಯದೆ. ಒಣ, ಹಸಿ ಕಸ ಬೇರ್ಪಡಿಸಿ ಕಸದ ವಾಹನಗಳಿಗೆ ನೀಡಿ ಸ್ವಚ್ಛತೆಗೆ ಆದ್ಯತೆ ನೀಡಬೇಕು’ ಎಂದು ಬಿ.ಹನುಮಂತನಗರ ಬಡಾವಣೆ ನಿವಾಸಿ ಭಾರತಿ ಹೇಳಿದರು.

ಮಾಸ್ಟರ್ ಪ್ಲಾನ್: ಸಲಹೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಬಿಎ ವ್ಯಾಪ್ತಿ ಹೊರತುಪಡಿಸಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು(ಬಿಡಿಎ) ‘ಪರಿಷ್ಕೃತ ಮಾಸ್ಟರ್ ಪ್ಲ್ಯಾನ್ 2041 (ಮಹಾ ಯೋಜನೆ)’ ಸಿದ್ಧಪಡಿಸಲು ಮುಂದಾಗಿದ್ದು, ಸಾರ್ವಜನಿಕರಿಂದ ಸಲಹೆಗಳನ್ನು ಆಹ್ವಾನಿಸಿದೆ.

ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿರುವ ಒಟ್ಟು 242 ಹಳ್ಳಿಗಳನ್ನು ಒಳಗೊಂಡಂತೆ ಮಹಾ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆ ಆರಂಭಿಸಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ -1961ರ ಕಲಂ 10ರ ಅಡಿಯಲ್ಲಿ ಸರ್ಕಾರ ನೀಡಿರುವ ಅಧಿಸೂಚನೆ ಅನ್ವಯ ಮಹಾ ಯೋಜನೆ ಸಿದ್ಧಪಡಿಸಲಾಗುತ್ತಿದೆ.

ಯೋಜನೆಯ ಕುರಿತು ಸಾರ್ವಜನಿಕರು ತಮ್ಮ ಅಭಿಪ್ರಾಯ, ಸಲಹೆಗಳನ್ನು ಲಿಖಿತ ರೂಪದಲ್ಲಿ ಸಲ್ಲಿಸಲು ಅವಕಾಶ ಎರಡು ತಿಂಗಳುಗಳವರೆಗೂ (ಜೂನ್ 6ರವರೆಗೆ) ಕಾಲಾವಕಾಶವನ್ನು ಕಲ್ಪಿಸಲಾಗಿದೆ.

ನಗರ ಯೋಜನಾ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರ ಯೋಜನಾ ವಿಭಾಗ, ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು -560020 ಈ ವಿಳಾಸಕ್ಕೆ ನೇರವಾಗಿ/ ಅಂಚೆ ಮೂಲಕ ಅಥವಾ ಇಮೇಲ್ bda_rmp2041@ka.gov.in ಸಲಹೆಗಳನ್ನು ಕಳುಹಿಸಲು ಅವಕಾಶ ನೀಡಿದೆ.

ಮಾಹಿತಿಗೆ ಬಿಡಿಎ ಸಹಾಯವಾಣಿ ಸಂಖ್ಯೆ 9483166622 ಸಂಪರ್ಕಿಸಬಹುದು.

ನದಿಯಲ್ಲಿ ಮುಳುಗಿ ಯುವಕ ಸಾವು



ಎನ್. ಶ್ರೇಯಸ್

ಹಲಗೂರು: ಸಮೀಪದ ಮುತ್ತತ್ತಿಯಲ್ಲಿ ಸೋಮವಾರ ಮಧ್ಯಾಹ್ನ ಕಾವೇರಿ ನದಿಯಲ್ಲಿ ಈಜಾಡುತ್ತಿದ್ದ ಎನ್. ಶ್ರೇಯಸ್ (19) ಅವರು ನೀರಿನ ಸೆಳೆತಕ್ಕೆ ಸಿಲುಕಿ ಮೃತಪಟ್ಟರು. ಅವರು ಬೆಂಗಳೂರಿನ ಬೊಮ್ಮನಹಳ್ಳಿ ವಾರ್ಡ್ ನಿವಾಸಿ ನಿಂಗೇಗೌಡ ಅವರ ಪುತ್ರ.

ಜಯನಗರದ ಎಸ್.ಎಸ್.ಆರ್.ಎಂ.ವಿ ಕಾಲೇಜಿನಲ್ಲಿ ಮೊದಲ ವರ್ಷದ ಬಿ.ಕಾಂ. ವಿದ್ಯಾರ್ಥಿಯಾಗಿದ್ದ ಅವರು ಐವರು ಸ್ನೇಹಿತರೊಡನೆ ಹಲಗೂರು ಸಮೀಪದ ಬೆನಮನಹಳ್ಳಿಯ ಸ್ನೇಹಿತ ಚೇತನ್ ಅವರ ಗೃಹ ಪ್ರವೇಶ ಕಾರ್ಯಕ್ರಮಕ್ಕೆ ಬಂದಿದ್ದರು. ಕಾರ್ಯಕ್ರಮ ಮುಗಿಸಿದ ನಂತರ ಮುತ್ತತ್ತಿಗೆ ತೆರಳಿದಾಗ ದುರ್ಘಟನೆ ನಡೆಯಿತು. ಪ್ರಕರಣ ದಾಖಲಾಗಿದೆ.

ಮದ್ಯ ಸೇವಿಸಿ ವಾಹನ ಚಾಲನೆ: 623 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ 53 ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 623 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಏಪ್ರಿಲ್ 13ರಿಂದ 19ರವರೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ವಿವಿಧ ಮಾದರಿಯ 46,844 ವಾಹನಗಳನ್ನು ತಪಾಸಣೆಗೆ ಒಳಪಡಿಸಲಾಯಿತು. ಆ ಪೈಕಿ 623 ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ.

ಅತಿವೇಗದಿಂದ ವಾಹನ ಚಲಾಯಿಸುವವರ ವಿರುದ್ಧ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ 150 ಪ್ರಕರಣ ದಾಖಲು ಮಾಡಿಕೊಂಡು ₹1.51 ಲಕ್ಷ ದಂಡ ವಿಧಿಸಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಮದ್ಯಪಾನ ಮಾಡಿ ವಾಹನ ಚಲಾಯಿಸುವ ಹಾಗೂ ಅತಿವೇಗವಾಗಿ ವಾಹನ ಚಲಾಯಿಸುವವರ ಹಾವಳಿ ತಡೆಗಟ್ಟಲು, ರಸ್ತೆ ಸುರಕ್ಷತೆಗಾಗಿ ಇಂತಹ ಕಾರ್ಯಾಚರಣೆಯನ್ನು ಮುಂದಿನ ದಿನಗಳಲ್ಲಿಯೂ ಹಮ್ಮಿಕೊಳ್ಳಲಾಗುವುದು ಎಂದು ಸಂಚಾರ ಪೊಲೀಸರು ಹೇಳಿದರು.

ಜೆಇಇ: ಚೈತನ್ಯ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಉತ್ತಮ ಸಾಧನೆ

ಪ್ರಜಾವಾಣಿ ವಾರ್ತೆ


ಆದಿತ್ಯ ಸಿಂಗ್


ರಾಮ್ ನಿಖಿಲ್


ತನ್ಮಯ್


ಸುಧನ್ವನ್

ಬೆಂಗಳೂರು: ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸಿದ 2026ನೇ ಸಾಲಿನ ಜೆಇಇ (ಮೇನ್) ಪರೀಕ್ಷೆಯಲ್ಲಿ ರಾಜ್ಯದ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಆದಿತ್ಯ ಸಿಂಗ್ (87ನೇ ರ‍್ಯಾಂಕ್), ರಾಮ್ ನಿಖಿಲ್ ಪುವಾದಿ (135ನೇ ರ‍್ಯಾಂಕ್), ಎಚ್.ಜಿ.ತನ್ಮಯ್ (381ನೇ ರ‍್ಯಾಂಕ್), ಸುಧನ್ವನ್ (497ನೇ ರ‍್ಯಾಂಕ್) ಗಳಿಸಿದ್ದಾರೆ.

ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಸುಷ್ಮಾ ಬೋಪಣ್ಣ ಅವರು ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದು, ಅವರ ಕಠಿಣ ಪರಿಶ್ರಮದ ಬಗ್ಗೆ ಹೆಮ್ಮೆ ಇದೆ ಎಂದಿದ್ದಾರೆ.

ವಿಲೇವಾರಿಯಲ್ಲಿ ನಿರ್ಲಕ್ಷ್ಯ: ನಗರದಲ್ಲಿ ಕಸದ ದುರ್ನಾತ

ಗುತ್ತಿಗೆದಾರರು– ಅಧಿಕಾರಿಗಳ ನಡುವೆ ಸಂಘರ್ಷ • ತ್ಯಾಜ್ಯ ಸಂಗ್ರಹ ಅಸ್ತವ್ಯಸ್ತ • ವ್ಯವಸ್ಥೆ ಹಾದಿಗೆ ತರಲು ಹಿರಿಯ ಅಧಿಕಾರಿಗಳು ವಿಫಲ

• ಆರ್. ಮಂಜುನಾಥ್

ಬೆಂಗಳೂರು: ಕಸ ಸಂಗ್ರಹ– ವಿಲೇವಾರಿಯಲ್ಲಿ ಗುತ್ತಿಗೆದಾರರು ಹಾಗೂ ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳ ನಡುವಿನ ಸಂಘರ್ಷದಿಂದ ನಗರದ ಹಲವು ಪ್ರದೇಶ ಹಾಗೂ ರಸ್ತೆಗಳಲ್ಲಿ ತ್ಯಾಜ್ಯ ದುರ್ನಾತ ಬೀರುತ್ತಿದೆ.

‘ನಿಯಮಗಳನ್ನು ಮೀರಿ ತ್ಯಾಜ್ಯ ವಿಲೇವಾರಿ ಮಾಡಿಸುತ್ತಿದ್ದಾರೆ’ ಎಂಬ ದೂರು ಗುತ್ತಿಗೆದಾರರದ್ದು. ‘ನಿಯಮದಲ್ಲಿ ಇಲ್ಲದ್ದನ್ನು ನಾವು ಮಾಡಲು ಹೇಳುತ್ತಿಲ್ಲ. ಮನೆಗಳಿಂದ ಕಸ ಸಂಗ್ರಹಿಸುವುದು ಅವರ ಕರ್ತವ್ಯ’ ಎಂದು ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಹೇಳುತ್ತಾರೆ. ಈ ರೀತಿಯ ಆರೋಪ– ಪ್ರತ್ಯಾರೋಪಗಳಿಂದ ಹಲವು ಪ್ರದೇಶಗಳಲ್ಲಿ ಕಸ ಸಂಗ್ರಹವಾಗುತ್ತಿಲ್ಲ, ಪ್ರಮುಖ ರಸ್ತೆಗಳಲ್ಲಿ ತ್ಯಾಜ್ಯ ರಾಶಿಯಾಗುತ್ತಿದೆ.

‘ತ್ಯಾಜ್ಯ ವಿಲೇವಾರಿ ‘ಸರಬರಾಜು ಕಾರ್ಯಾದೇಶ’ವನ್ನು ಉಲ್ಲಂಘಿಸಿ, ರಸ್ತೆಯಲ್ಲಿರುವ ಕಸವನ್ನು ವಿಂಗಡಿಸುವ ಕೆಲಸಕ್ಕೆ ಕಾರ್ಮಿಕರನ್ನು ಬಳಸಿಕೊಂಡು ಶೋಷಣೆ ಮಾಡಲಾಗುತ್ತಿದೆ’ ಎಂದು ಆರೋಪಿಸಿ ಮಾರ್ಚ್ 23ರಿಂದ ತ್ಯಾಜ್ಯ ವಿಲೇವಾರಿಯನ್ನು ಗುತ್ತಿಗೆದಾರರು ಸ್ಥಗಿತಗೊಳಿಸಿದ್ದರು. ಕಸ ವಿಲೇವಾರಿಯನ್ನು ಅತ್ಯಗತ್ಯ ಸೇವೆ ಎಂದು ಪರಿಗಣಿಸಿ ‘ಎಸ್ಮಾ’ ಕಾಯ್ದೆಯಡಿ ಬಿಎಸ್‌ಡಬ್ಲ್ಯುಎಂಎಲ್ ಜಾರಿಗೆ ತಂದಿತ್ತು. ಇದಾದ ಬಳಿಕ ಕೆಲವು ಗುತ್ತಿಗೆದಾರರ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿ, ಎಫ್‌ಐಆರ್ ಸಹ ದಾಖಲಾಗಿತ್ತು. ಗುತ್ತಿಗೆದಾರರು ತಪ್ಪೊಪ್ಪಿಗೆ ಪತ್ರ ನೀಡಿ, ಮತ್ತೆ ಕೆಲಸ ಆರಂಭಿಸಿದ್ದರು.

‘ಗುತ್ತಿಗೆದಾರರು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ’ ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ಹೇಳಿದ್ದರು. ಇದಾದ ನಂತರ, ಗುತ್ತಿಗೆದಾರರೊಂದಿಗೆ ಮಾರ್ಚ್ 26ರಂದು ಸಭೆ ನಡೆಸಿದ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ಎಲ್ಲವೂ ಸರಿಯಾಗಿದೆ. ಎರಡು ತಿಂಗಳು ಬಿಲ್ ಕೂಡ ಪಾವತಿಸಲಾಗಿದೆ. ಇನ್ನು ಸಮಸ್ಯೆ ಇರುವುದಿಲ್ಲ ಎಂದು ಹೇಳಿದ್ದರು. ಆದರೆ, ಅಂದಿನಿಂದ ಸಮಸ್ಯೆ ಮತ್ತೊಂದು ರೀತಿಯಲ್ಲಿ ಪ್ರಾರಂಭವಾಗಿದ್ದು, ನಗರದಲ್ಲಿ ಕಸ ರಾಶಿ ಬೀಳುತ್ತಿದೆ.

‘ಘನತ್ಯಾಜ್ಯ ವಿಲೇವಾರಿ ನಿಯಮ 2000 ಮತ್ತು 2016ರಂತೆ ಮನೆಗಳಿಂದ ಒಣಕಸ ಹಾಗೂ ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಗುತ್ತಿಗೆ ನೀಡಲಾಗಿದೆ. ಅವರು ಮಿಶ್ರ ಕಸ ಸಂಗ್ರಹಿಸಿ, ರಸ್ತೆಯಲ್ಲಿ ವಿಂಗಡಿಸಿದರೆ ನಾವು ಏನು ಮಾಡಲು ಸಾಧ್ಯ? ರಸ್ತೆಯಲ್ಲಿ ಕಸ ವಿಂಗಡಿಸುವಂತೆ ನಾವು ಒತ್ತಾಯಿಸುತ್ತಿಲ್ಲ’ ಎಂದು ಕರೀಗೌಡ ಹೇಳಿದರೆ, ಕೆಲಸ ನಿರ್ವಹಿಸುತ್ತಿದ್ದೇವೆ ಎಂದು ಗುತ್ತಿಗೆದಾರರು ಹೇಳುತ್ತಿದ್ದಾರೆ. ಆದರೆ, ನಗರದ ರಸ್ತೆಗಳಲ್ಲಿರುವ ‘ಬ್ಲ್ಯಾಕ್ ಸ್ಪಾಟ್’ಗಳಿಂದ ತ್ಯಾಜ್ಯ ವಿಲೇವಾರಿ ಆಗುತ್ತಿಲ್ಲ.

ಮೌಖಿಕ ನಿಯಮ: ‘ಒಂದು ದಿನ ಹಸಿ, ಒಂದು ದಿನ ಒಣ, ಇನ್ನೊಂದು ದಿನ ವೈಯಕ್ತಿಕ ನೈರ್ಮಲ್ಯ ತ್ಯಾಜ್ಯ ಸಂಗ್ರಹಿಸುವಂತೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳು ನಮ್ಮ ಕಾರ್ಮಿಕರಿಗೆ ಮೌಖಿಕವಾಗಿ ಸೂಚಿಸುತ್ತಿದ್ದಾರೆ. ಅವರು ಹೇಳಿದಂತೆ ಕೆಲಸ ಮಾಡುತ್ತಿದ್ದೇವೆ. ಹೀಗಾಗಿ ಸಮಸ್ಯೆ ಉದ್ಭವಿಸಿದೆ’ ಎಂದು ಗುತ್ತಿಗೆದಾರರು ತಿಳಿಸಿದರು.

‘ನಗರದಲ್ಲಿ ಒಂದು ದಿನಕ್ಕೆ ಸುಮಾರು ಆರು ಸಾವಿರ ಟನ್ ಕಸ ಸಂಗ್ರಹವಾಗುತ್ತದೆ. ಇದರಲ್ಲಿ ಅರ್ಧದಷ್ಟು ಹಸಿ ಕಸವಾಗಿದೆ. ಕಸ ವಿಂಗಡಣೆಯಲ್ಲಿ ಶೇ 50ರಷ್ಟು ಯಶಸ್ಸು ಸಾಧ್ಯವಿಲ್ಲ. ಹೀಗಾಗಿ ಮಿಶ್ರತ್ಯಾಜ್ಯವೇ ಅಧಿಕವಾಗಿದೆ. ಇದನ್ನು ಭೂಭರ್ತಿ ಪ್ರದೇಶಗಳಿಗೆ ಸಾಗಿಸಬೇಕು. ಅಲ್ಲಿಗೆ ಹೋಗುವ ಲಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಿರುವುದರಿಂದ, ಆ ಕಸವೆಲ್ಲ ನಗರದ ರಸ್ತೆಗಳಲ್ಲಿದೆ. ಅಧಿಕಾರಿಗಳ ನಿರ್ಲಕ್ಷ್ಯ, ಬೇಜವಾಬ್ದಾರಿತನದ ವರ್ತನೆಯಿಂದ ಕಸದ ಸಮಸ್ಯೆ ಉಂಟಾಗಿದೆ’ ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ದೂರಿದರು.

‘ಹಿರಿಯ ಅಧಿಕಾರಿಗಳು ಏನು ಹೇಳುತ್ತಾರೋ ನಾವು ಅದನ್ನು ಪಾಲಿಸಬೇಕು. ಗುತ್ತಿಗೆದಾರರು ಒದಗಿಸುವ ಕಾರ್ಮಿಕರಿಂದ ಕೆಲಸವನ್ನು ಮಾಡಿಸುತ್ತಿದ್ದೇವೆ. ರಸ್ತೆಯಲ್ಲಿರುವ ಕಸ ತೆಗೆಯುವುದಿಲ್ಲ ಎನ್ನುತ್ತಿದ್ದಾರೆ. ಹೀಗಾಗಿ, ಸಮಸ್ಯೆ ಉಂಟಾಗಿದೆ’ ಎಂದು ಬಿಎಸ್‌ಡಬ್ಲ್ಯುಎಂಎಲ್ ಉಪ ಪ್ರಧಾನ ವ್ಯವಸ್ಥಾಪಕರು ಹೇಳಿದರು.

ಗುತ್ತಿಗೆದಾರರ ಕರಾರು ರದ್ದು

ಗೋವಿಂದರಾಜನಗರ ವಿಭಾಗದಲ್ಲಿ ತ್ಯಾಜ್ಯ ವಿಲೇವಾರಿ ಗುತ್ತಿಗೆದಾರರಿಗೆ 2023ರಲ್ಲಿ ನೀಡಲಾಗಿದ್ದ ಮೂರು ನೋಟಿಸ್ ಆಧಾರದಲ್ಲಿ ಅವರ ಗುತ್ತಿಗೆಯನ್ನು 2026ರ ಏಪ್ರಿಲ್ 18ರಂದು ಮುಕ್ತಾಯಗೊಳಿಸಿ ಪಶ್ಚಿಮ ನಗರ ಪಾಲಿಕೆಯ ಬಿಎಸ್‌ಡಬ್ಲ್ಯುಎಂಎಲ್ ಉಪ ಪ್ರಧಾನ ವ್ಯವಸ್ಥಾಪಕರು ಆದೇಶ ಹೊರಡಿಸಿದ್ದಾರೆ.

2023ರ ಜೂನ್, ಜುಲೈ, ಆಗಸ್ಟ್‌ನಲ್ಲಿ ನೀಡಲಾಗಿದ್ದ ನೋಟಿಸ್ ಅನ್ನು ಪ್ರಸ್ತಾಪಿಸಿ, ನ್ಯೂನತೆಗಳನ್ನು ಗುತ್ತಿಗೆದಾರರು ಸರಿಪಡಿಸಿಕೊಂಡಿಲ್ಲ. ಅಸಮರ್ಪಕವಾಗಿ ತ್ಯಾಜ್ಯ ನಿರ್ವಹಣೆಯನ್ನು ಮುಂದುವರಿಸುತ್ತಿದ್ದೀರಿ. ಹೀಗಾಗಿ ಕರಾರು ಒಪ್ಪಂದ ಮತ್ತು ಉಲ್ಲೇಖದಂತೆ 2020ರ ಡಿಸೆಂಬರ್ 12ರಂದು ನೀಡಲಾಗಿದ್ದ ಕಾರ್ಯಾದೇಶ ರದ್ದುಗೊಳಿಸಲಾಗಿದೆ ಎಂದು ತಿಳಿಸಲಾಗಿದೆ.

ತ್ಯಾಜ್ಯ ಸಂಗ್ರಹ, ಸಾಗಣೆಯಲ್ಲಿ ದೂರುಗಳು ಬಂದಿದ್ದರೂ ಕ್ರಮ ಕೈಗೊಂಡಿಲ್ಲ. ಆಟೊ ಟಿಪ್ಪರ್‌ಗಳಿಗೆ ಧ್ವನಿವರ್ಧಕ ಅಳವಡಿಸಿಲ್ಲ, ಸಾರ್ವಜನಿಕರಲ್ಲಿ ಮಾಹಿತಿ ಪ್ರಚಾರ ಪಡಿಸುತ್ತಿಲ್ಲ, ಆಟೊ ಚಾಲಕರು ಮತ್ತು ಸಹಾಯಕರಿಗೆ ಸಮವಸ್ತ್ರ, ಸುರಕ್ಷಾ ದಿರಿಸು ನೀಡಿಲ್ಲ. ಜಿಪಿಎಸ್ ಮ್ಯಾಪಿಂಗ್‌ನಂತೆ ತ್ಯಾಜ್ಯ ಸಂಗ್ರಹಿಸುತ್ತಿಲ್ಲ. ಬ್ಲ್ಯಾಕ್ ಸ್ಪಾಟ್ ಪ್ರದೇಶಗಳಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡುತ್ತಿಲ್ಲ ಎಂದು ಹೇಳಿ ಗುತ್ತಿಗೆ ಕರಾರನ್ನು ರದ್ದುಗೊಳಿಸಲಾಗಿದೆ.

ನೋಡಿ, ಇಲ್ಲಿದೆ ಕಸ!

ನಿಮ್ಮ ಬಡಾವಣೆಯಲ್ಲಿ ಕಸ ಸಂಗ್ರಹವಾಗುತ್ತಿಲ್ಲವೇ? ರಸ್ತೆಗಳಲ್ಲಿ ತ್ಯಾಜ್ಯ ಸುರಿಯಲಾಗುತ್ತಿದೆಯೇ? ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ಮಾಹಿತಿಯನ್ನು ನಿಮ್ಮ ಹೆಸರು, ವಿಳಾಸದೊಂದಿಗೆ ‘ಪ್ರಜಾವಾಣಿ’ಗೆ ಕಳುಹಿಸಿ.

ವ್ಯಾಟ್ಸ್ ಆಪ್: 96060 38256


ಕೆ. ಜಿ. ಸರ್ಕಲ್ ಬಳಿ ಬಿದ್ದಿದ್ದ ಕಸದ ರಾಶಿ ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಸಮಸ್ಯೆಗೆ ಸಿಇಒ ಕಾರಣ: ಸಂಘ

‘ಬಿಎಸ್‌ಡಬ್ಲ್ಯುಎಂಎಲ್‌ಗೆ ಕರೀಗೌಡ ಅವರು ಸಿಇಒ ಆಗಿ ಬರುವುದಕ್ಕಿಂತ ಮೊದಲು ನಗರದಲ್ಲಿ ತ್ಯಾಜ್ಯ ವಿಲೇವಾರಿ ಸರಿಯಾಗಿ ನಡೆಯುತ್ತಿತ್ತು. ಕರೀಗೌಡ ಅವರ ಕೆಲವು ಅಪ್ರಸ್ತುತ ನಿಯಮಗಳಿಂದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ನಡುವೆ ಸಂಘರ್ಷವಾಗುತ್ತಿದೆ. ಬ್ಲ್ಯಾಕ್ ಸ್ಪಾಟ್‌ಗಳಲ್ಲಿ ಕಸ ತೆಗೆಯುವಂತಿಲ್ಲ ಎಂದು ಆದೇಶದಲ್ಲಿ ಹೇಳುತ್ತಾರೆ. ಆದರೆ, ಸ್ಥಳೀಯ ಅಧಿಕಾರಿಗಳು ರಸ್ತೆಯಲ್ಲಿ ಕಸ ವಿಂಗಡಿಸಿ, ಸಾಗಿಸುವಂತೆ ನಮ್ಮ ಕಾರ್ಮಿಕರಿಗೆ ಮೌಖಿಕವಾಗಿ ಸೂಚಿಸುತ್ತಾರೆ. ಅದನ್ನು ಮಾಡದಿದ್ದರೆ ಗುತ್ತಿಗೆದಾರರ ಮೇಲೆ ಎಸ್ಮಾ ಹಾಕಿ ಬೆದರಿಸುತ್ತಿದ್ದಾರೆ. ಬಿಎಸ್‌ಡಬ್ಲ್ಯುಎಂಎಲ್‌ನ ಅಧಿಕಾರಿಗಳಿಂದ ನಗರದಲ್ಲಿ ಸಮಸ್ಯೆ ಉಂಟಾಗುತ್ತಿದೆ. ಅವರ ಸ್ವಹಿತಾಸಕ್ತಿಗಾಗಿ ನಗರದ ಜನರ ಆರೋಗ್ಯವನ್ನು ಬಲಿಕೊಡುತ್ತಿದ್ದಾರೆ’ ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು–ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಎನ್. ಬಾಲಸುಬ್ರಮಣಿಯಂ ದೂರಿದರು.

ನೃತ್ಯರೂಪಕ

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್


ನಗರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಸೋಮವಾರ ನಡೆದ ಶಿವಶಕ್ತಿ ನಾಟ್ಯ ಶಾಲೆಯ 26ನೇ ವಾರ್ಷಿಕೋತ್ಸವದಲ್ಲಿ ಶಿವಶಕ್ತಿ ನಾಟ್ಯ ಶಾಲೆ ವಿದ್ಯಾರ್ಥಿಗಳು ‘ಶಕ್ತಿ ಸ್ವರೂಪಿಣಿ’ ನೃತ್ಯರೂಪಕ ಪ್ರಸ್ತುತಪಡಿಸಿದರು

13 ಸಾವಿರ ಮನೆಗಳ ಹಂಚಿಕೆ ರದ್ದಾಗುವ ಸಾಧ್ಯತೆ

ಬೆಂಗಳೂರು: ರಾಜೀವ್ ಗಾಂಧಿ ವಸತಿ ನಿಗಮವು ಕೆಲವು ವರ್ಷಗಳ ಹಿಂದೆ 23 ಸಾವಿರ ಫಲಾನುಭವಿಗಳಿಗೆ ಮನೆಗಳನ್ನು ಹಂಚಿಕೆ ಮಾಡಿತ್ತು. ಈ ಪೈಕಿ 13 ಸಾವಿರ ಫಲಾನುಭವಿಗಳು ಪೂರ್ಣ ಪ್ರಮಾಣದಲ್ಲಿ ಹಣ ಪಾವತಿ ಮಾಡದ ಕಾರಣ ಹಂಚಿಕೆ ರದ್ದಾಗುವ ಸಾಧ್ಯತೆ ಇದೆ.

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ವಸತಿ ಯೋಜನೆ (ನಗರ) ಹಾಗೂ ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆಯಡಿ 2018 ಹಾಗೂ 2023ರಲ್ಲಿ ಮನೆಗಳನ್ನು ಹಂಚಿಕೆ ಮಾಡಲಾಗಿತ್ತು. 13 ಸಾವಿರ ಫಲಾನುಭವಿಗಳು ಮೊದಲ ಕಂತು ₹50 ಸಾವಿರ ಪಾವತಿಸಿದ್ದು ಉಳಿದ ಹಣ ಪಾವತಿಸಲು ಮುಂದೆ ಬರುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಈಗಾಗಲೇ ಮೊದಲ ಕಂತು ಪಾವತಿಸಿದ್ದ ಫಲಾನುಭವಿಗಳಿಗೆ ಉಳಿದ ಕಂತುಗಳನ್ನು ಪಾವತಿಸುವಂತೆ ನೋಟಿಸ್ ಜಾರಿಗೊಳಿಸಿತ್ತು. ರದ್ದು ಮಾಡುವ ಕುರಿತೂ ಅದರಲ್ಲಿ ಉಲ್ಲೇಖಿಸಲಾಗಿತ್ತು. ಫಲಾನುಭವಿಗಳು ಕಂತು ಪಾವತಿ ಮಾಡದೇ ಇರುವುದರಿಂದ ನಿಗಮದ ಆಡಳಿತ ಮಂಡಳಿ ಸಭೆಯಲ್ಲಿ ಹಂಚಿಕೆ ರದ್ದು ಮಾಡುವ ತೀರ್ಮಾನ ಕೈಗೊಳ್ಳಲಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ವಸತಿ ಯೋಜನೆ ಜಾರಿಗೆ ಆರ್ಥಿಕ ಹೊಂದಾಣಿಕೆಯನ್ನು ನಿಗಮ ಮಾಡಿಕೊಳ್ಳ ಬೇಕಾಗುತ್ತದೆ. ಕಂತನ್ನೇ ಪಾವತಿ ಮಾಡದೇ ಇದ್ದರೆ ಯೋಜನೆ ಜಾರಿ ಮತ್ತಷ್ಟು ವಿಳಂಬವಾಗಲಿದೆ. ಮುಂದಿನ ವಾರದಿಂದಲೇ ಹಂಚಿಕೆ ರದ್ದು ಆಗಿರುವ ಕುರಿತು ನೋಟಿಸ್ ಜಾರಿಯಾಗಲಿದೆ. ರದ್ದಾದ ಫಲಾನು ಭವಿಗಳಿಗೆ ಶೇ 25ರಷ್ಟು ಕಡಿತಗೊಳಿಸಿ ಉಳಿಕೆ ಮೊತ್ತ ಪಾವತಿಯಾಗಲಿದೆ. ಈಗಾಗಲೇ ಅರ್ಜಿ ಸಲ್ಲಿಸಿದ್ದ ಇತರರಿಗೆ ಹಂಚಿಕೆ ಮಾಡುವ ಕುರಿತು ಪರಿಶೀಲನೆ ನಡೆಸಲಾಗುವುದು’ ಎಂದು ಹೇಳಿದರು.

ಸಂಘಟನೆ ಆಕ್ಷೇಪ: ನಿಗಮದ ಈ ನಿರ್ಧಾರವನ್ನು ಕೊಳಚೆ ಜನರ ಸಂಘಟನೆ (ಕರ್ನಾಟಕ) ವಿರೋಧಿಸಿದ್ದು, ಸಮಯಾವಕಾಶಕ್ಕೆ ಆಗ್ರಹಿಸಿದೆ.

‘ಈಗಾಗಲೇ ಆರಂಭಿಕ ಕಂತು ಪಾವತಿಸಿಕೊಂಡು ಅದರ ಬಡ್ಡಿ ದರವನ್ನು ನಿಗಮ ಪಡೆದಿದೆ. ನಿಗಮವು ಯೋಜನೆ ಜಾರಿಗೆ ವಿಳಂಬ ಮಾಡಿ ಏಕಾಏಕಿ ಈ ನಿರ್ಧಾರ ಕೈಗೊಂಡಿರುವುದರಿಂದ ಫಲಾನುಭವಿಗಳಿಗೆ ತೊಂದರೆಯಾಗಲಿದೆ’ ಎಂದು ಸಂಘಟನೆ ಅಧ್ಯಕ್ಷ ಐಸಾಕ್ ಅಮೃತ್ ರಾಜ್ ಹೇಳಿದರು.

‘ಕೆಲವರು ಸಾಲ ಪಡೆದು ಕಂತು ಪಾವತಿಸಿದ್ದರು. ಇನ್ನು ಕೆಲವರಿಗೆ ಕೌಟುಂಬಿಕ ಕಾರಣಗಳಿಂದ ಪಾವತಿ ಮಾಡಲು ಆಗಿಲ್ಲ. ಇದರಲ್ಲಿ ಆಟೊ ಚಾಲಕರು, ಸಣ್ಣಪುಟ್ಟ ಕೆಲಸ ಮಾಡುವ ಕಾರ್ಮಿಕರು ಇದ್ದಾರೆ. ಈಗ ಶೇ 25ರಷ್ಟು ಕಡಿತ ಮಾಡಿ ಕಂತಿನ ಉಳಿಕೆ ಮೊತ್ತ ಮರು ಪಾವತಿ ಮಾಡುವುದು ಸರಿಯಲ್ಲ’ ಎಂದು ತಿಳಿಸಿದರು.

‘ಯೋಜನೆಯನ್ನು ರಾಜೀವ್ ಗಾಂಧಿ ವಸತಿ ನಿಗಮ ಪ್ರಕಟಿಸಿ ಅರ್ಜಿ ಆಹ್ವಾನಿಸಿತ್ತು. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಪ್ರತಿ ಮನೆಗೆ ₹3.50 ಲಕ್ಷ ಸಹಾಯಧನ ನೀಡುತ್ತಿದ್ದು, ಉಳಿಕೆ ಮೊತ್ತವನ್ನು ಫಲಾನುಭವಿಗಳು ಪಾವತಿಸಬೇಕು. ಸರ್ಕಾರವು ಸಾಲ ಪಡೆಯಲು ವ್ಯವಸ್ಥೆ ಮಾಡಿ ಬಡ್ಡಿ ದರದಲ್ಲೂ ಶೇ 3 ರಷ್ಟು ಕಡಿಮೆ ಮಾಡುವುದಾಗಿ ಹೇಳಿತ್ತು. ಇದಕ್ಕೆ ನಿರೀಕ್ಷಿತ ಪ್ರತಿಕ್ರಿಯೆ ಬರಲಿಲ್ಲ’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಯೋಜನೆ ಜಾಗ ದೂರ

‘ಯಲಹಂಕ, ಆನೇಕಲ್ ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರೇಳು ಕಡೆ ಜಾಗ ಗುರುತಿಸಿ ₹8 ಲಕ್ಷ ಮೊತ್ತಕ್ಕೆ ಮನೆ ನೀಡುವುದಾಗಿ ನಿಗಮ ಅರ್ಜಿ ಆಹ್ವಾನಿಸಿತ್ತು. ಗುರುತಿಸಿರುವ ಜಾಗ ದೂರ ಇದ್ದು, ಸಾರಿಗೆ ಸಂಪರ್ಕ ಇಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದ್ದೆವು. ಯೋಜನೆ ಸ್ಥಳವನ್ನು ಬದಲಾಯಿಸುವ ನಿರೀಕ್ಷೆಯಿಂದ ಕಂತು ಪಾವತಿಸಿದ್ದೆವು’ ಎಂದು ಫಲಾನುಭವಿಯೊಬ್ಬರು ತಿಳಿಸಿದರು.

ಗಣತಿ: ಅತಿಥಿ ಶಿಕ್ಷಕರು ಕಂಗಾಲು

ಮೂರು ತಿಂಗಳಿನಿಂದ ವೇತನ ಇಲ್ಲ ಮೊಬೈಲ್‌ನಲ್ಲಿ ಆ್ಯಪ್ ಅಪ್‌ಡೇಟ್ ಆಗಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ತಿಂಗಳಿನಿಂದ ವೇತನ ಸಿಗದೇ ಉಂಟಾಗಿರುವ ಆರ್ಥಿಕ ಸಂಕಷ್ಟದ ನಡುವೆ ಮೊಬೈಲ್‌ನಲ್ಲಿ ಎಚ್‌ಎಲ್‌ಒ ಆ್ಯಪ್ ಕಾರ್ಯನಿರ್ವಹಿಸದೇ ಇರುವುದರಿಂದ ನಗರ ಪಾಲಿಕೆ ವ್ಯಾಪ್ತಿಯ ಅತಿಥಿ ಶಿಕ್ಷಕರು ಪೇಚಿಗೆ ಸಿಲುಕಿದ್ದಾರೆ.

ನಗರ ಪಾಲಿಕೆಯ ಶಾಲೆಗಳಲ್ಲಿ 825ಕ್ಕೂ ಅಧಿಕ ಅತಿಥಿ ಶಿಕ್ಷಕರು ಇದ್ದಾರೆ. ಅವರನ್ನು ಗಣತಿ ಕಾರ್ಯಕ್ಕೆ ನಿಯೋಜಿಸಲಾಗಿದೆ. ಹೆಚ್ಚಿನವರಲ್ಲಿ 5ಜಿ ಅಥವಾ ಐಫೋನ್ ಮೊಬೈಲ್ ಫೋನ್‌ಗಳು ಇಲ್ಲದೇ ಇರುವುದರಿಂದ ತಾಂತ್ರಿಕ ಸಮಸ್ಯೆ ಉಂಟಾಗಿದೆ. ಆ್ಯಪ್ ಸರಿಯಾಗಲು ಕನಿಷ್ಠ ಆ್ಯಂಡ್ರಾಯ್ಡ್–10 ವರ್ಷನ್ ಮೊಬೈಲ್ ಬೇಕಾಗಿದೆ.

'ಹೌಸ್ ಲಿಸ್ಟಿಂಗ್ ಆಪರೇಷನ್ (ಎಚ್‌ಎಲ್‌ಒ) ಆ್ಯಪ್ ತೆರೆದುಕೊಳ್ಳುತ್ತಿಲ್ಲ. ಕೆಲವೊಮ್ಮೆ ತೆರೆದುಕೊಂಡರೂ ಲಾಗಿನ್ ಆಗುತ್ತಿಲ್ಲ. ಮೊಬೈಲ್ ಅಪ್‌ಗ್ರೇಡ್ ಮಾಡಿದರೆ ಆಗುತ್ತದೆ ಎಂದು ಕೆಲವರು ಹೇಳಿದ್ದರಿಂದ ಅಪ್‌ಗ್ರೇಡ್ ಮಾಡಿಸಿದ್ದೇವೆ. ಆದರೂ ಆಗುತ್ತಿಲ್ಲ' ಎಂದು ಗಣತಿದಾರರು ದೂರಿದರು.

ವೇತನ ನೀಡಿ: 'ನಮ್ಮಲ್ಲಿರುವ 2ಜಿ, 3ಜಿ ಮೊಬೈಲ್‌ಗಳು ಗಣತಿ ಆ್ಯಪ್‌ಗೆ ಸ್ಪಂದಿಸುತ್ತಿಲ್ಲ. ನಮಗೆ ಮೂರು ತಿಂಗಳಿನಿಂದ ವೇತನ ನೀಡಿಲ್ಲ. ವೇತನ ನೀಡಿದರೆ ಕಂತಿನಲ್ಲಾದರೂ ಹೊಸ ಮೊಬೈಲ್ ತೆಗೆದುಕೊಂಡು ಗಣತಿ ಕಾರ್ಯ ಮಾಡುತ್ತಿದ್ದೆವು' ಎಂದು ಅತಿಥಿ ಶಿಕ್ಷಕರೊಬ್ಬರು ಹೇಳಿದರು.

'ಗಣತಿಗೆ ಗೌರವಧನ ಇರುತ್ತದೆ. ಆದರೆ, ಸಿಗುವುದು ಯಾವಾಗಲೋ? ಈಗ ಸಂಬಳವಾಗದೇ ನಾವು ಮನೆ ಮನೆ ಸುತ್ತುವುದು ಹೇಗೆ? ಆ್ಯಪ್‌ಗೆ ನಮ್ಮ ಮೊಬೈಲ್ ಹೊಂದಾಣಿಕೆಯಾಗದೇ ಇದ್ದರೆ ಸಂಬಂಧಿಕರಲ್ಲೋ, ಸ್ನೇಹಿತರಲ್ಲೋ ಬೇಡಿ ಮೊಬೈಲ್ ತಗೊಂಡು ಹೋಗ ಬಹುದು. ನಮ್ಮ ಮನೆ ಎಲ್ಲೋ ಇರುತ್ತದೆ. ಗಣತಿ ಮಾಡಬೇಕಾದ ಜಾಗ ಇನ್ನೆಲ್ಲೋ ಇರುತ್ತದೆ. ಅಲ್ಲಿಗೆ ಹೋಗಿ ಬರಲಾದರೂ ದುಡ್ಡು ಬೇಕು. ಮೊದಲು ವೇತನ ಬಿಡುಗಡೆ ಮಾಡಬೇಕು. ಆ ನಂತರವಷ್ಟೇ ಗಣತಿಗೆ ನಮ್ಮನ್ನು ನಿಯೋಜಿಸಬೇಕು' ಎಂದು ಅತಿಥಿ ಶಿಕ್ಷಕ ಮಹೇಶ್ ಹೇಳಿದರು.

'ಗಣತಿಗೆ ಹೋಗದೇ ಇದ್ದರೆ ಜೈಲು ಶಿಕ್ಷೆ, ₹ 1 ಸಾವಿರ ದಂಡ ಎಂದೆಲ್ಲ ಹೆದರಿಸುತ್ತಾರೆ. ನಮ್ಮ ಕಷ್ಟಗಳನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ವೇತನ ಆಗಿಲ್ಲ ಎಂಬುದು ಒಂದು ಸಮಸ್ಯೆ ಆದರೆ, ನಮ್ಮ ಅತಿಥಿ ಶಿಕ್ಷಕರ ಅವಧಿ ಏ.30ಕ್ಕೆ ಮುಗಿಯುತ್ತದೆ. ಮೇ ತಿಂಗಳಲ್ಲಿ ನಮ್ಮನ್ನು ವೃತ್ತಿಯಲ್ಲಿ ಪರಿಗಣಿಸುವುದಿಲ್ಲ. ಜೂನ್‌ನಲ್ಲಿ ಶಾಲೆಗಳು ತೆರೆದ ಮೇಲೆ ಶುರುವಿನಿಂದ ಅತಿಥಿ ಶಿಕ್ಷಕರನ್ನಾಗಿ ನೇಮಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗುತ್ತದೆ. ಹಾಗಾದರೆ ಮುಂದಿನ ತಿಂಗಳು ನಮ್ಮನ್ನು ಯಾವ ಆಧಾರದಲ್ಲಿ ಗಣತಿದಾರರು ಎಂದು ಪರಿಗಣಿಸುತ್ತಾರೆ ಎಂಬುದು ಗೊತ್ತಾಗುತ್ತಿಲ್ಲ. ಮೊಬೈಲ್ ಸಮಸ್ಯೆ, ವೇತನದ ಸಮಸ್ಯೆ, ನಮ್ಮ ಸೇವಾವಧಿಯ ಸಮಸ್ಯೆಯನ್ನು ಮೊದಲು ಸರಿಪಡಿಸಬೇಕು ಎಂದು ಒತ್ತಾಯಿಸಿದರು.

'ಪಾಲಿಕೆ ಆಯುಕ್ತರು, ವಿಶೇಷ ಆಯುಕ್ತರು ಹೇಳಿದ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೂ ಸಮಯಕ್ಕೆ ಸರಿಯಾಗಿ ವೇತನ ಬಿಡುಗಡೆ ಮಾಡುತ್ತಿಲ್ಲ. ಈಗ ನಮ್ಮನ್ನು ಗಣತಿಗೆ ಹಾಕಿದ್ದಾರೆ. ಮೊಬೈಲ್‌ನಲ್ಲಿ ಅಪ್‌ಡೇಟ್ ಆಗದೇ ಇರುವ ಸಮಸ್ಯೆಗಳನ್ನು ನಾವು ಹೇಳಿಕೊಂಡರೆ ವೇತನ ಬೇಕಿದ್ದರೆ ಕೆಲಸ ಮಾಡಿ ಎಂದು ಒತ್ತಡ ಹಾಕುತ್ತಿದ್ದಾರೆ' ಎಂದು ದೂರಿದರು.

ನಾಗರಿಕರಿಗೂ ಅವಕಾಶ

ಬೆಂಗಳೂರು: ದ್ವಿತೀಯ ಪಿಯುಸಿ ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದವರಿಗೆ ಜನಗಣತಿ-2027ರ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಏಪ್ರಿಲ್ 22ರಂದು ಬೆಳಿಗ್ಗೆ 9ರಿಂದ ನೇರ ಸಂದರ್ಶನಕ್ಕೆ ಅರ್ಹರು ಹಾಜರಾಗಬಹುದು. ಸುಮಾರು ಒಂದು ಸಾವಿರ ಗಣತಿದಾರರನ್ನು ಆಯ್ಕೆ ಮಾಡಲಾಗುತ್ತದೆ ಎಂದರು.

ಅಭ್ಯರ್ಥಿಗಳು ಕನಿಷ್ಠ ಆ್ಯಂಡ್ರಾಯ್ಡ್–12, 4ಜಿಬಿ ರಾಮ್‌ನ ಮೊಬೈಲ್ ಹೊಂದಿರಬೇಕು. ಆಯ್ಕೆಯಾದವರಿಗೆ ಅಗತ್ಯ ತರಬೇತಿ ನೀಡಲಾಗುವುದು. ಜನಗಣತಿಯ ಮೊದಲ ಹಂತದ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಮೇ 15ರವರೆಗೆ ನಡೆಯಲಿದ್ದು, ಅಲ್ಲಿಯವರೆಗೆ ರಜಾ ದಿನವೂ ಸೇರಿದಂತೆ ನಿರಂತರವಾಗಿ ಕಾರ್ಯನಿರ್ವಹಿಸಲು ಬದ್ಧರಾಗಿರಬೇಕು ಎಂದು ಹೇಳಿದರು.

ಭಾರತದ ಜನಗಣತಿ-2027ರ ಜನಗಣತಿ ಮಾರ್ಗಸೂಚಿಯನ್ವಯ ಮೇ 15ರವರೆಗಿನ ಮೊದಲ ಹಂತದ ಗಣತಿ ಕಾರ್ಯಕ್ಕೆ (150ರಿಂದ 200 ಮನೆಗಳಿಗೆ) ₹9,000 ಗೌರವಧನ ನೀಡಲಾಗುವುದು. ಎರಡನೇ ಹಂತದ ಕಾರ್ಯವು 2027ರ ಫೆಬ್ರುವರಿಯಲ್ಲಿ ನಡೆಯಲಿದ್ದು, ಆ ಕಾರ್ಯಕ್ಕೆ (150ರಿಂದ 200 ಮನೆ ಅಥವಾ 750ರಿಂದ 800 ಜನಸಂಖ್ಯೆಗೆ) ₹16,000 ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಸಿ.ವಿ.ರಾಮನ್ ನಗರ, ಶಾಂತಿನಗರ, ಶಿವಾಜಿನಗರ, ಚಾಮರಾಜಪೇಟೆ, ಚಿಕ್ಕಪೇಟೆ ಹಾಗೂ ಗಾಂಧಿನಗರ ವಿಧಾನಸಭೆ ಕ್ಷೇತ್ರಗಳ ನಿವಾಸಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ನೇಮಕಾತಿ ಮಾಡಿಕೊಳ್ಳುವುದು ಕೇಂದ್ರ ನಗರ ಪಾಲಿಕೆ ಆಯುಕ್ತರ ವಿವೇಚನೆಗೆ ಒಳಪಟ್ಟಿರುತ್ತದೆ ಎಂದರು.

ಒಮ್ಮೆಗೆ ಎರಡು ಕೆಲಸ: ವಿನಾಯಿತಿಗೆ ನೌಕರರ ಮನವಿ

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ಅಧಿಕಾರಿಗಳು ಹಾಗೂ ನೌಕರರು ಒಂದು ತಿಂಗಳ ಅವಧಿಯಲ್ಲಿ ಜನಗಣತಿ ಹಾಗೂ ಒಂದು ಬಾರಿ ಪರಿಹಾರ ಯೋಜನೆಯ (ಒಟಿಎಸ್) ಕೆಲಸ ಮಾಡಬೇಕಿದ್ದು, ಯಾವುದಾದರೂ ಒಂದಕ್ಕೆ ವಿನಾಯಿತಿ ನೀಡುವಂತೆ ಮನವಿ ಮಾಡಿದ್ದಾರೆ.

ಜಲಮಂಡಳಿಯ ಬಿ ಹಾಗೂ ಸಿ ದರ್ಜೆ ಸಿಬ್ಬಂದಿಯನ್ನು ಜನಗಣತಿ ಕಾರ್ಯಕ್ಕೆ ನಿಯೋಜಿಸಲಾಗಿದೆ. ಇದರ ನಡುವೆ ಜಲಮಂಡಳಿಯು ಬಾಕಿ ವಸೂಲಿಗೆ ಮೊದಲ ಬಾರಿ ಒಟಿಎಸ್ ಯೋಜನೆ ಜಾರಿಗೊಳಿಸಿರುವುದರಿಂದ ಮನೆ ಮನೆಗೆ ತೆರಳಿ ಬಾಕಿ ಉಳಿಸಿಕೊಂಡ ಗ್ರಾಹಕರಿಗೆ ನೋಟಿಸ್ ಜಾರಿಗೊಳಿಸಬೇಕಾಗಿದೆ.

'ಈಗ ಬೇಸಿಗೆ ಆಗಿರುವುದರಿಂದ ನಿತ್ಯ ಬರುವ ದೂರುಗಳಿಗಿಂತ ಮೂರು ಪಟ್ಟು ಅಧಿಕವಾಗಿ ನೀರಿನ ಸಮಸ್ಯೆ ಬಗ್ಗೆ ದೂರುಗಳು ಬರುತ್ತಿವೆ. ಹೀಗಾಗಿ, ಎರಡರ ಪೈಕಿ ಒಂದು ಕೆಲಸಕ್ಕೆ ವಿನಾಯಿತಿ ನೀಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತರು, ಜಲಮಂಡಳಿ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಗಿದೆ. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೂ ಮನವಿ ಸಲ್ಲಿಸಲಾಗಿದ್ದು, ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಹೇಳಿದ್ದಾರೆ' ಎಂದು ಜಲಮಂಡಳಿ ನೌಕರರ ಸಂಘದ ಅಧ್ಯಕ್ಷ ಎ. ಗೋವಿಂದರಾಜು ತಿಳಿಸಿದರು.

ಸುದ್ದಿ 2 ನಿಮಿಷ

ಚನ್ನಪಟ್ಟಣ: ರೈತನ ಹೊಟ್ಟೆಗೆ ದಂತದಿಂದ ತಿವಿದ ಸಲಗ

ಚನ್ನಪಟ್ಟಣ: ತಾಲ್ಲೂಕಿನ ಸುಣ್ಣಘಟ್ಟ ಕೆರೆಯಲ್ಲಿ ಬೀಡುಬಿಟ್ಟಿದ್ದ ಮೂರು ಕಾಡಾನೆಗಳನ್ನು ಶನಿವಾರ ರಾತ್ರಿ ಕಾಡಿಗಟ್ಟುವ ಕಾರ್ಯಾಚರಣೆ ವೇಳೆ ಸಲಗವೊಂದು ರೈತನ ಮೇಲೆ ದಾಳಿ ನಡೆಸಿದೆ.

ಕಾಡಾನೆ ದಾಳಿಯಲ್ಲಿ ಮಂಗಾಡಹಳ್ಳಿಯ ರೈತ ಕಾಂತರಾಜು(55) ಗಂಭೀರವಾಗಿ ಗಾಯಗೊಂಡಿದ್ದಾರೆ.

ಜಮೀನಿಗೆ ರಾತ್ರಿ ನೀರು ಹಾಯಿಸಲು ಹೋಗಿದ್ದ ವೇಳೆ ಅರಣ್ಯ ಸಿಬ್ಬಂದಿ ಅಟ್ಟಿಸಿಕೊಂಡು ಬಂದ ಕಾಡಾನೆಗಳ ಪೈಕಿ ಸಲಗವೊಂದು ಕಾಂತರಾಜು ಮೇಲೆ ದಾಳಿ ನಡೆಸಿದೆ. ದಂತದಿಂದ ಹೊಟ್ಟೆಗೆ ಚುಚ್ಚಿರುವುದರಿಂದ ರೈತ ಗಂಭೀರವಾಗಿ ಗಾಯಗೊಂಡಿದ್ದಾರೆ. ಪೃಷ್ಠದ ಭಾಗದ ಮೂಳೆ ಮುರಿದಿದೆ.

ಅರಣ್ಯ ಇಲಾಖೆ ಅಧಿಕಾರಿಗಳು ತಕ್ಷಣ ಅವರನ್ನು ನಗರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಉದ್ಯೋಗ ಮೇಳ ಯುವಕರಿಗೆ ಅನುಕೂಲ'



ಬೆಂಗಳೂರು: 'ರಾಜ್ಯದ ಯುವಕರಿಗೆ ನೆರವಾಗುವ ಉದ್ದೇಶದಿಂದ ಮಲ್ಲೇಶ್ವರದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿತ್ತು' ಎಂದು ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಡಾ.ಸಿ.ಎನ್. ಅಶ್ವತ್ಥನಾರಾಯಣ ಫೌಂಡೇಷನ್ ಸೋಮವಾರ ಹಮ್ಮಿಕೊಂಡಿದ್ದ ಯುವೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ಪಡೆಯಲು ಹಾಗೂ ಅವರಿಗೆ ನೆರವಾಗಲು ಉದ್ಯೋಗ ಮೇಳಗಳು ಸಹಕಾರಿಯಾಗಿವೆ. ಇಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗದ ಬಗ್ಗೆ ಮಾರ್ಗದರ್ಶನ ನೀಡಲಾಗಿದೆ. ನಮ್ಮ ಈ ಕಾರ್ಯಕ್ರಮಕ್ಕೆ ಹಲವಾರು ಸಂಘ–ಸಂಸ್ಥೆಗಳು ಕೈ ಜೋಡಿಸಿವೆ' ಎಂದರು.

'ಉದ್ಯೋಗ ಆಕಾಂಕ್ಷಿಗಳಿಗೆ ಉದ್ಯೋಗ ದೊರೆತರೆ ಸದೃಢ ಸಮಾಜ ನಿರ್ಮಿಸಬಹುದು. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ಉದ್ಯೋಗ ಅವಕಾಶ ಸೃಷ್ಟಿಸಲು ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಲಕ್ಷಾಂತರ ಉದ್ಯೋಗಾವಕಾಶಗಳು ಸೃಷ್ಟಿ ಆಗಿವೆ. ಬಸವೇಶ್ವರರ ಜಯಂತಿಯ ದಿನವೇ ಈ ಮೇಳ ಆಯೋಜಿಸಲಾಗಿದೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಾತಿನಂತೆ ಸಮಾನತೆಯ ಸಮಾಜ ಕಟ್ಟಲು ಎಲ್ಲರೂ ಬದ್ಧರಾಗೋಣ' ಎಂದು ಅವರು ಹೇಳಿದರು.

ಸಚಿವ ಖಂಡ್ರೆ ವಿರುದ್ಧ ಸಿಪಿವೈ ಗರಂ

ಚನ್ನಪಟ್ಟಣ: ತಾಲ್ಲೂಕಿನಲ್ಲಿ ಕಾಡಾನೆಗಳ ಹಾವಳಿ ವಿಪರೀತವಾಗಿದ್ದು, ಕಾಡಾನೆ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯುವ ಬಗ್ಗೆ ಭರವಸೆ ನೀಡಿದ್ದ ಅರಣ್ಯ ಸಚಿವ ಈಶ್ವರ ಖಂಡ್ರೆ ಭರವಸೆ ಈಡೇರಿಸಿಲ್ಲ ಎಂದು ಶಾಸಕ ಸಿ.ಪಿ. ಯೋಗೇಶ್ವರ್ ಬೇಸರ ವ್ಯಕ್ತಪಡಿಸಿದ್ದಾರೆ.

ಟ್ರಂಚ್ ನಿರ್ಮಾಣ, ರೈಲ್ವೆ ಬ್ಯಾರಿಕೇಡ್ ಹಾಕುವುದಾಗಿ ಭರವಸೆ ನೀಡಿ, ಅದನ್ನು ಈಡೇರಿಸಲೇ ಇಲ್ಲ ಎಂದರು.

ಸಬಲ ನಾರಿ ಸಮರ್ಥ ಭಾರತ ಕಾರ್ಯಕ್ರಮ

'ಮೀಸಲು: ಬಿಜೆಪಿ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಬೆಂಬಲ ಸಿಗದೇ ಇರುವ ಕುರಿತು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯದಾದ್ಯಂತ ಜಾಗೃತಿ ಮೂಡಿಸುವ ಜತೆಗೆ ಹೋರಾಟ ನಡೆಸಲಿದೆ' ಎಂದು ಮೋರ್ಚಾದ ರಾಜ್ಯ ಅಧ್ಯಕ್ಷೆ ಸಿ.ಮಂಜುಳಾ ತಿಳಿಸಿದರು.

ಬೆಂಗಳೂರು ನಗರ ದಕ್ಷಿಣ ಬಿಜೆಪಿ ಘಟಕ ಜೆ.ಪಿ ನಗರದ ಆರ್.ವಿ. ಡೆಂಟಲ್ ಕಾಲೇಜು ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ಮಹಿಳಾ ಮೀಸಲಾತಿ ಮಸೂದೆ–ಸವಾಲುಗಳು ಹಾಗೂ ಪರಿಹಾರಗಳು' ಸಬಲ ನಾರಿ- ಸಮರ್ಥ ಭಾರತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.



ಜೆ.ಪಿ. ನಗರದ ಆರ್‌ವಿ. ಡೆಂಟಲ್ ಕಾಲೇಜಿನಲ್ಲಿ ಆಯೋಜಿಸಿದ್ದ 'ಮಹಿಳಾ ಮೀಸಲಾತಿ ಮಸೂದೆ–ಸವಾಲುಗಳು ಹಾಗೂ ಪರಿಹಾರಗಳು' ಸಂಸದ ಧ್ವನಿ ಕಾರ್ಯಕ್ರಮದಲ್ಲಿ ಸಿ.ಕೆ. ರಾಮಮೂರ್ತಿ, ತೇಜಸ್ವಿ ಸೂರ್ಯ, ಸಿ. ಮಂಜುಳಾ ಸಮಾಲೋಚನೆಯಲ್ಲಿ ತೊಡಗಿದ್ದರು. ಪದ್ಮ, ನೀಲವೇಣಿ ಇದ್ದರು –ಪ್ರಜಾವಾಣಿ ಚಿತ್ರ

'ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ಆಡಳಿತ ಬಹುತೇಕ ಕುಟುಂಬಗಳ ಹಿಡಿತದಲ್ಲಿದೆ. ಇಂದಿರಾ ಗಾಂಧಿ, ಸೋನಿಯಾ ಗಾಂಧಿ ನಂತರ ಪ್ರಿಯಾಂಕಾ ಗಾಂಧಿ, ಡಿಎಂಕೆಯಲ್ಲಿ ಕನಿಮೋಳಿ, ಎನ್‌ಸಿಪಿಯಲ್ಲಿ ಸುಪ್ರಿಯಾ ಸುಳೆ, ಸಮಾಜವಾದಿ ಪಕ್ಷದಲ್ಲಿ ಡಿಂಪಲ್ ಯಾದವ್... ಹೀಗೆ ಮಹಿಳೆಯರು ಸಂಸತ್ತಿನಲ್ಲಿದ್ದಾರೆ. ಬಿಜೆಪಿಯಿಂದ ಜನಪ್ರತಿನಿಧಿಗಳಾಗಿರುವವರಲ್ಲಿ ಹೆಚ್ಚಿನವರು ರಾಜಕೀಯ ಕುಟುಂಬದ ಹಿನ್ನೆಲೆ ಇಲ್ಲದವರು. ಬೇರೆ ಮಹಿಳೆಯರು ಆಯ್ಕೆಯಾದರೆ ತಮ್ಮ ಸ್ಥಾನಕ್ಕೆ ಕುತ್ತು ಬರುವ ಆತಂಕದಿಂದ ವಿರೋಧ ಪಕ್ಷಗಳು ಮಹಿಳಾ ಮೀಸಲು ವಿರೋಧಿಸುತ್ತಿವೆ' ಎಂದು ಟೀಕಿಸಿದರು.

ಲೋಕಸಭಾ ಸದಸ್ಯ ತೇಜಸ್ವಿ ಸೂರ್ಯ ಮಾತನಾಡಿ, 'ಮಹಿಳಾ ಮೀಸಲಾತಿ ಮಸೂದೆ ಮಂಡಿಸಿದಾಗ ವಿರೋಧ ಪಕ್ಷಗಳು ಒಂದಾಗಿ ಸೋಲಿಸಿದವು. ಇದನ್ನು ಜಾರಿಗೊಳಿಸುತ್ತಿರುವ ಉದ್ದೇಶ, ಇದರಿಂದ ಮಹಿಳೆಯರಿಗೆ ಸಿಗುವ ಅವಕಾಶಗಳ ಕುರಿತು ತಿಳಿಸಿದರೂ ಅರ್ಥ ಮಾಡಿಕೊಳ್ಳಲಿಲ್ಲ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇದರ ಯಶಸ್ಸಿನ ಲಾಭ ಸಿಗುತ್ತದೆ ಎಂಬ ಭಯದಲ್ಲಿ ಕಾಂಗ್ರೆಸ್ ವಿರೋಧ ಮಾಡುತ್ತಿದೆ. ಮೀಸಲಾತಿ ಜಾರಿಯಿಂದ ನಮ್ಮ ಸರ್ಕಾರ, ಬಿಜೆಪಿ ಹಿಂದೆ ಸರಿಯುವುದಿಲ್ಲ' ಎಂದರು.

ಶಾಸಕ ಸಿ.ಕೆ. ರಾಮಮೂರ್ತಿ ಮಾತನಾಡಿ, 'ಕಾಂಗ್ರೆಸ್ ಹಿಂದಿನಿಂದಲೂ ಮಹಿಳೆಯರಿಗೆ ಸಿಗಬಹುದಾದ ಸಾಂವಿಧಾನಿಕ ಹಕ್ಕುಗಳನ್ನು ತಪ್ಪಿಸುತ್ತಲೇ ಬಂದಿದೆ. ಗಂಗೆ, ನರ್ಮದಾ, ಸಿಂಧೂ ಎಂದು ನದಿಗಳಿಗೆ ಮಹಿಳೆಯರ ಹೆಸರನ್ನು ಇಟ್ಟು ಗೌರವಿಸಿರುವ ಭಾರತದಲ್ಲಿ ಅವರಿಗೆ ಅಗೌರವ ತೋರುವವರನ್ನು ಸಹಿಸಿಕೊಳ್ಳಬಾರದು. ಇದರ ವಿರುದ್ಧ ಹೋರಾಟ ರೂಪಿಸಲಾಗುವುದು' ಎಂದು ಹೇಳಿದರು.

ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಮಹಿಳಾ ಮೋರ್ಚಾ ದಕ್ಷಿಣ ಜಿಲ್ಲಾಧ್ಯಕ್ಷೆ ಶ್ವೇತಾ ರಾಘವೇಂದ್ರ, ಮುಖಂಡರಾದ ಪದ್ಮ, ನೀಲವೇಣಿ, ಪಾಲಿಕೆ ಮಾಜಿ ಸದಸ್ಯರಾದ ನಾಗರತ್ನಮ್ಮ, ಪ್ರತಿಭಾ ಧನರಾಜ್, ಪಲ್ಲವಿ ಚನ್ನಪ್ಪ, ರಾಜೇಶ್ವರಿ ಉಪಸ್ಥಿತರಿದ್ದರು.

ಅಕ್ಕಮಹಾದೇವಿ ವಿ.ವಿ: ಮೂವರಿಗೆ ಗೌರವ ಡಾಕ್ಟರೇಟ್

ವಿಜಯಪುರ: ಇಲ್ಲಿನ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್‌ಗೆ ಧಾರವಾಡದ ಪಾರ್ವತೆವ್ವ ಹೊಂಗಲ್ (ಜಾನಪದ), ಕಲಬುರಗಿಯ ಸಂಗೀತಾ ಎನ್. ಕಟ್ಟಿಮನಿ (ಸಾಹಿತ್ಯ ಮತ್ತು ಶಿಕ್ಷಣ) ಹಾಗೂ ಬಾಗಲಕೋಟೆ ಜಿಲ್ಲೆ ಜಮಖಂಡಿಯ ಆಶಾದೇವಿ ಗುಡಗುಂಟಿ (ಉದ್ಯಮ ಮತ್ತು ಸಾಮಾಜಿಕ ಸೇವೆ) ಭಾಜನವಾಗಿದ್ದಾರೆ.

ಏಪ್ರಿಲ್ 21ರಂದು ಬೆಳಿಗ್ಗೆ 11.30ಕ್ಕೆ ವಿಶ್ವವಿದ್ಯಾಲಯದ ಜ್ಞಾನಶಕ್ತಿ ಆವರಣದಲ್ಲಿ ನಡೆಯುವ 17ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ ಎಂದು ಕುಲಪತಿ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಪ್ರೀತಿ, ಕರುಣೆ, ವಾತ್ಸಲ್ಯ ತುಂಬಿರುವ 'ಕ್ಯಾಸ್ಟ್ ಪಾಲಿಟಿಕ್ಸ್'

ಪ್ರಜಾವಾಣಿ ವಾರ್ತೆ



ಸಿ.ಜಿ. ಲಕ್ಷ್ಮೀಪತಿ ದಂಪತಿಯನ್ನು ಸನ್ಮಾನಿಸಲಾಯಿತು

ಬೆಂಗಳೂರು: ಕ್ಯಾಸ್ಟ್ ಪಾಲಿಟಿಕ್ಸ್ ಪುಸ್ತಕದಲ್ಲಿ ಪ್ರೀತಿ, ಕರುಣೆ, ವಾತ್ಸಲ್ಯ ಹಾಗೂ ಸಮಾನತೆ ಕಡೆಗಿನ ನಡೆ ತುಂಬಿ ತುಳುಕುತ್ತಿದೆ ಎಂದು ಲೇಖಕ ತುಂಬಾಡಿ ರಾಮಯ್ಯ ತಿಳಿಸಿದರು.

ಸಿ.ಜಿ. ಲಕ್ಷ್ಮೀಪತಿ ಗೆಳೆಯರ ಬಳಗ ಭಾನುವಾರ ಹಮ್ಮಿಕೊಂಡಿದ್ದ ಸಿ.ಜಿ. ಲಕ್ಷ್ಮೀಪತಿ ಅಭಿನಂದನಾ ಸಮಾರಂಭ ಹಾಗೂ ಅವರ 'ಕ್ಯಾಸ್ಟ್ ಪಾಲಿಟಿಕ್ಸ್' ಕೃತಿ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಕೃತಿಯನ್ನು ಓದಿದಾಗ ದೇವನೂರ ಮಹಾದೇವ ಅವರ 'ಎದೆಗೆ ಬಿದ್ದ ಅಕ್ಷರ' ಪುಸ್ತಕದ ಮುಂದುವರಿದ ಭಾಗ ಎಂದು ಅನಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕವಿ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, 'ಲಕ್ಷ್ಮೀಪತಿ ಅವರು ನಿವೃತ್ತರಾದ ಮೇಲೆ ಬಲಿಷ್ಠ ರಾಜಕೀಯ ಪಕ್ಷವನ್ನು ಕಟ್ಟಬೇಕು. ನಾವು ಸೈದ್ಧಾಂತಿಕವಾಗಿ ಅವರ ಜೊತೆಗೆ ನಿಲ್ಲಬೇಕು. ಇನ್ನು 10–15 ವರ್ಷಗಳ ನಂತರದ ರಾಜಕೀಯ ಪಲ್ಲಟಗಳಲ್ಲಿ ನಾವೆಲ್ಲರು ಒಂದು ಕಡೆ ನಿಲ್ಲಲೇಬೇಕಾಗುತ್ತದೆ. ರಾಜಕೀಯವಾಗಿ ಗಟ್ಟಿಯಾಗಿ ಕೆಲಸ ಮಾಡಬೇಕಾದ ಕಾಲ ಬರುತ್ತದೆ' ಎಂದು ಭವಿಷ್ಯ ನುಡಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ವಿಶ್ರಾಂತ ಕುಲಪತಿ ಜೋಗನ್ ಶಂಕರ್, ಪ್ರಾಧ್ಯಾಪಕ ಪ್ರದೀಪ್ ರಾಮಾವತ್ ಜೆ., ನಿವೃತ್ತ ಕೆಎಎಸ್ ಅಧಿಕಾರಿ ಲಿಂಚಿ ನಾಗರಾಜ್, ಪ್ರಾಧ್ಯಾಪಕಿ ಸೆಲ್ವಕುಮಾರಿ, ಸಾಹಿತ್ಯ ಸಂಭ್ರಮ ಪ್ರಕಾಶನದ ಕುಮಾರ್ ಇಂದ್ರ ಬೆಟ್ಟ ಉಪಸ್ಥಿತರಿದ್ದರು.

ಸಿಬಿಎಸ್‌ಇ ಗುಣಶ್ರೀಗೆ 98.6 ಅಂಕ

ರಾಜರಾಜೇಶ್ವರಿನಗರ: ಬೆಂಗಳೂರು ದಕ್ಷಿಣ ತಾಲ್ಲೂಕು, ದೊಡ್ಡೇರಿಯ ಜೆ.ಆರ್. ಇಂಟರ್‌ನ್ಯಾಷನಲ್ ಶಾಲೆಯ ಗುಣಶ್ರೀ ಎಲ್. 10ನೇ ತರಗತಿಯಲ್ಲಿ ಶೇ 98.6ರಷ್ಟು ಅಂಕಗಳನ್ನು ಪಡೆದಿದ್ದಾರೆ.



ಗುಣಶ್ರೀ ಎಲ್.

ಸಿಬಿಎಸ್‌ಇಯಲ್ಲಿ ಶೇ 100ರಷ್ಟು ಫಲಿತಾಂಶ ಬಂದಿದ್ದು 15 ವಿದ್ಯಾರ್ಥಿಗಳು ಅತ್ಯುನ್ನತ ಸ್ಥಾನ ಪಡೆದು, 9 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಇಂದು

ಬಿ.ಬಸವಲಿಂಗಪ್ಪ ಅವರ ಜನ್ಮ ಶತಮಾನೋತ್ಸವದ ಸಮಾರಂಭ: ಉದ್ಘಾಟನೆ: ಮಲ್ಲಿಕಾರ್ಜುನ ಖರ್ಗೆ, ಉಪಸ್ಥಿತಿ: ಸಿದ್ದರಾಮಯ್ಯ, ಬಸವರಾಜ ಹೊರಟ್ಟಿ, ಯು.ಟಿ.ಖಾದರ್, ಅಧ್ಯಕ್ಷತೆ: ಎಚ್.ಕೆ. ಪಾಟೀಲ, ಅತಿಥಿಗಳು: ಡಿ.ಕೆ. ಶಿವಕುಮಾರ್, ಜಿ.ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಎಚ್.ಸಿ.ಮಹದೇವಪ್ಪ, ಸತೀಶ ಜಾರಕಿಹೊಳಿ, ರಾಮಲಿಂಗಾರೆಡ್ಡಿ, ಆರ್.ಬಿ.ತಿಮ್ಮಾಪುರ, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಬಿ.ಎಸ್. ಸುರೇಶ್, ಶಿವರಾಜ ಎಸ್. ತಂಗಡಗಿ, ಆಯೋಜನೆ: ಬಿ. ಬಸವಲಿಂಗಪ್ಪನವರ ಜನ್ಮಶತಮಾನೋತ್ಸವ ಆಚರಣಾ ಸಮಿತಿ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಜಲಸಂಭ್ರಮ: ಆಯೋಜನೆ: ಸಾರಥಿ, ಸ್ಥಳ: ಸುಚಿತ್ರಾ ಫಿಲಂ ಸೊಸೈಟಿ, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 11

ಎಂ.ಎಸ್.ಮೂರ್ತಿ ಅವರ 'ಬೌಲ್' ಪುಸ್ತಕದ ಕುರಿತು ಚರ್ಚೆ: ಭಾಷಣಕಾರರು: ಸುಮಿತ್ರಾಬಾಯಿ, ಎನ್. ವಿದ್ಯಾಶಂಕರ್, ಎಂ.ಕೆ. ಶಂಕರ್, ಅಧ್ಯಕ್ಷತೆ: ವಿಜಯ, ಆಯೋಜನೆ: ಭೂಮಿ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4.30

ಆಚಾರ್ಯ ಶಂಕರ ಜಯಂತಿ 'ತತ್ವಜ್ಞಾನಿಗಳ ದಿನಾಚರಣೆ', 'ಹಿರಿಯ ವಿದ್ವಾಂಸರಿಗೆ ಶಂಕರಸೇವಾ' ಪ್ರಶಸ್ತಿ ಪ್ರದಾನ: ಉಪಸ್ಥಿತಿ: ಶ್ರೀಶಾನಂದ, ಕೆ. ಗೋಪಾಲಯ್ಯ, ಬಿ.ಎಸ್. ರಾಘವೇಂದ್ರ ಭಟ್, ಮಲ್ಲಾರಿ ರಾವ್, ಆಯೋಜನೆ: ಮಹಾಲಕ್ಷ್ಮೀಪುರ ಬ್ರಾಹ್ಮಣ ಸಭಾ, ಸ್ಥಳ: ಶ್ರೀಪ್ರಸನ್ನ ವೀರಾಂಜನೇಯಸ್ವಾಮಿ ದೇವಸ್ಥಾನ, ಮಹಾಲಕ್ಷ್ಮೀಪುರ, ಸಂಜೆ 5

ಆದಿ ಶಂಕರಾಚಾರ್ಯರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ.ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಉಪನ್ಯಾಸ: ಪಾವಗಡ ಪ್ರಕಾಶರಾವ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

'ಶ್ರೀನಿವಾಸ ಕಲ್ಯಾಣ' ಪ್ರವಚನ: ಅಶೋಕಾಚಾರ್ಯ ವಿ. ಜೋಶಿ, ಆಯೋಜನೆ: ಶ್ರೀಮಾರುತಿ ಮಹಾಗಣಪತಿ ಸೇವಾ ಸಂಘ, ಸ್ಥಳ: ಪುಣ್ಯಧಾಮ, ಒಂದನೇ ಬ್ಲಾಕ್, ರಾಜಾಜಿನಗರ, ಸಂಜೆ 6.45

ಶಂಕರ ಜಯಂತಿ: ಅತಿಥಿಗಳು: ಜಪಾನಂದಜೀ ಮಹಾರಾಜ, ಪಾವಗಡ ಪ್ರಕಾಶರಾವ್, ಶತಾವಧಾನಿ ಆರ್.ಗಣೇಶ್, ಆರ್.ಕೆ.ಪದ್ಮನಾಭ, ತೇಜಸ್ವಿ ಸೂರ್ಯ, ರವಿ ಸುಬ್ರಹ್ಮಣ್ಯ, ಉದಯ್ ಬಿ. ಗರುಡಾಚಾರ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ಶಂಕರ ಜಯಂತಿ ಸೇವಾ ಸಮಿತಿ, ಸ್ಥಳ: ಶೃಂಗೇರಿ ಶಂಕರಮಠ, ಶಂಕರಪುರ, ಚಾಮರಾಜಪೇಟೆ, ಬೆಳಿಗ್ಗೆ 9.30ರಿಂದ



ಆರ್.ಕೆ. ಪದ್ಮನಾಭ

88ನೇ ಶ್ರೀರಾಮನವಮಿ ಸಂಗೀತೋತ್ಸವ: ಪ್ರತಿಭಾಕಾಂಕ್ಷಿ ಪ್ರಶಸ್ತಿ ಪ್ರದಾನ, ಕರ್ನಾಟಕ ಸಂಗೀತ ಕಛೇರಿ: ಕೆ.ಎಸ್. ವಿಷ್ಣುದೇವ್, ಎಲ್. ರಾಮಕೃಷ್ಣನ್, ಅರ್ಜುನ್ ಕುಮಾರ್, ಭಾರದ್ವಾಜ್ ಸಥವಲ್ಲಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

ರಾಜ್ಯಮಟ್ಟದ ಕನ್ನಡ ರಂಗ ಸ್ಪರ್ಧೆ–2026: 'ಶ್ಮಶಾನ ಕುರುಕ್ಷೇತ್ರಂ' ನಾಟಕ ಪ್ರದರ್ಶನ: ಪ್ರಸ್ತುತಿ: ಕಲಾರಾಧ್ಯ, ಆಯೋಜನೆ: ರಂಗಾಸ್ಥೆ, ಸ್ಥಳ: ಯುವಪಥ, ಜಯನಗರ ನಾಲ್ಕನೇ ಹಂತ, ಸಂಜೆ 7

'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ಭಾಸ್ಕರ್ ನೀನಾಸಂ, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಕೈತೋಟಕ್ಕೆ ‘ನಗರ ತೋಟಗಾರಿಕೆ’ ತರಬೇತಿ ಬಲ

ಕೃಷಿ ವಿ.ವಿ.ಯಿಂದ ಒಂಬತ್ತು ಶಿಬಿರಗಳು ಪೂರ್ಣ
ತರಬೇತಿ ಪಡೆದ 300ಕ್ಕೂ ಹೆಚ್ಚು ಮಂದಿ

• ಖಲೀಲಅಹ್ಮದ ಶೇಖ

ಬೆಂಗಳೂರು: ಮನೆಯ ಅಂಗಳದಲ್ಲಿ, ತಾರಸಿಯಲ್ಲಿ, ಖಾಲಿ ನಿವೇಶನಗಳಲ್ಲಿ ಕೈ ತೋಟಗಳ ನಿರ್ಮಾಣಕ್ಕಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆರಂಭಿಸಿರುವ ಎರಡು ದಿನಗಳ ‘ನಗರ ತೋಟಗಾರಿಕೆ’ ತರಬೇತಿಗೆ ನಗರವಾಸಿಗಳಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಿಶ್ವವಿದ್ಯಾಲಯವು ನಗರ ತೋಟಗಾರಿಕೆ ತರಬೇತಿಯ ಮೂಲಕ ನಗರದ ಮನೆ ಮನೆಯಲ್ಲಿ ಹಸಿರು ಬೆಳೆಸುವಂತೆ ನಾಗರಿಕರನ್ನು ಅಣಿಗೊಳಿಸುವ ಕಾರ್ಯಕ್ಕೆ ಮುಂದಾಗಿದೆ.

ಬೆಂಗಳೂರು ನಗರೀಕರಣದ ಕಡೆಗೆ ವೇಗವಾಗಿ ಬೆಳೆಯುತ್ತಿದ್ದು, ಹಸಿರು ಪ್ರದೇಶ ಕಡಿಮೆಯಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಗರ ತೋಟಗಾರಿಕೆ ಪರ್ಯಾಯವಾಗಿದೆ. ಇದುವರೆಗೂ 9 ಶಿಬಿರಗಳು ಪೂರ್ಣಗೊಂಡಿದ್ದು, 300ಕ್ಕೂ ಹೆಚ್ಚು ಮಂದಿ ತರಬೇತಿ ಪಡೆದಿದ್ದಾರೆ. ಅವರೆಲ್ಲ ಈಗ ತಮ್ಮ ಮನೆಯ ತಾರಸಿ, ಖಾಲಿ ಜಾಗಗಳಲ್ಲಿ ಹಣ್ಣು–ತರಕಾರಿ, ಸೊಪ್ಪು, ಹೂವು ಬೆಳೆಯಲು ಪ್ರಾರಂಭಿಸಿದ್ದಾರೆ. ಇದು ನಗರದ ಸೌಂದರ್ಯವನ್ನು ಹೆಚ್ಚಿಸುತ್ತಿದೆ.

ತರಬೇತಿ ಪಡೆದವರು ತಮ್ಮ ಮನೆಯಲ್ಲಿಯೇ ಸಾವಯವ ತರಕಾರಿ ಬೆಳೆದು, ಪೌಷ್ಟಿಕ ಆಹಾರ ಸೇವನೆ ಮಾಡುತ್ತಿದ್ದಾರೆ. ಮನೆಗಳಲ್ಲಿಯೇ ತಾಜಾ ತರಕಾರಿಗಳನ್ನು ಬೆಳೆಯುವುದರ ಜೊತೆಗೆ ಬೆಂಗಳೂರನ್ನು ಹಸಿರಾಗಿಸುವುದು ಈ ತರಬೇತಿಯ ಮೂಲ ಉದ್ದೇಶವಾಗಿದೆ.

‘ವರ್ಷಕ್ಕೊಮ್ಮೆ ಆಯೋಜಿಸುತ್ತಿದ್ದ ‘ನಗರ ತೋಟಗಾರಿಕೆ’ ತರಬೇತಿ ಕಾರ್ಯಾಗಾರಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆದ್ದರಿಂದ ಈ ತರಬೇತಿಯನ್ನು ಪ್ರತಿ ತಿಂಗಳು ಆಯೋಜಿಸಲಾಗುತ್ತಿದ್ದು, ಶುಲ್ಕ ನಿಗದಿಪಡಿಸಲಾಗಿದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ ‘ಪ್ರಜಾವಾಣಿ’ಗೆ ತಿಳಿಸಿದರು.

ತರಬೇತಿ: ‘ಮನೆಯಲ್ಲಿ ಒಣ ಮತ್ತು ಹಸಿ ತ್ಯಾಜ್ಯವನ್ನು ಗೊಬ್ಬರವಾಗಿಸುವುದು, ಬೀಜದಿಂದ ಗಿಡ ಬೆಳೆಸುವುದು, ಗೊಬ್ಬರ ಬೆರೆಸಿ ಮಣ್ಣನ್ನು ಹದಗೊಳಿಸುವುದು, ಕುಂಡಗಳಲ್ಲಿ ಗಿಡಗಳನ್ನು ನೆಟ್ಟು ಆರೈಕೆ ಮಾಡುವುದು, ತಾರಸಿ ತೋಟ, ಲಂಬ ತೋಟಗಾರಿಕೆ (ವರ್ಟಿಕಲ್ ಗಾರ್ಡನಿಂಗ್), ಒಳಾಂಗಣದಲ್ಲಿ ಸಸ್ಯಗಳನ್ನು ಬೆಳೆಸುವುದು, ಸಸ್ಯ ರೋಗಗಳು/ಕೀಟ ಬಾಧೆ ನಿರ್ವಹಣೆಯ ಸಾಮಾನ್ಯ ಅಂಶಗಳ ಬಗ್ಗೆ ಮಾಹಿತಿ ನೀಡುವುದು ಸೇರಿದಂತೆ ವಿವಿಧ ಆಯಾಮಗಳಲ್ಲಿ ತರಬೇತಿ ನೀಡಲಾಗುತ್ತದೆ’ ಎಂದು ಅವರು ವಿವರಿಸಿದರು.


‘ತರಬೇತಿಯಲ್ಲಿ ಪ್ರಾಯೋಗಿಕ ಕಲಿಕೆಗೆ ಒತ್ತು ನೀಡಲಾಗುತ್ತದೆ. ತರಬೇತಿ ನಂತರವೂ ವಿಶ್ವವಿದ್ಯಾಲಯದ ಸಂಪರ್ಕದಲ್ಲಿದ್ದು ಮಾಹಿತಿ ಪಡೆಯಬಹುದು. ತರಬೇತಿಯಲ್ಲಿ ಭಾಗವಹಿಸಿದವರಿಗೆ ಹಣ್ಣು, ತರಕಾರಿ, ಹೂವಿನ ಬೀಜಗಳು, ಕೈತೋಟ ಕುರಿತ ಮಾಹಿತಿ ಪತ್ರವನ್ನೊಳಗೊಂಡ ಕಿಟ್ ನೀಡಲಾಗುತ್ತದೆ’ ಎಂದರು.

ತರಬೇತಿಗೆ ₹1,770 ಶುಲ್ಕ: ಎರಡು ದಿನಗಳ ತರಬೇತಿಗೆ ₹1,770 ಶುಲ್ಕ ನಿಗದಿಪಡಿಸಲಾಗಿದೆ. ಈ ಶುಲ್ಕದಲ್ಲಿ ಊಟ, ಟೀ, ಲಘು ಉಪಾಹಾರದ ಜೊತೆಗೆ, ಮಾಹಿತಿ ಪತ್ರವನ್ನೊಳಗೊಂಡ ಕಿಟ್ ಕೂಡ ನೀಡಲಾಗುತ್ತದೆ’ ಎಂದು ಕೃಷಿ ವಿಶ್ವವಿದ್ಯಾಲಯದ ತೋಟಗಾರಿಕೆ ವಿಭಾಗದ ಸಿಬ್ಬಂದಿ ತಿಳಿಸಿದರು.


ಮನೆಯ ತಾರಸಿಯಲ್ಲಿ ಬೆಳೆದಿರುವ ಡ್ರ್ಯಾಗನ್ ಫ್ರೂಟ್


ತರಬೇತಿಯಲ್ಲಿ ತಜ್ಞರೊಬ್ಬರು ಮಾಹಿತಿ ನೀಡಿದರು

‘ಸಮುದಾಯ ತೋಟ ನಿರ್ಮಿಸಲು ಅವಕಾಶ’



ಮನೆಯಲ್ಲಿ ತಾರಸಿ ತೋಟ ನಿರ್ಮಿಸುವುದರಿಂದ ಮಕ್ಕಳಿಗೆ ಬೀಜ, ಎಲೆ, ಹೂವು, ಹಣ್ಣು ಯಾವ ರೀತಿಯಾಗಿ ಬೆಳೆಯಲಾಗುತ್ತದೆ ಎಂಬ ಮಾಹಿತಿ ನೀಡಬಹುದು. ನಗರದ ಬಡಾವಣೆಗಳಲ್ಲಿ ಖಾಲಿ ಇರುವ ನಿವೇಶನಗಳಲ್ಲಿ ಸ್ಥಳೀಯರು ಸೇರಿಕೊಂಡು ಸಮುದಾಯ ತೋಟವನ್ನು ನಿರ್ಮಿಸಬಹುದು. ತಮಗೆ ಬೇಕಾದ ತರಕಾರಿ–ಹಣ್ಣು ಸೇರಿದಂತೆ ಆಲಂಕಾರಿಕ ಗಿಡಗಳನ್ನು ಬೆಳೆಸಿ, ನಗರದ ಸೌಂದರ್ಯವನ್ನು ಹೆಚ್ಚಿಸಬಹುದು’ ಎಂದು ಎಸ್‌.ವಿ. ಸುರೇಶ ತಿಳಿಸಿದರು.

ಯಾರೆಲ್ಲ ತರಬೇತಿ ಪಡೆಯಬಹುದು?

‘ಕಡಿಮೆ ಜಾಗ ಇದೆ, ತೋಟ ಮಾಡುವುದು ಹೇಗೆ’ ಎಂದು ಚಿಂತಿಸುತ್ತಿರುವವರು, ‘ಮನೆಯೊಳಗೆ ಆಲಂಕಾರಿಕ ಸಸ್ಯಗಳನ್ನು ಬೆಳೆಸಬೇಕು’ ಎಂದು ಯೋಚಿಸುತ್ತಿರುವವರು, ಅಪಾರ್ಟ್‌ಮೆಂಟ್‌ಗಳಲ್ಲಿರುವ ತೆರೆದ ಸ್ಥಳಗಳಲ್ಲಿ ತೋಟ ಮಾಡಲು ಬಯಸುವವರು. ಒಟ್ಟಾರೆ, ಕೈತೋಟ ಮಾಡಲು ಉತ್ಸಾಹ, ಆಸಕ್ತಿ ಇರುವ ‘ಹಸಿರು ಪ್ರೀತಿಯ’ ಮನಸ್ಸಿನವರು ನಗರ ತೋಟಗಾರಿಕೆ ತರಬೇತಿಯಲ್ಲಿ ಭಾಗವಹಿಸಬಹುದು.

ಜೂನ್ 28–29ರಂದು ಕಾರ್ಯಾಗಾರ: ‘ನಗರ ತೋಟಗಾರಿಕೆ’ ಕುರಿತ ಮುಂದಿನ ಕಾರ್ಯಾಗಾರ ಏಪ್ರಿಲ್ 28 ಮತ್ತು 29ರಂದು ಜಿಕೆವಿಕೆಯಲ್ಲಿ ಆಯೋಜಿಸಲಾಗುತ್ತಿದೆ. ಇದರಲ್ಲಿ 30 ಜನರಿಗೆ ಮಾತ್ರ ಪಾಲ್ಗೊಳ್ಳಲು ಅವಕಾಶವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಆಸಕ್ತರು 63604 66004/ 94817 35592 ಸಂಪರ್ಕಿಸಿ, ನೋಂದಣಿ ಮಾಡಿಕೊಳ್ಳಬಹುದು.


ಇಂದಿರಾನಗರದ ಶ್ರೀನಿವಾಸಮೂರ್ತಿ ಅವರ ಮನೆಯ ತಾರಸಿಯಲ್ಲಿ ಬೆಳೆದಿರುವ ವಿವಿಧ ಬಗೆಯ ಹೂವಿನ ಗಿಡಗಳು

‘1,200 ಚದರಡಿಯಲ್ಲಿ ತಾರಸಿ ತೋಟ’



ನಗರ ತೋಟಗಾರಿಕೆ ಕುರಿತು ತರಬೇತಿ ಪಡೆಯುವ ಮುನ್ನವೇ ನಾನು 1,200 ಚದರಡಿ ಪ್ರದೇಶದಲ್ಲಿ ತಾರಸಿ ತೋಟ ನಿರ್ಮಿಸಿದ್ದೇನೆ. ಜಿಕೆವಿಕೆಯಲ್ಲಿ ತರಬೇತಿ ಪಡೆದ ನಂತರ ಹೆಚ್ಚುವರಿ ಮಾಹಿತಿ ಪಡೆದುಕೊಂಡು ವ್ಯವಸ್ಥಿತವಾಗಿ ತಾರಸಿ ತೋಟವನ್ನು ನಿರ್ವಹಣೆ ಮಾಡುತ್ತಿದ್ದೇನೆ. ಈಗ ಸಾವಯವ ತರಕಾರಿ, ಹಣ್ಣು, ಆಲಂಕಾರಿಕ ಗಿಡಗಳನ್ನು ಬೆಳೆಯುತ್ತಿದ್ದೇನೆ. ಇದರ ಜೊತೆಗೆ ಸಾವಯವ ಗೊಬ್ಬರದ ಬಳಕೆ ಮಾಡುತ್ತಿದ್ದು, ಜಿಕೆವಿಕೆಯಲ್ಲಿ ಸಿಗುವ ಜೀವಾಮೃತ ಖರೀದಿಸಿ ತಾರಸಿ ತೋಟಕ್ಕೆ ಹಾಕುತ್ತಿದ್ದೇನೆ. ನಗರದ ಜನ ಈ ತರಬೇತಿ ಪಡೆದುಕೊಂಡು, ತಮ್ಮ ಮನೆಗಳನ್ನು ಹಸಿರೀಕರಣ ಮಾಡಿಕೊಳ್ಳಲು ಸಹಾಯಕವಾಗಲಿದೆ’ ಎಂದು ಇಂದಿರಾನಗರದ ಶ್ರೀನಿವಾಸಮೂರ್ತಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಾಹಿತಿ ಪ್ರಧಾನ ತರಬೇತಿ’

‘ಮನೆಯಲ್ಲಿ ತರಕಾರಿ, ಹೂವು, ಹಣ್ಣಿನ ಗಿಡಗಳನ್ನು ಬೆಳೆಸುವುದರಲ್ಲಿ ನನಗೆ ಬಹಳ ಆಸಕ್ತಿ ಇತ್ತು. ಜಿಕೆವಿಕೆಯಲ್ಲಿ ಈ ಬಗ್ಗೆ ತರಬೇತಿ ಪಡೆದುಕೊಂಡು ನಮ್ಮ ಮನೆಯ ಸುತ್ತಲೂ ಇರುವ ಜಾಗದಲ್ಲಿ, ಕುಂಡಗಳಲ್ಲಿ ತರಕಾರಿ ಹಾಗೂ ಹಣ್ಣುಗಳನ್ನು ಬೆಳೆಯುತ್ತಿದ್ದೇನೆ. ನಾವು ಬೆಳೆದ ತರಕಾರಿಗಳನ್ನು ಸೇವನೆ ಮಾಡುವುದರಲ್ಲಿ ಒಂಥರಾ ಖುಷಿ ಇದೆ’ ಎಂದು ಸಂಜಯನಗರದ ರಾಜಲಕ್ಷ್ಮಿ ತಿಳಿಸಿದರು.


ಭುವನೇಶ್ವರಿ ನಗರದ ಮಾಸ್ಟರ್ ಪಿಯು ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ರೈತರನ್ನು ಅಭಿನಂದಿಸಲಾಯಿತು

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ರೈತರಿಗೆ ಅಭಿನಂದನೆ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಇತರರ ಸಾಧನೆ ಕಂಡು ಅಸೂಯೆ ಪಡದೆ ಅವರಂತೆ ನಾವೂ ಹೆಚ್ಚು ಅಂಕ ಪಡೆದು ಸಮಾಜಕ್ಕೆ ಕೀರ್ತಿ ತರಬೇಕು’ ಎಂದು ಸೋಮನಹಳ್ಳಿ ಎಜುಕೇಷನಲ್ ಸೊಸೈಟಿ ಅಧ್ಯಕ್ಷ ಆನಂದ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಭುವನೇಶ್ವರಿ ನಗರದ ಮಾಸ್ಟರ್ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ದ್ವಿತೀಯ ಪಿಯುನಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ರೈತರಿಗೆ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

‘ಪೋಷಕರು ತಮ್ಮ ಮಕ್ಕಳನ್ನು ಸ್ನೇಹಿತರಂತೆ ಭಾವಿಸಿ ಅವರಿಗೆ ಕಾಲೇಜಿನಲ್ಲಿ ನಡೆದ ಪಾಠ–ಪ್ರವಚನದ ಬಗ್ಗೆ ವಿಚಾರಿಸಬೇಕು. ಅವರ ವಿದ್ಯಾಭ್ಯಾಸದ ಮೇಲೆ ಗಮನ ಹರಿಸಬೇಕು’ ಎಂದರು.

ಪ್ರಾಂಶುಪಾಲ ಕೆ.ಎಸ್. ಮಲ್ಲಿಕಾರ್ಜುನ ಎಸ್. ಮಾತನಾಡಿ, ‘ರೈತರ ಶ್ರಮ ವಿದ್ಯಾರ್ಥಿಗಳಿಗೆ ಅರಿವಾಗಲಿ, ಹಾಗೆಯೇ ಅವರಿಗೆ ಗೌರವ ಕೊಡುವುದನ್ನು ಕಲಿಯಲಿ’ ಎಂದು ತಿಳಿಸಿದರು.

ರೈತ ಪಾಪಣ್ಣ ಮಾತನಾಡಿ, ‘ನಮಗೆ ಅಭಿನಂದಿಸಿರುವುದು ಹೆಮ್ಮೆಯ ಸಂಗತಿ. ಯಾರೊಬ್ಬರೂ ರೈತರ ಬಗ್ಗೆ ಗಮನ ಹರಿಸುತ್ತಿರಲಿಲ್ಲ. ಇದು ಎಲ್ಲರಿಗೂ ಮಾದರಿಯಾಗಲಿ’ ಎಂದರು. ಶೇ 95ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ತಲಾ ₹10 ಸಾವಿರ ನಗದು, ಪದಕ ನೀಡಿ ಸನ್ಮಾನಿಸ ಲಾಯಿತು. ಎನ್‌.ಜಿ. ಗಂಗಣ್ಣ, ಪಾಪಣ್ಣ ಉಪಸ್ಥಿತರಿದ್ದರು.

ಅಪಘಾತ: ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಮಧುರೆ ರಸ್ತೆಯ ಬೆನಕ ಕಲ್ಯಾಣ ಮಂಟಪದ ಬಳಿ ದ್ವಿಚಕ್ರ ವಾಹನ ಹಾಗೂ ಬಿಎಂಟಿಸಿ ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ದ್ವಿಚಕ್ರ ವಾಹನ ಸವಾರ ಮೃತಪಟ್ಟಿದ್ದಾರೆ.

ಬಸವೇಶ್ವರ ನಗರದ ನಿವಾಸಿ ನಾಗರಾಜು (61) ಮೃತಪಟ್ಟವರು. ಮಿಲ್ಕ್ ಪಾರ್ಲರ್‌ನಲ್ಲಿ ಬಸವರಾಜ್ ಕೆಲಸ ಮಾಡುತ್ತಿದ್ದರು ಎಂದು ಸಂಚಾರ ಪೊಲೀಸರು ಹೇಳಿದರು.

ಸೋಮವಾರ ಬೆಳಿಗ್ಗೆ ಕನ್ನಮಂಗಲದಲ್ಲಿರುವ ಪುತ್ರಿಯ ಮನೆಗೆ ನಾಗರಾಜು ಹೋಗುತ್ತಿದ್ದರು. ಅದೇ ವೇಳೆ ನೆಲಮಂಗಲದಿಂದ ಯಲಹಂಕಕ್ಕೆ ಬಿಎಂಟಿಸಿ ಬಸ್ ವೇಗವಾಗಿ ತೆರಳುತ್ತಿತ್ತು.

ಮಧುರೆ ರಸ್ತೆಯ ಕಲ್ಯಾಣ ಮಂಟಪದ ಎದುರು ಬಿಎಂಟಿಸಿ ಬಸ್ ಹಾಗೂ ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿದೆ.

ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ ನಾಗರಾಜು ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಚಿಕ್ಕಬಾಣಾವರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿರ್ಜಲೀಕರಣ

ಬೇಸಿಗೆಯ ಬೇಗೆಯ ಬೇನೆ

ವಾತಾವರಣದಲ್ಲಿ ತಾಪಮಾನ ಹೆಚ್ಚಾದ್ದಂತೆ ದೇಹದಲ್ಲಿ ನೀರಿನಂಶದ ಕೊರತೆಯಾಗಿ ನಿರ್ಜಲೀಕರಣ ಸಮಸ್ಯೆ ಉಂಟಾಗಬಹುದು. ಇಂಥ ಸಂದರ್ಭದಲ್ಲಿ ಸೂಕ್ತ ಆರೈಕೆ ಮುಖ್ಯ

• ಡಾ. ವಿಜಯಲಕ್ಷ್ಮಿ ಪಿ.

ಬೇಸಿಗೆಯಲ್ಲಿ ಅತಿಯಾಗಿ ಕಾಡುವ ತೊಂದರೆ ಎಂದರೆ ನಿರ್ಜಲೀಕರಣ (ಡಿಹೈಡ್ರೇಷನ್). ಎಂದರೆ, ದೇಹದಲ್ಲಿ ನೀರಿನಂಶವು ಕಡಿಮೆಯಾಗುವುದು. ನಾಲಗೆ, ಗಂಟಲು, ಮೈ ಮತ್ತು ಚರ್ಮಗಳ ಒಣಗುವಿಕೆ – ಹೀಗೆ ಅನೇಕ ಲಕ್ಷಣಗಳನ್ನು 'ನಿರ್ಜಲೀಕರಣ'ದ ಸಮಯದಲ್ಲಿ ಗಮನಿಸಬಹುದು.

ನಿರ್ಜಲೀಕರಣವು ಹೆಚ್ಚಾಗಿ ನಾವು ಸಾಕಷ್ಟು ದ್ರವಗಳನ್ನು ಸೇವಿಸದ ಕಾರಣ ಉಂಟಾಗುತ್ತದೆ. ಹೆಚ್ಚಿನ ತಾಪಮಾನ ಮತ್ತು ಬಿಸಿ ವಾತಾವರಣದಿಂದಾಗಿ ದೇಹದಲ್ಲಿ ದ್ರವನಷ್ಟಗೊಳ್ಳುವ ವೇಗ ಹೆಚ್ಚಾಗುತ್ತದೆ. ಅತಿಯಾದ ವ್ಯಾಯಾಮ ಅಥವಾ ಅತಿಯಾದ ಶ್ರಮದ ಕೆಲಸ ಮಾಡುವುದರಿಂದ ಬೆವರುವಿಕೆ ಹೆಚ್ಚಾಗಿ ನಿರ್ಜಲೀಕರಣ ಸಂಭವಿಸಬಹುದು. ಕೆಲವು ದೀರ್ಘಕಾಲೀನ ರೋಗಗಳೂ ನಿರ್ಜಲೀಕರಣಕ್ಕೆ ಕಾರಣವಾಗಬಹುದಾದರೂ, ಅತಿಯಾದ ಶಾಖ ಅಥವಾ ನೀರಿನಂಶದ ಕೊರತೆಯೇ ನಿರ್ಜಲೀಕರಣಕ್ಕೆ ಮುಖ್ಯ ಕಾರಣವಾಗುತ್ತದೆ. ಇದಲ್ಲದೆ ಕಡಿಮೆ ಆಮ್ಲಜನಕ, ಶುಷ್ಕ ಗಾಳಿ, ಅತಿಯಾದ ಮಾನಸಿಕ ಒತ್ತಡ – ಇವು ಕೂಡ ನಿರ್ಜಲೀಕರಣಕ್ಕೆ ಕಾರಣವಾಗಬಲ್ಲದು. ಸಾಮಾನ್ಯವಾಗಿ ಬೇಸಿಗೆಯಲ್ಲಿ ನಿರ್ಜಲೀಕರಣದ ಸಮಸ್ಯೆ ಹೆಚ್ಚು.

ಈ ಲಕ್ಷಣಗಳು ಕಂಡುಬಂದರೆ ತಜ್ಞರನ್ನು ಭೇಟಿ ಮಾಡಿ: ದ್ರವಪದಾರ್ಥಗಳನ್ನು ಕುಡಿದ ನಂತರವೂ ಬಾಯಾರಿಕೆ ತಣಿಯದಿದ್ದರೆ, ಬಾಯಿ ಒಣಗಿದರೆ, ಕಡಿಮೆ ಮೂತ್ರ ವಿಸರ್ಜನೆಯಾಗುತ್ತಿದ್ದರೆ, ಮೂತ್ರ ಹಳದಿಬಣ್ಣದ್ದಾಗಿದ್ದರೆ, ಎದ್ದು ನಿಂತಾಗ ತಲೆಸುತ್ತುವಂತಾಗುತ್ತಿದ್ದರೆ, 24 ಗಂಟೆಗಳಿಗೂ ಹೆಚ್ಚು ಕಾಲ ನಿರಂತರ ತಲೆನೋವಿದ್ದರೆ, ನಿದ್ರೆ ಬಾರದಿದ್ದರೆ, ಕೈ ಕಾಲುಗಳು ಎಳೆದಂತಾದರೆ, ವಿನಾ ಕಾರಣ ಹೃದಯದ ಬಡಿತ ಹೆಚ್ಚಾದರೆ, ನಿರಂತರವಾದ ಸ್ನಾಯುಸೆಳೆತ ಉಂಟಾದರೆ, ವಿನಾ ಕಾರಣ ಮಾನಸಿಕ ಒತ್ತಡ ಹೆಚ್ಚಾದರೆ, ಮೂರ್ಛೆ ಬಂದಂತಾದರೆ, ಆಲಸ್ಯ, ಕಿರಿಕಿರಿ – ಇಂತಹ ಲಕ್ಷಣಗಳು ನಿರಂತರವಾಗಿ ಕಂಡುಬಂದರೆ ದೇಹದಲ್ಲಿ ನಿರ್ಜಲೀಕರಣ ವಾದೀತು ಎಂಬುದನ್ನು ಗಮನಿಸಿ, ಹೆಚ್ಚಾದರೆ ತಜ್ಞವೈದ್ಯರನ್ನು ಕೂಡಲೇ ಭೇಟಿ ಮಾಡಬೇಕು.


ನಿಮ್ಮ ದೇಹವು ತನ್ನ ತಾಪಮಾನವನ್ನು ನಿಯಂತ್ರಿಸಲು ಹೆಣಗಾಡಿದಾಗ ಶಾಖದ ಬಳಲಿಕೆಯು ಸಂಭವಿಸಬಹುದು. ಚಿಕಿತ್ಸೆ ನೀಡದಿದ್ದರೆ, ಶಾಖದ ಬಳಲಿಕೆಯು ವೈದ್ಯಕೀಯ ತುರ್ತುಸ್ಥಿತಿಯಾದ ಶಾಖದ ಹೊಡೆತಕ್ಕೆ 'ಸನ್-ಸ್ಟ್ರೋಕ್' ಕಾರಣವಾಗಬಹುದು. ನಿರ್ಜಲೀಕರಣಕ್ಕೂ, ಶಾಖದ ಬಳಲಿಕೆಗೂ ಇರುವ, ಸುಲಭದಲ್ಲಿ ಗಮನಿಸಬಹುದಾದ ಪ್ರಮುಖ ವ್ಯತ್ಯಾಸವೆಂದರೆ, ನಿರ್ಜಲೀಕರಣದಲ್ಲಿ ಚರ್ಮದ ಉಷ್ಣತೆ ಹೆಚ್ಚಾಗಿರುತ್ತದೆ, ಶಾಖದ ಬಳಲಿಕೆಯಲ್ಲಿ ಅತಿಯಾಗಿ ಬೆವರಿ ಚರ್ಮವು ತಂಪಾಗಿರುತ್ತದೆ.

ಒಣ ಚರ್ಮ ಮತ್ತು ಕಡಿಮೆ ಮೂತ್ರವಿಸರ್ಜನೆಯೊಂದಿಗೆ ಬಾಯಾರಿಕೆಯ ಅನುಭವವಾದರೆ, ನಿರ್ಜಲೀಕರಣದ ಸಾಧ್ಯತೆ ಹೆಚ್ಚು. ಶಾಖಕ್ಕೆ ಒಡ್ಡಿಕೊಂಡ ನಂತರ ಅತಿಯಾಗಿ ಬೆವರು, ತಲೆತಿರುಗುವಿಕೆ, ವಾಕರಿಕೆ ಮತ್ತು ದೌರ್ಬಲ್ಯವನ್ನು ಅನುಭವಿಸಿದರೆ, ಅದು ಶಾಖದ ಬಳಲಿಕೆಯಾಗಿರಬಹುದು. ದೇಹದ ಉಷ್ಣತೆಯ ಏರಿಕೆಯೊಂದಿಗೆ ಗೊಂದಲ ಅಥವಾ ಮೂರ್ಛೆ ಹೋದರೆ ತಕ್ಷಣದ ವೈದ್ಯಕೀಯ ಚಿಕಿತ್ಸೆ ಅಗತ್ಯ.

ಇಂತಹ ಸಮಸ್ಯೆಗಳು ಮಕ್ಕಳು ಮತ್ತು ವೃದ್ಧರು, ಹೊರಾಂಗಣ ಕೆಲಸಗಾರರು, ಕ್ರೀಡಾಪಟುಗಳು, ದೀರ್ಘಕಾಲದ ಕಾಯಿಲೆಗಳಿಂದ ಬಳಲುತ್ತಿರುವ ಜನರು, ದೀರ್ಘಕಾಲದವರೆಗೆ ಹೆಚ್ಚಿನ ತಾಪಮಾನಕ್ಕೆ ಒಡ್ಡಿಕೊಂಡ ವ್ಯಕ್ತಿಗಳಲ್ಲಿ ಕಂಡುಬಂದರೆ ಕೂಡಲೇ ಜಾಗ್ರತೆ ವಹಿಸಬೇಕು. ಇಂತಹ ಸಂದರ್ಭಗಳನ್ನು ತಡೆಗಟ್ಟಲು ನೀರು ಅಥವಾ ಮೌಖಿಕ ಪುನರ್ಜಲೀಕರಣ ದ್ರಾವಣಗಳನ್ನು (ORS) ಕುಡಿಯಿರಿ. ಕೇವಲ ತಣ್ಣೀರನ್ನು ಅತಿಯಾಗಿ ಸೇವಿಸುವುದರಿಂದ ಜೀರ್ಣಶಕ್ತಿಯು ಕಡಿಮೆಯಾಗಿ ಅಜೀರ್ಣದಿಂದ ಉಟಾಗುವ ರೋಗಗಳಾದ ವಾಂತಿ, ಮೈಭಾರ ಮುಂತಾದವುಗಳು ಸಂಭವಿಸಬಹುದು. ಆದ್ದರಿಂದ ನೀರಿಗೆ ಶ್ರೀಗಂಧ, ಲಾವಂಚ, ಕಚೋರ, ಸೋಗದೇಬೇರು, ಏಲಕ್ಕಿ, ಅಥವಾ ಜೀರಿಗೆ ಬೆರೆಸಿ ನೀರನ್ನು ಕುದಿಸಿ ತಣಿಸಿ ಸೇವಿಸುವುದರಿಂದ ಬೆವರುವುದನ್ನು ಕಡಿತಗೊಳಿಸಿ, ನಿರ್ಜಲೀಕರಣವಾಗುವುದನ್ನು ತಪ್ಪಿಸಬಹುದು.

ಈ ಸಮಯದಲ್ಲಿ ಕಲ್ಲಂಗಡಿ, ಕರ್ಬೂಜ, ಸೊಗದೆಬೇರು, ನಿಂಬೆ, ಮೂಸಂಬಿ, ಪುನರ್ಪುಳಿ – ಹೀಗೆ ವಿವಿಧ ಹಣ್ಣಿನ ರಸದಿಂದ ಮಾಡಲಾದ ಪಾನೀಯಗಳನ್ನು ಸೇವಿಸಿದಷ್ಟು ತಂಪಾಗಿರಿಸುವುದಲ್ಲದೆ, ಆಗತ್ಯ ಪೋಷಕಾಂಶಗಳನ್ನೂ ಒದಗಿಸುತ್ತದೆ. ಮೊಸರಿಗೆ ಸಕ್ಕರೆ ಸೇರಿಸಿ ಸೇವಿಸುವುದು, ಕಡೆದ ಮಜ್ಜಿಗೆಗೆ ಸ್ವಲ್ಪ ಸೈಂದುಪ್ಪು ಬೆರೆಸಿ ಸೇವಿಸುವುದರಿಂದ ಲವಣಾಂಶದ ಕೊರತೆಯಿಂದ ಉಂಟಾಗುವ ಅತಿಸಾರ, ವಾಂತಿಯನ್ನು ತಡೆಗಟ್ಟಬಹುದು. ಪಾಲಿಶ್ ಮಾಡದ ದೇಸೀ ತಳಿ ಅಕ್ಕಿಯನ್ನು ತೊಳೆದ ನೀರಿಗೆ, ಸ್ವಲ್ಪ ಏಲಕ್ಕಿ ಸ್ವಲ್ಪ ಸಕ್ಕರೆ ಅಥವಾ ಬೆಲ್ಲ ಬೆರೆಸಿ ಸೇವಿಸುವುದರಿಂದ ಮೈ ಉರಿ, ಅಂಗೈ, ಅಂಗಾಲುರಿಯನ್ನು ತಡೆಗಟ್ಟಬಹುದು. ಹಣ್ಣುಗಳ ಸೇವನೆ ಮತ್ತು ಹಸಿಮೆಣಸಿನಕಾಯಿ ಹಾಕದೇ ಇರುವ ಕೋಸಂಬರಿಗಳ ಸೇವನೆಯೂ ಹಿತಕರ.

ನಿರ್ಜಲೀಕರಣವನ್ನು ತಡೆಗಟ್ಟಲು ನಿತ್ಯವೂ ಮೈಗೆ ಎಣ್ಣೆ ಹಚ್ಚಿ ಹದ ಬಿಸಿನೀರಿನಲ್ಲಿ ಸ್ನಾನ ಮಾಡುವುದು; ಸುಗಂಧ ದ್ರವ್ಯಗಳಾದ ಶ್ರೀಗಂಧ, ಗೋಪಿಚಂದನ ಹಚ್ಚಿಕೊಳ್ಳುವುದು; ಕಡಿಮೆ ವ್ಯಾಯಮ ಮಾಡುವುದು; ಗರಿಷ್ಠ ಶಾಖದ ಸಮಯದಲ್ಲಿ (ಮಧ್ಯಾಹ್ನ 12ರಿಂದ ಸಂಜೆ 4 ರವರೆಗೆ) ಹೊರಾಂಗಣ ಚಟುವಟಿಕೆಗಳನ್ನು ತಪ್ಪಿಸುವುದು; ಹಗುರವಾದ, ಉಸಿರಾಡಲು ಸುಲಭವಾಗುವ, ತಿಳಿ ಬಣ್ಣದ, ಬಟ್ಟೆಗಳನ್ನು ಧರಿಸುವುದು; ಹೊರಾಂಗಣದಲ್ಲಿ ಕೆಲಸ ಮಾಡುತ್ತಿದ್ದರೆ ಆಗಾಗ್ಗೆ ವಿರಾಮವನ್ನು ತೆಗೆದುಕೊಳ್ಳುವುದು; ತಂಪಾದ ಸ್ಥಳದಲ್ಲಿ ವಿಶ್ರಾಂತಿ ತೆಗೆದುಕೊಳ್ಳುವುದು; ಕಾಫಿ, ಚಹಾ, ಮದ್ಯಪಾನಗಳಿಂದ ದೂರವಿರುವುದು; ಅತಿಯಾದ ಖಾರ, ಹಸಿಮೆಣಸಿನಕಾಯನ್ನು ಸೇವಿಸದಿರುವುದು – ಇಂತಹ ಬದಲಾವಣೆಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.



ಹೆಚ್ಚಿನ ಪ್ರಯೋಜನವಾಗುತ್ತದೆ. ಪ್ರಕೃತಿ ಚಿಕಿತ್ಸಕರ ಪ್ರಕಾರ ಕಲ್ಲಂಗಡಿ ಮತ್ತು ಕರ್ಬೂಜ ಹಣ್ಣಿನ ಸೇವನೆಯ ನಂತರ ಸಮಪ್ರಮಾಣ ನೀರನ್ನು ಕುಡಿದರೆ ಆಗ ಅವು ದೇಹದ ಕಶ್ಮಲಗಳನ್ನು ಸಂಪೂರ್ಣವಾಗಿ ಹೊರಹಾಕಲು ಸಮರ್ಥವಾಗುತ್ತವೆ.

ಇನ್ನು ಆರೋಗ್ಯದ ದೃಷ್ಟಿಯಿಂದ ಎಳನೀರು ಹಿತವಾಗಿದ್ದು, ಇದು ನೈಸರ್ಗಿಕ ಪಾನೀಯವಾಗಿದ್ದು, ನಮ್ಮ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಬೇಸಿಗೆ ದಿನಗಳಲ್ಲಿ ದೇಹದ ಉಷ್ಣಾಂಶವನ್ನು ತಂಪುಗೊಳಿಸುವಲ್ಲಿ ಎಳನೀರಿನ ಪಾತ್ರ ಬಹಳಷ್ಟಿದೆ. ಇದು ಕೇವಲ ಬಾಯಾರಿಕೆಯನ್ನು ಮಾತ್ರ ನೀಗಿಸದೆ, ಆರೋಗ್ಯದ ದೃಷ್ಟಿಯಿಂದಲೂ ಅತಿ ಉತ್ತಮ.

ಇದಲ್ಲದೆ ಹೆಸರುಕಾಳಿನ ಹಾಲಿಗೆ, ರಾಗಿಹಾಲಿಗೆ, ಬೆಲ್ಲ, ಏಲಕ್ಕಿ ಬೆರೆಸಿ ಸೇವಿಸುವುದು ದೇಹವನ್ನು

ಹೆರಿಗೆಗೆ ಅಣಿಯಾಗುವ ಮುನ್ನ



• ಡಾ. ಶ್ರೀನಿವಾಸ ಹರಪನಹಳ್ಳಿ

ತಾಯ್ತನ ಹೆಣ್ಣುಮಕ್ಕಳಿಗೆ ದೊರಕುವ ಒಂದು ಅಮೂಲ್ಯ ಭಾಗ್ಯ. ಭಾರತೀಯ ಕುಟುಂಬಗಳಲ್ಲಿ ಗರ್ಭಾವಸ್ಥೆ ಮತ್ತು ಹೆರಿಗೆಯ ಸಮಯ ಹಬ್ಬದ ವಾತಾವರಣವನ್ನೇ ಸೃಷ್ಟಿಸುತ್ತದೆ. ಅದರಲ್ಲೂ ಪ್ರಥಮಬಾರಿಗೆ ಗರ್ಭಿಣಿಯಾದಾಗ ಸಂತೋಷ, ಸಡಗರ ಮತ್ತು ಆತಂಕಗಳು ಕೊಂಚ ಹೆಚ್ಚೇ ಅನ್ನಿಸುವಷ್ಟು ಬಿಂಬಿತವಾಗುತ್ತವೆ. ಹೌದು, ಹೆರಿಗೆ ಸಂದರ್ಭದಲ್ಲಿ ಹಲವು ಆತಂಕಗಳೂ ಕಾಡುತ್ತವೆ. ಗರ್ಭಾವಸ್ಥೆಯ ನವಮಾಸಗಳು ಕಳೆದು ಹೆರಿಗೆಯ ದಿನಗಳು ಹತ್ತಿರವಾಗುತ್ತಿದ್ದಂತೆಯೇ ಕೆಲವು ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡರೆ ಹೆರಿಗೆಯನ್ನು ಸುಸೂತ್ರವಾಗಿ ಮುಗಿಸಿಕೊಳ್ಳಬಹುದು.

ಸಾಮಾನ್ಯವಾಗಿ ಒಂಬತ್ತು ತಿಂಗಳು ಅಥವಾ 38 ವಾರಗಳು ತುಂಬಿದ ನಂತರವೇ ಹೆರಿಗೆಯಾಗುವುದು. ಸುಮಾರು ಶೇ 5-15ರಷ್ಟು ಸ್ತ್ರೀಯರಲ್ಲಿ 37 ವಾರಗಳಿಗಿಂತ ಮೊದಲೇ ಹೆರಿಗೆಯಾಗುವ ಸಂಭವವಿರುತ್ತದೆ. ಶೇ 5ರಷ್ಟು ಸಂದರ್ಭಗಳಲ್ಲಿ 40 ವಾರಗಳ ನಂತರ ಹೆರಿಗೆಯಾಗಬಹುದು. ಇವೆಲ್ಲವೂ ಶಿಶುವಿನ ಬೆಳವಣಿಗೆ, ಜರಾಯುವಿನ (ಪ್ಲಾಸೆಂಟಾ) ಪರಿಪಕ್ವತೆ ಮತ್ತು ತಾಯಿಯ ಆರೋಗ್ಯದ ಮೇಲೆ ಅವಲಂಬಿಸಿರುತ್ತವೆ.

ಮುಟ್ಟು ನಿಂತ ದಿನಾಂಕದಿಂದ ಹೆರಿಗೆಯ ಅಂದಾಜು ದಿನಾಂಕವನ್ನು ಊಹಿಸಬಹುದಾದರೂ ಒಂದು ವಾರ ಆಚೀಚೆಯಾಗುವ ಸಂಭವಗಳೇ ಹೆಚ್ಚು. ಹಾಗಾಗಿ ಹೆರಿಗೆಯು ಕೆಲವಾರಗಳಿದ್ದಾಗಲೇ ತಯಾರಿಯನ್ನು ಮಾಡಿಕೊಂಡು ಸಿದ್ಧರಾಗಿರುವುದು ಒಳ್ಳೆಯದೇ. ಹಾಗೆಯೇ ಬಹುತೇಕ ಹೆರಿಗೆಗಳು ಯೋನಿಯ ಮೂಲಕ ಸಹಜವಾಗಿಯೆ ಆಗುತ್ತವಾದರೂ ಕೆಲವು ಸಂದರ್ಭಗಳಲ್ಲಿ ಹೊಟ್ಟೆಯನ್ನು ಕೊಯ್ದು 'ಸಿಸೇರಿಯನ್' ಹೆರಿಗೆ ಮಾಡಬೇಕಾಗುತ್ತದೆ.

ತಾಯಿಯ ಗರ್ಭದ್ವಾರದ ತೊಂದರೆಗಳು, ಶಿಶುವಿನ ಹೃದಯಬಡಿತದಲ್ಲಿ ಹಠಾತ್ ಏರಿಳಿಕೆ, ಶಿಶು ಗರ್ಭದಲ್ಲೇ ಮಲ ವಿಸರ್ಜಿಸುವುದು ಅಥವಾ ದಿನಗಳು ತುಂಬಿ ನೋವೇ ಬರದಿದ್ದರೆ ಕೆಲವೊಮ್ಮೆ ಸಿಸೇರಿಯನ್ ಮಾಡಬೇಕಾಗಿ ಬರಬಹುದು. ಹಿಂದಿನ ಬಾರಿ ಸಿಸೇರಿಯನ್ ಆಗಿದ್ದರೆ ಅದರ ಕಾರಣ ತಿಳಿದುಕೊಂಡು ಪ್ರಸೂತಿವೈದ್ಯರು ಮುಂದಿನ ಮಾರ್ಗವನ್ನು ಸೂಚಿಸುತ್ತಾರೆ.

ಗರ್ಭಾವಸ್ಥೆಯಲ್ಲಿ ತಾಯಿ ತನ್ನೊಡಲಲ್ಲಿ ಬೆಳೆಯುತ್ತಿರುವ ಪುಟ್ಟ ಜೀವದ ಬಗ್ಗೆಯೂ ಕಾಳಜಿ ವಹಿಸಬೇಕು. ಆಹಾರದಲ್ಲಿ ಪೌಷ್ಟಿಕಾಂಶಗಳು ಯಥೇಚ್ಛವಾಗಿರಬೇಕು. ವಾಕಿಂಗ್ ಅಥವಾ ಸರಳವಾದ ವ್ಯಾಯಾಮಗಳನ್ನು ಮಾಡುತ್ತ ಚಟುವಟಿಕೆಯಿಂದ ಇರುವುದು ಬಹುಮುಖ್ಯ. ವಿಶೇಷವಾಗಿ ಕಿಬ್ಬೊಟ್ಟೆಯ ಮಾಂಸಖಂಡಗಳ ವ್ಯಾಯಾಮದಿಂದ ಸಹಜಹೆರಿಗೆಗೆ ಬಹಳ ಅನುಕೂಲವಾಗುತ್ತದೆ. ಅನೇಕ ಕಡೆ ಗರ್ಭಿಣಿಯರಿಗಾಗೇ ತಿಳಿವಳಿಕೆ ಮೂಡಿಸುವಂಥ ವಿಶೇಷ ತರಗತಿಗಳನ್ನು ನಡೆಸುತ್ತಾರೆ. ಇದರಲ್ಲಿ ಸಂಗಾತಿಯೂ ಪಾಲ್ಗೊಳ್ಳಬಹುದು.

ಗಂಡಂದಿರು ಹೆರಿಗೆನೋವನ್ನು ಸ್ವತಃ ಅನುಭವಿಸುವುದಿಲ್ಲವಾದರೂ ಇಂಥ ತರಬೇತಿಗಳು ಗರ್ಭಿಣಿಯ ದೇಹಸ್ಥಿತಿಯನ್ನು ಅರಿತುಕೊಳ್ಳಲು ಮತ್ತು ಹೆರಿಗೆನೋವಿನ ಲಕ್ಷಣಗಳನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುತ್ತವೆ. ಗರ್ಭಿಣಿಗೆ ಸೂಕ್ತ ವ್ಯಾಯಾಮ ಮಾಡಿಸುವುದರಿಂದ ಹಿಡಿದು ಹೆರಿಗೆ ಸಮಯದಲ್ಲಿ ಏನೇನು ಪ್ಯಾಕ್ ಮಾಡಿಕೊಳ್ಳಬೇಕು ಎಂಬುದರವರೆಗೂ ಇಲ್ಲಿ ತರಬೇತಿಯನ್ನು ನೀಡುತ್ತಾರೆ.

ಸಾಮಾನ್ಯವಾಗಿ ಎಲ್ಲ ಗರ್ಭಿಣಿಯರು ಗರ್ಭಧಾರಣೆ ಸಮಯದಿಂದಲೇ ಪ್ರಸೂತಿವೈದ್ಯರ ನಿಗಾದಲ್ಲಿರುತ್ತಾರೆ. ಹೆರಿಗೆಯ ದಿನಗಳು ಹತ್ತಿರವಾಗುತ್ತಿದ್ದಂತೆ ಗರ್ಭದಲ್ಲಿನ ಶಿಶುವಿನ ಭಂಗಿ, ಜರಾಯು/ಮಾಸದ ಸ್ಥಳ ಹಾಗೂ ಗರ್ಭಾಶಯದಲ್ಲಿನ ನೀರಿನ (ಲೈಕರ್) ಅಳತೆಯ ಬಗ್ಗೆ ಹೆಚ್ಚು ನಿಗಾ ವಹಿಸಬೇಕಾಗುತ್ತದೆ. ಗರ್ಭಾವಸ್ಥೆಯ ಮಧುಮೇಹ (ಜೆಸ್ಟೇಷನಲ್ ಡಯಾಬಿಟಿಸ್) ಕೂಡ ಕೆಲವರಲ್ಲಿ ಕಂಡುಬರುತ್ತದೆ. ಅಲ್ಲದೆ ಹೆಚ್ಚಿನ ಬಿ.ಪಿ., ಕಾಲುಬಾವು ಮತ್ತು ಮೂತ್ರದಲ್ಲಿನ ಪ್ರೋಟೀನ್ ಸೋರಿಕೆಗಳೆಂಬ ತ್ರಿವಳಿ ಲಕ್ಷಣಗಳು ಪ್ರೀ-ಎಕ್ಲಾಂಪ್ಸಿಯಾ ಮತ್ತು ಎಕ್ಲಾಂಪ್ಸಿಯಾ (ಪ್ರಸವಾಪಸ್ಮಾರ) ದಂತಹ ರೋಗಕ್ಕೆ ಮುನ್ನುಡಿಯಾಗಬಲ್ಲವು. ಸೂಕ್ತ ಆಹಾರ ಮತ್ತು ಔಷಧಗಳ ಮೂಲಕ ಇವುಗಳನ್ನು ತಡೆಗಟ್ಟಬಹುದು.

ಸಾಮಾನ್ಯವಾಗಿ ಹೆರಿಗೆನೋವು ಪ್ರಾರಂಭವಾದ ನಂತರವೇ ಆಸ್ಪತ್ರೆಗೆ ದಾಖಲಾಗಬೇಕಾಗುತ್ತದೆ. ಕೆಲವೊಮ್ಮೆ ಗರ್ಭಾಶಯದಿಂದ ನೀರು ಹರಿದು ಹೋದಾಗ ಅಥವಾ ಗರ್ಭಿಣಿಯ ರಕ್ತದೊತ್ತಡ ಏರುತ್ತಿದ್ದಾಗ ತಕ್ಷಣವೇ ದಾಖಲಾಗಬೇಕಾಗುತ್ತದೆ. ಹೆರಿಗೆ ವಾರ್ಡಿಗೆ ಅಡ್ಮಿಟ್ ಆದಮೇಲೆ ವೈದ್ಯರು ಹೆರಿಗೆನೋವು ಎಷ್ಟು ತೀವ್ರವಾಗಿದೆ, ಗರ್ಭಕೊರಳು ಹಿಗ್ಗುತ್ತಿದೆಯೋ ಹೇಗೆ, ಶಿಶುವಿನ ಹೃದಯಬಡಿತ (NST ಯಂತ್ರದ ಮೂಲಕ) ಸಾಮಾನ್ಯಸ್ಥಿತಿಯಲ್ಲಿದೆಯೋ ಹೇಗೆ ಎಂಬುದನ್ನು ಪರೀಕ್ಷಿಸುತ್ತಾರೆ. ಕೆಲಬಾರಿ 'ಸಲೈನ್' ಮೂಲಕ ಔಷಧವನ್ನು ನೀಡುತ್ತಾ ತಾಯಿ ಮತ್ತು ಶಿಶುವಿನ ಆರೋಗ್ಯದ ಮೇಲೆ ನಿಗಾ ವಹಿಸುತ್ತಾರೆ.

ಸಹಜಹೆರಿಗೆಯನ್ನು ಒಟ್ಟು ಮೂರು ಹಂತಗಳಲ್ಲಿ ವಿಂಗಡಿಸಬಹುದು. ಮೊದಲನೆಯ ಹಂತದಲ್ಲಿ ನೋವು ತೀವ್ರಗೊಳ್ಳುತ್ತಾ ಗರ್ಭಕೊರಳು ಸುಮಾರು ಹತ್ತು ಸೆಂಟಿ ಮೀಟರ್‌ಗಳಷ್ಟು ಅಗಲವಾಗುತ್ತೆ. ಇದರ ಅವಧಿ ಸುಮಾರು 8-20 ಗಂಟೆಗಳು. ಎರಡನೆಯ ಹಂತದಲ್ಲಿ ಶಿಶು ಯೋನಿದ್ವಾರದಿಂದ ಹೊರಬರಲು ಪ್ರಾರಂಭಿಸುತ್ತದೆ. ಈ ಹಂತ ಸುಮಾರು ಮೂವತ್ತು ನಿಮಿಷದಿಂದ ಒಂದು ಗಂಟೆಯವರೆಗೂ ಇರುತ್ತದೆ.

ಶಿಶು ಹೊರಬಂದ ತಕ್ಷಣ ಮಗುವನ್ನು ತಾಯಿಯ ಎದೆಮೇಲೆ ಮಲಗಿಸಿ ಹಾಲೂಡಿಸಲು ಪ್ರೋತ್ಸಾಹಿಸಬೇಕು. ಇದು ತಾಯಿ-ಮಗುವಿನ ಬಾಂಧವ್ಯದ ಮುಖ್ಯ ಬುನಾದಿ. ಕೊನೆಯ ಹಂತದಲ್ಲಿ ಜರಾಯು ಹೊರಬರುತ್ತದೆ. ಇದಕ್ಕೆ ಸಾಮಾನ್ಯವಾಗಿ ಕೆಲನಿಮಿಷಗಳು ಸಾಕು. ನಂತರದ ಹೆರಿಗೆಗಳಲ್ಲಿ ಇಷ್ಟೊಂದು ನೋವೂ ಇರುವುದಿಲ್ಲ ಮತ್ತು ತೀರಾ ಕಡಿಮೆ ಸಮಯದಲ್ಲೇ ಮುಗಿದುಹೋಗುತ್ತದೆ.


ಹೆರಿಗೆನೋವನ್ನು ಕಡಿಮೆ ಮಾಡಲು ಈಗ ಹಲವಾರು ಅಸ್ತ್ರಗಳಿವೆ. ಅನೇಕ ಆಸ್ಪತ್ರೆಗಳಲ್ಲಿ ಅರಿವಳಿಕೆತಜ್ಞರು 'ಎಪಿಡುರಲ್' ಇಂಜೆಕ್ಷನ್‌ಗಳನ್ನು ನೀಡುತ್ತಾರೆ. ಇದರಿಂದ ನೋವಿಲ್ಲದೇ ಸುಸೂತ್ರವಾಗಿ ಹೆರಿಗೆ ಆಗುತ್ತದೆ. ಕೆಲವೆಡೆ ವಿಶೇಷ ಬಾತ್‌ಟಬ್‌ನಲ್ಲಿ ಗರ್ಭಿಣಿಯನ್ನು ಇರಿಸಿ ಪ್ರಥಮಹಂತವನ್ನು ನಿರ್ವಹಿಸುತ್ತಾರೆ. ಕೆಲವು ನೋವುನಿವಾರಕ ಔಷಧಗಳೂ ಹೆರಿಗೆನೋವಿನ ತೀವ್ರತೆಯನ್ನು ಕಡಿಮೆ ಮಾಡುತ್ತವೆ.

ಹೆಚ್ಚೂಕಡಿಮೆ ಒಂದು ದಿನದವರೆಗೂ ನಡೆಯುವ ಈ ಚೊಚ್ಚಲ ಹೆರಿಗೆ ಪ್ರಕ್ರಿಯೆ ಗರ್ಭಿಣಿಗೆ, ಶಿಶುವಿಗೆ ಮತ್ತು ಕುಟುಂಬದವರಿಗೆ ಸಾಕಷ್ಟು ಒತ್ತಡವನ್ನು ಉಂಟು ಮಾಡುತ್ತೆ. ಹೆರಿಗೆವಾರ್ಡಿನಲ್ಲಿ ತಜ್ಞವೈದ್ಯರು, ಸಹಾಯಕ ವೈದ್ಯರು, ಅನುಭವಿ ಸೂಲಗಿತ್ತಿ ದಾದಿಯರು ಮತ್ತು ಸಹಾಯಕರಿದ್ದು ಎಲ್ಲರೂ ಗರ್ಭಿಣಿಗೆ ಸಾಂತ್ವನ ನೀಡುತ್ತ ಅವಳ ನೋವು-ದಣಿವನ್ನು ಹಂಚಿಕೊಳ್ಳುತ್ತಾರೆ. ಮೊದಲು ಗರ್ಭಿಣಿಯ, ನಂತರ ಮಗು ಮತ್ತು ಬಾಣಂತಿಯ ಆರೈಕೆಯಲ್ಲಿ ಸೂಕ್ತ ಎಚ್ಚರಿಕೆಯನ್ನು ವಹಿಸಿ ಪ್ರಸೂತಿವೈದ್ಯರ ಸಲಹೆ ಮೇರೆಗೆ ಯೋಜನೆ ಮಾಡಿಕೊಂಡರೆ ಹೆರಿಗೆಯೆಂಬ ದೊಡ್ಡ ಜವಾಬ್ದಾರಿಯನ್ನು ಸಂತೋಷದಿಂದ ನಿರ್ವಹಿಸಬಹುದು.

'ನೀಟ್' ದಿಕ್ಸೂಚಿ

BIOLOGY

74) With the help of given pedigree, find out the probability for the birth of a child having no disease and being a carrier (has the disease mutation in one allele of the gene) in F_3 generation.



Unaffected male
Affected male
Carrier female
Unaffected female
Affected female

a) Zero (b) 1/4
c) 1/2 (d) 1/8

Ans:- b

75) Among the terms listed below, those that of are not technically correct names for a floral whorl are –

i. Androecium ii. Carpel
iii. Corolla iv. Sepal

a) i and iv b) iii and iv
c) ii and iv d) i and ii

Ans:- c

76) Embryo sac is to ovule as …………….. is to an anther.

a) Stamen b) Filament
c) Pollen grain d) Androecium

Ans:- c

77) A dicotyledonous plant bears flowers but never produces fruits and seeds. The most probable cause for the above situation is -

a) Plant is dioecious and bears only pistillate flowers
b) Plant is dioecious and bears both pistillate and staminate flowers
c) Plant is monoecious
d) Plant is dioecious and bears only staminate flowers

Ans:- d

78) The blue and white selectable markers have been developed which differentiate recombinant colonies from nonrecombinant colonies on the basis of their ability to produce colour in the presence of a chromogenic substrate. Given below are two statements about this method:

Statement I : The blue coloured colonies have DNA insert in the plasmid and they are identified as recombinant colonies.

Statement II : The colonies without blue colour have DNA insert in the plasmid and are identified as recombinant colonies.


In the light of the above statements, choose the most appropriate answer from the options given below:

(a) Statement I is incorrect but Statement II is correct
(b) Both Statement I and Statement II are correct
(c) Both Statement I and Statement II are incorrect
(d) Statement I is correct but Statement II is incorrect

Ans (a)

Expln:- Statement I is incorrect but statement II is correct as a recombinant DNA is inserted within the coding sequence of an enzyme, β-galactosidase. This results into inactivation of the gene for synthesis of this enzyme. Thus, presence of insert results into insertional inactivation of the β-galactosidase gene and the colonies do not produce any colour and identified as recombinant colonies. Whereas non-recombinant transformants will produce blue colour in presence of chromogenic substrate.

79) Given below is the floral diagram of a flower. Which of the following descriptions of the flower matches the floral diagram?



a) Homochlamydeous, gamopetalous, pentamerous and bisexual
b) Heterochlamydeous, gamopetalous, tetramerous and unisexual
c) Heterochlamydeous, gamopetalous, tetramerous and bisexual
d) Homochlamydeous, polypetalous, pentamerous and bisexual

Ans:- c;

Expln- Heterochlamydeous – having botgh the perianth segments, sepals and petals in distinct whorls.
Gamopetalous – all the petals of the flower are fused.
Tetramerous and bisexual – having both the male and female sex organs.

'ಸಿಇಟಿ' ಪರೀಕ್ಷೆ

PHYSICS

61) A stone weighs 100 N on the surface of the earth. The ratio of its weight at a height of half the radius of the earth to a depth of half the radius of the earth will be approximately

a) 3.6 b) 2.2
c) 1.8 d) 0.9

Ans: (d) 0.9

Expln:-

Acceleration due to gravity at $h = \frac{R}{2}$:

$$g_h = g\left(\frac{R}{R+h}\right)^2 = g\left(\frac{R}{R+\frac{R}{2}}\right)^2 = g\left(\frac{R}{\frac{3R}{2}}\right)^2 = \frac{4g}{9}.$$

Acceleration due to gravity at $d = \frac{R}{2}$:

$$g_d = g\left(1-\frac{d}{R}\right) = g\left(1-\frac{R/2}{R}\right) = \frac{g}{2}$$

Ratio of weight:

$$\frac{W_h}{W_d} = \frac{m\,g_h}{m\,g_d}$$

$$= \frac{g_h}{g_d} = \frac{\frac{4g}{9}}{\frac{g}{2}} = \frac{8}{9} = 0.9$$

62) Pressure of an ideal gas is increased by keeping the temperature constant. The kinetic energy of molecules

a) Decreases b) Increases
c) Remains the same
d) Increases or decreases depending on the nature of gas

Ans: (c)

$PV = nRT$

Hence $P \propto V$

Temperature is constant and there is no change in Kinetic energy of molecules.

63) The gravitational field strength at the surface of a certain planet is g. which of the following is the gravitational field strength at the surface of a planet with twice the radius and twice the mass?

(a) g/2 (b) g
(c) 2g (d) 4g

Ans: (a) g/2

On planet 1, $E_1 = \frac{GM}{R^2} = g$ ...(1)

On another planet $E_2 = \frac{G \times 2M}{4R^2} = \frac{GM}{2R^2}$ ...(2)

Using equations (1) and (2)


$E_2 = \frac{g}{2}$.

64) Vector A has a magnitude of 10 units and makes an angle of 30^0 with the positive x-axis. Vector B has a magnitude of 20 units and makes an angle of 30^0 with the negative x-axis. What is the magnitude of the resultant between these two vectors?

(a) $20\sqrt{3}$ (b) 35
(c) $15\sqrt{3}$ (d) $10\sqrt{3}$

Ans : (d) $10\sqrt{3}$

Expln



$\theta = 120^0; \vec{A} = 10; \vec{B} = 20$

$R = \sqrt{A^2 + B^2 + 2AB\cos\theta}$

$R = \sqrt{100 + 400 - 2 \times 10 \times 20 \times 1/2}$

$R = \sqrt{300} = \sqrt{3} \times 10.$

65) : The resistance R = V / I where V = (100 ± 5) V and I = (10 ± 0.2) A. The percentage error in R is

a) 5.2% b) 4.8%
c) 7% d) 3%

Ans: (c)

$R = V / I$
$V = (100 \pm 5)$ V and $I = (10 \pm 0.2)$ A
$R = 100 / 10 = 10$
$\Delta R / R = \pm [(\Delta V / V) + (\Delta I / I)]$
$[\Delta R / R] * 100 = \pm [(\Delta V / V) * 100 + (\Delta I / I) * 100]$
$= \pm [(5 / 100) * 100 + (0.2 / 10) * 100]$
$R = \pm 7\,\%$

66) A uniform chain of length L is lying partly on a table, the remaining part hanging down from the edge of the table. If the coefficient of friction between the chain and the table is 0.5, what is the minimum length of the chain that should lie on the table to prevent the chain from slipping down to the ground?

(a) L/3 (b) L/2
(c) 2L/3 (d) 3L/4

Ans: (C) 2L/3

$$\frac{l}{L} = \frac{\mu}{\mu+1}$$

$$\therefore l = \frac{L \times 0.5}{1.5} = L/3.$$

Where l is the part of length of the chain hanging and L is the total length of the chain.

Length of the chain lying on the table $= L - \frac{L}{3} = \frac{2L}{3}$.

67) A man weighing 70 kg, riding a motorbike weighing 230 kg at 54 km hr^{-1}, accelerates at 1 ms^{-2} for 10s, when suddenly a child rushes onto the road. The rider manages to apply the brakes screeching to bring his vehicle to a halt in 3s, just in time to save the child. What should have been the average retarding force on the vehicle?

(a) 1.5 N (b) 4.5 N
(c) 3.5 N (d) None of the above

Ans: d

‘ಯುದ್ಧ: ವಚನಗಳ ಸಂದೇಶವೇ ಪರಿಹಾರ’

ಬೇಲಿ ಮಠದ ಶಿವರುದ್ರ ಸ್ವಾಮೀಜಿ ಅಭಿಪ್ರಾಯ
• ಬಸವ ಸಮಿತಿಯಿಂದ ವಿಶ್ವ ಬಸವ ಜಯಂತಿ ಆಚರಣೆ

ನಗರದೆಲ್ಲೆಡೆ ಬಸವ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಗತ್ತಿನ ಹಲವು ದೇಶಗಳಲ್ಲಿ ಯುದ್ಧದ ಸನ್ನಿವೇಶವಿದ್ದು ಶಾಂತಿ ಸ್ಥಾಪನೆಗೆ ಬಸವಣ್ಣನವರ ವಚನಗಳ ಸಂದೇಶವೇ ಪರಿಹಾರ’ ಎಂದು ಬೇಲಿ ಮಠದ ಶಿವರುದ್ರ ಸ್ವಾಮೀಜಿ ಹೇಳಿದರು.

ಬಸವ ಸಮಿತಿಯು ಸೋಮವಾರ ಅನುಭವ ಮಂಟಪ ಸಭಾಂಗಣದಲ್ಲಿ ಆಯೋಜಿಸಿದ್ದ ವಿಶ್ವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವಚನಗಳಿಗೆ ಒಂದುಗೂಡಿಸುವ ಶಕ್ತಿ ಇದ್ದು, ಶಾಂತಿ ಮಂತ್ರವನ್ನು ಪಠಿಸುತ್ತವೆ. ಜಗತ್ತಿನ ಹಲವು ದೇಶಗಳಲ್ಲಿ ಈಗ ಬಸವ ತತ್ವ ಪ್ರಸಾರವಾಗುತ್ತಿದೆ. ಬಸವ ದಿನವನ್ನೂ ಹಲವೆಡೆ ಆಚರಿಸಲಾಗುತ್ತಿದೆ’ ಎಂದು ತಿಳಿಸಿದರು.

‘136 ಶರಣರ 2500ಕ್ಕೂ ಹೆಚ್ಚು ವಚನಗಳನ್ನು ವಿಶ್ವದ ನಾನಾ ಭಾಷೆಗಳಿಗೆ ಭಾಷಾಂತರಿಸುವ ಕೆಲಸವನ್ನು ಬಸವ ಸಮಿತಿ ಮಾಡುತ್ತಿರುವುದು ಸ್ತುತ್ಯಾರ್ಹ. ಭಾರತದ 15ಕ್ಕೂ ಅಧಿಕ ವಿಶ್ವ ವಿದ್ಯಾಲಯಗಳು ಈ ಕಾರ್ಯದಲ್ಲಿ ತೊಡಗಿಸಿಕೊಂಡಿವೆ. ಭಾಷಾಂತರ ವಚನಗಳನ್ನು ಅರಿತುಕೊಳ್ಳಲು ಅವಕಾಶ ಮಾಡಿಕೊಟ್ಟಿದೆ’ ಎಂದು ತಿಳಿಸಿದರು.



ಬಸವ ಸಮಿತಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಚ.ಭೀ. ಸೋಮಶೆಟ್ಟಿ (ಗೌರವ ಪುರಸ್ಕಾರ), ವಿಲಾಸವತಿ ಎಸ್‌. ಖೂಬಾ (ಜೀವಮಾನ ಸಾಧನೆ) ಹಾಗೂ ವೂಡೇ ಪಿ. ಕೃಷ್ಣ (ಜ್ಞಾನ ದಾಸೋಹ ರತ್ನ) ಪ್ರಶಸ್ತಿ ನೀಡಿ ಗೌರವಿಸಲಾಯಿತು. ರಾಣಿ ಸತೀಶ್‌, ಬಿ.ಎನ್‌. ಚಂದ್ರಪ್ಪ, ಶಿವರುದ್ರ ಸ್ವಾಮೀಜಿ, ಮೋಹನದೇವ್ ಆಳ್ವ, ಅರವಿಂದ ಜತ್ತಿ, ಪ್ರಭುದೇವ ಚಿಗಟೇರಿ, ಸುನಿಲ್ ಕುಮಾರ್ ರಗಟೆ, ಕೆ.ರಂಗನಾಥ, ಪ್ರಧಾನ ಕಾರ್ಯದರ್ಶಿ ಗಿರೀಶ್ ಎಸ್‌. ದಿಬ್ಬೂರು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮೂವರಿಗೆ ಪ್ರಶಸ್ತಿ: ಇದೇ ವೇಳೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅವರಿಗೆ ಜ್ಞಾನ ದಾಸೋಹ ರತ್ನ, ಕಲಬುರಗಿಯ ಸಮಾಜ ಸೇವಕಿ ವಿಲಾಸವತಿ ಎಸ್. ಖೂಬಾ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಚಿತ್ರ ಕಲಾವಿದ ಚ.ಭೀ.ಸೋಮಶೆಟ್ಟಿ ಅವರು ಗೌರವ ಪುರಸ್ಕಾರ ಸ್ವೀಕರಿಸಿದರು.

ಬಸವ ಜಯಂತಿ ಅಂಗವಾಗಿ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಸಿ.ಎಂ ಚಾಲನೆ: ಬಸವೇಶ್ವರ ವೃತ್ತದಲ್ಲಿ ಬಸವಣ್ಣನವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಲಾರ್ಪಣೆ ಮಾಡಿ ಬಸವ ಜಯಂತಿಗೆ ಚಾಲನೆ ನೀಡಿದರು.

ವಿವಿಧ ಭಾಷೆಗಳಿಗೆ ವಚನ ಸಾಹಿತ್ಯದ ಭಾಷಾಂತರಗೊಂಡ ಸಂಪುಟಗಳನ್ನು ಸಿದ್ದರಾಮಯ್ಯ ಅವರು ಜನಾರ್ಪಣೆಗೊಳಿಸಿದರು. ಮಹಿಳೆಯರ ಡೊಳ್ಳು ಕುಣಿತ, ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಗಮನ ಸೆಳೆದವು.



ಬಸವೇಶ್ವರ ವೃತ್ತದ ಬಳಿ ಇರುವ ಬಸವಣ್ಣನವರ ಪ್ರತಿಮೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಷ್ಪಾರ್ಚನೆ ಮಾಡಿ, ವಿದೇಶಿ ಭಾಷೆಗಳಿಗೆ ಅನುವಾದಿಸಲಾದ ವಚನಗಳ ಪುಸ್ತಕಗಳನ್ನು ಜನಾರ್ಪಣೆಗೊಳಿಸಿದರು ಪ್ರಜಾವಾಣಿ ಚಿತ್ರ

ಜಪಾನೀಸ್, ಜರ್ಮನ್ ಭಾಷೆಗೆ ಭಾಷಾಂತರಗೊಂಡ ವಚನಗಳ ವಾಚನ

ಕಾರ್ಯಕ್ರಮದಲ್ಲಿ ಜಪಾನೀಸ್ ಹಾಗೂ ಜರ್ಮನ್ ಭಾಷೆಗೆ ಭಾಷಾಂತರಗೊಂಡಿರುವ ವಚನಗಳ ವಾಚನ ಗಮನ ಸೆಳೆಯಿತು.

ಅಧ್ಯಾಪಕರಾದ ವಿ.ಕೆ. ಭಾನುಮತಿ ಅವರು ಜರ್ಮನ್ ಹಾಗೂ ಸುಧಾ ಶ್ರೀಧರ್ ಅವರು ಜಪಾನೀಸ್ ಭಾಷೆಗೆ ಬಸವಣ್ಣ ಹಾಗೂ ಅಕ್ಕಮಹಾದೇವಿ ಅವರ ವಚನಗಳನ್ನು ಭಾಷಾಂತರಗೊಳಿಸಿದ್ದಾರೆ.

‘37 ಭಾಷೆಗಳಿಗೆ ವಚನ ಸಾಹಿತ್ಯ ತಲುಪಿಸುವ ಯೋಜನೆಯನ್ನು ಸಮಿತಿ ಕೈಗೆತ್ತಿಕೊಂಡಿದೆ. ಏಳು ಭಾಷೆಗಳ ಸಂಪುಟ ಜನಾರ್ಪಣೆಗೊಳಿಸಲಾಗಿದೆ. ಮುಂದಿನ ಬಸವ ಜಯಂತಿ ಹೊತ್ತಿಗೆ ಇತರೆ ಎಲ್ಲಾ ಭಾಷೆಗಳ ಸಂಪುಟಗಳು ಲಭ್ಯವಾಗಲಿವೆ’ ಎಂದು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ತಿಳಿಸಿದರು.

‘ಬಸವ ತತ್ವ ಅಧ್ಯಯನ ಪೀಠ ಸ್ಥಾಪನೆಗೆ ಪರಿಶೀಲನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಿನ ಸಾಂಸ್ಕೃತಿಕ ನಾಯಕ ಬಸವಣ್ಣನ ವಿಚಾರಧಾರೆಯ ಬಗ್ಗೆ ಯುವ ಪೀಳಿಗೆಯಲ್ಲಿ ಹೆಚ್ಚಿನ ಅರಿವು ಮೂಡಿಸಲು ‘ಬಸವ ತತ್ವ ಅಧ್ಯಯನ ಪೀಠ’ ಸ್ಥಾಪಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ ಎಂದು ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ರಮೇಶ್.ಬಿ. ಹೇಳಿದರು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ರಾಜಾಜಿ ಹಾಲ್‌ನಲ್ಲಿ ಆಯೋಜಿಸಲಾಗಿದ್ದ ಬಸವೇಶ್ವರ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮ ಸಮಾಜ ನಿರ್ಮಾಣದ ಗುರಿ ಸಾಧನೆಯ ನಿಟ್ಟಿನಲ್ಲಿ 12ನೇ ಶತಮಾನದ ಸಮಾಜ ಸುಧಾರಕ ಕಾಯಕಯೋಗಿ ಬಸವಣ್ಣನ ಕೊಡುಗೆ ಅನನ್ಯ ಎಂದು ಬಣ್ಣಿಸಿದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಸಿಂಡಿಕೇಟ್ ಸದಸ್ಯ ಕೆ.ಪಿ.ಪಾಟೀಲ್, ವೈದಿಕ ಧರ್ಮ ಮತ್ತು ಸಂಸ್ಕೃತಿಯನ್ನು ತಿರಸ್ಕರಿಸಿದ ಬಸವಣ್ಣ, ವಚನ ಸಾಹಿತ್ಯದ ಮೂಲಕ ಸಾಮಾಜಿಕ ಜಾಗೃತಿ ಮೂಡಿಸುವ ಕಾರ್ಯದಲ್ಲಿ ಮಹಿಳೆಯರೂ ಸೇರಿ ಶೋಷಿತ ಜನವರ್ಗವನ್ನು ತೊಡಗಿಸಿದರು ಎಂದರು.

ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ ಬಿ.ಕುಡೇನಟ್ಟಿ, ಹಿರಿಯ ಪ್ರಾಧ್ಯಾಪಕ ಪಿ.ಆರ್.ಚೇತನ, ಸಿಂಡಿಕೇಟ್ ಸದಸ್ಯರಾದ ಡಾ. ಕೃಷ್ಣರಾಮ್, ಶಿವಕುಮಾರ್, ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ. ಅಬ್ದುಲ್ ಖಾದರ್ ಮತ್ತು ಧರ್ಮೇಂದ್ರ ಕುಮಾರ್ ಉಪಸ್ಥಿತರಿದ್ದರು.

ಉಪನ್ಯಾಸಕ ಡಾ.ಗೋಪಿ. ಎಸ್.ಎಂ. ನಿರೂಪಿಸಿದರು. ಡಾ.ಮಂಜು.ಸಿ.ಎನ್. ಮತ್ತು ಡಾ. ಪ್ರಭು ವಚನ ಗಾಯನ ಪ್ರಸ್ತುತಪಡಿಸಿದರು. ಡಾ. ತೇಜೇಶ್ವರ್ ಸ್ವಾಗತಿಸಿ, ಡಾ ಅಖ್ತರ್ ವಂದಿಸಿದರು.



ಡಾ. ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಸವಣ್ಣ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿದರು

‘ಸಮಸಮಾಜದ ಹರಿಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಲು ಕೀಳು ಭಾವನೆಯನ್ನು ಕಿತ್ತೊಗೆದು ಜಾತಿಯ ತಾರತಮ್ಯವನ್ನು ಖಂಡಿಸಿ ಎಲ್ಲರಿಗೂ ಸಮಾನತೆಯನ್ನು ಕೊಟ್ಟವರು ಬಸವಣ್ಣ’ ಎಂದು ವಿಜಯನಗರ ವಿಧಾನಸಭೆ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಹೇಳಿದರು.

ವಚನಜ್ಯೋತಿ ಬಳಗ ಆಯೋಜಿಸಿದ್ದ ಬಸವ ಉತ್ಸವದಲ್ಲಿ ಮಾತನಾಡಿದ ಅವರು, ‘ಪ್ರಜಾಪ್ರಭುತ್ವದ ತಳಹದಿಯಲ್ಲಿ ಕಲ್ಯಾಣ ರಾಜ್ಯ ನಿರ್ಮಾಣ ಮಾಡಲು ಪ್ರಯತ್ನಿಸಿದ ಬಸವಣ್ಣನವರು ವಿಶೇಷವಾಗಿ ಹೆಣ್ಣುಮಕ್ಕಳಿಗೆ ಧಾರ್ಮಿಕ, ಸಾಮಾಜಿಕ, ಅರ್ಥಿಕ ಸಮಾನತೆಯನ್ನು ನೀಡಿದ ಮಹಾತ್ಮರು’ ಎಂದು ಬಣ್ಣಿಸಿದರು.

ವಚನಜ್ಯೋತಿ ಬಳಗ ಅಧ್ಯಕ್ಷ ಪಿನಾಕಪಾಣಿ ಮಾತನಾಡಿ, ‘ಬಸವಣ್ಣನವರೊಡನೆ ಹೆಜ್ಜೆ ಎಂದರೆ ಕೇವಲ ಮೂರ್ತಿಯೊಂದಿಗೆ ಮೆರವಣಿಗೆಯಲ್ಲ. ಬಸವಣ್ಣನವರ ತತ್ತ್ವಾದರ್ಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ’ ಎಂದರು.



ಬಸವ ಉತ್ಸವದಲ್ಲಿ ಎಂ. ಕೃಷ್ಣಪ್ಪ ಮಾತನಾಡಿದರು. ಪಿನಾಕಪಾಣಿ, ಪಾರ್ಶ್ವನಾಥ್, ಪ್ರಭು, ರಾಜಾ ಗುರುಪ್ರಸಾದ್ ಉಪಸ್ಥಿತರಿದ್ದರು

ಹೊಸಹಳ್ಳಿ ಮೆಟ್ರೊ ನಿಲ್ದಾಣದ ಸಮೀಪದ ಬಸವೇಶ್ವರ ವಿದ್ಯಾರ್ಥಿ ನಿಲಯದಿಂದ ಹೊರಟ ಬಸವ ಉತ್ಸವದಲ್ಲಿ ಬೇಲಿಮಠದ ಶಿವರುದ್ರ ಸ್ವಾಮೀಜಿ, ವಿಶ್ವಬಂಧು ಫೌಂಡೇಷನ್‌ನ ಸಿದ್ದಯ್ಯ ಗುರು, ಹಿರಿಯ ವಿದ್ವಾಂಸ ಸಿ.ಯು. ಮಂಜುನಾಥ್, ಪ್ರಾಧ್ಯಾಪಕಿ ಎಲ್.ಜಿ. ಮೀರಾ, ರಾಜ್ಯಪಾಲರ ಕಾರ್ಯದರ್ಶಿ ಪ್ರಭುಶಂಕರ್, ಕರ್ನಾಟಕ ಖನಿಜ ನಿಗಮದ ನಿರ್ದೇಶಕ ವಿಶ್ವನಾಥ ಹಿರೇಮಠ, ಕನ್ನಡ ಶ್ರೀಸಾಮಾನ್ಯರ ಕೂಟದ ಅಧ್ಯಕ್ಷ ಶ್ರ.ದೇ. ಪಾರ್ಶ್ವನಾಥ್, ಮಹಮದೀಯರ ಕನ್ನಡ ವೇದಿಕೆ ಅಧ್ಯಕ್ಷ ಸಮೀವುಲ್ಲಾಖಾನ್ ಭಾಗವಹಿಸಿದ್ದರು.

ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆಯ ವಿದ್ಯಾರ್ಥಿಗಳು ಹಾಗೂ ಬಸವೇಶ್ವರ ಬಿಎಡ್ ಕಾಲೇಜಿನ ವಿದ್ಯಾರ್ಥಿಗಳು ಬಸವ ಉತ್ಸವದಲ್ಲಿ ಜಯಘೋಷಗಳನ್ನು ಕೂಗುತ್ತಾ ಸಂಭ್ರಮಿಸಿದರು.

ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ‘ಪವಾಡ ಶ್ರೀ’ ಪ್ರಶಸ್ತಿ ಪ್ರದಾನ

‘ನಮ್ಮ ಓಣಿಗೆ ಮೊದಲು ಬಂದವರು ಅಣ್ಣ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ಅಂದಿನ ಕಾಲಘಟ್ಟದಲ್ಲಿ ನಮ್ಮ (ದಲಿತ) ಓಣಿಗೆ ಬಂದು ನಮ್ಮವರನ್ನು ಸಂತೈಸಿದ ಸಂತ ಅಣ್ಣ ಬಸವಣ್ಣ’ ಎಂದು ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ತಿಳಿಸಿದರು.

ಪಟ್ಟಣದ ಬಸವಣ್ಣದೇವರ ಮಠದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ‘ಪವಾಡ ಶ್ರೀ’ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ಇಸ್ರೊದ ವಿಶ್ರಾಂತ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ‘ನಮ್ಮನ್ನು ನಾವು ಯಾವ ರೀತಿ ನಡೆಸಿಕೊಳ್ಳಬೇಕು ಎಂಬುದನ್ನು ಬಸವಣ್ಣ ವಚನಗಳ ಮೂಲಕ ವೈಜ್ಞಾನಿಕವಾಗಿ ತಿಳಿಸಿಕೊಟ್ಟಿದ್ದಾರೆ’ ಎಂದು ವಿಶ್ಲೇಷಿಸಿದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಸೋಮಶೇಖರ್, ಮಾಜಿ ಉಪ ಮೇಯರ್ ಬಿ.ಎಸ್. ಪುಟ್ಟರಾಜು ‘ಯುಗಾವತಾರಿಯ ಸಂದೇಶಗಳು’, ‘ಅಕ್ಕನ ವಚನಾಮೃತ’ ಕೃತಿಗಳನ್ನು ಜನಾರ್ಪಣೆಗೊಳಿಸಿದರು.



ಡಾ. ವಿಜಯಲಕ್ಷ್ಮಿ ದೇಶಮಾನೆ ಅವರಿಗೆ ‘ಪವಾಡ ಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಯಿತು

₹1 ಲಕ್ಷ ಬಹುಮಾನ: ಭಾನುವಾರ ನಡೆದ ರಾಷ್ಟ್ರಮಟ್ಟದ ವಚನಗಳ ಕಂಠಪಾಠ ಸ್ಪರ್ಧೆಯಲ್ಲಿ 88 ಸ್ಪರ್ಧಿಗಳು ಭಾಗವಹಿಸಿದ್ದರು. 1,420 ವಚನಗಳನ್ನು ಹೇಳಿದ ನೀಲಾ ನಾಗಭೂಷಣ್ ಪ್ರಥಮ ಸ್ಥಾನ ಗಳಿಸಿ ₹1 ಲಕ್ಷ ಬಹುಮಾನ ಪಡೆದರು. ಜಗದೀಶ್ ಮಾರಪಲ್ಲಿ 870, ಲತಾ ಶಿವಾನಂದ ಪಾಟೀಲ 852, ಕ್ರಮವಾಗಿ ದ್ವಿತೀಯ (₹75 ಸಾವಿರ), ತೃತೀಯ (₹50 ಸಾವಿರ) ಬಹುಮಾನ ಪಡೆದರು.

ಸಿದ್ಧಲಿಂಗ ಸ್ವಾಮೀಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕ ಎನ್. ಶ್ರೀನಿವಾಸ್, ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ, ಮರಾಠ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್. ಮರಿಯೋಜಿ ರಾವ್, ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಸ್. ಮಲ್ಲಯ್ಯ, ಕರ್ನಾಟಕ ವಿಚಾರ ವೇದಿಕೆ ಅಧ್ಯಕ್ಷ ಫಾಲನೇತ್ರ, ರಾಷ್ಟ್ರೀಯ ಬಸವ ತತ್ವ ಪರಿಷತ್ ಅಧ್ಯಕ್ಷ ಡಿ.ಟಿ. ಅರುಣ್ ಕುಮಾರ್, ವೀರಶೈವ ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಾಗರಾಜು, ಆರುಂಧತಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕಾರೇಹಳ್ಳಿ ಹನುಮಂತರಾಯಪ್ಪ, ವಿವಿಧ ಮಠಗಳ ಮಠಾಧೀಶರು ಭಾಗವಹಿಸಿದ್ದರು.

ಪಾನಕ, ಮಜ್ಜಿಗೆ ವಿತರಣೆ

ದಾಬಸ್‌ ಪೇಟೆ: ಸೋಂಪುರ ಹೋಬಳಿಯ ಗ್ರಾಮಗಳಲ್ಲಿ ಸಾರ್ವಜನಿಕರು ಬಸವ ಜಯಂತಿ ಆಚರಣೆ ಮಾಡಿ, ದೇವಾಲಯಗಳಲ್ಲಿ ಪೂಜೆ ಸಲ್ಲಿಸಿ ಹೆಸರುಬೇಳೆ, ಪಾನಕ ಮಜ್ಜಿಗೆ ಹಂಚಿದರು.

ಗ್ರಾಮೀಣ ಭಾಗದಲ್ಲಿ ದನಕರುಗಳ ಮೈ ತೊಳೆದು, ಪೂಜೆ ಮಾಡಿ ಬಸವ ಜಯಂತಿ ಆಚರಿಸಿದರು. ನಿಡವಂದ ಗ್ರಾಮದ ಮಠದ ಬಸವೇಶ್ವರ ಸ್ವಾಮಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಚಿತ್ರಾವಳಿ



ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್, ಅನಿಕೇತನ ಕನ್ನಡ ಬಳಗವು ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯಮಟ್ಟದ ಕನ್ನಡ ಸಾಹಿತ್ಯ ಸಂಗೀತ ಸಂಭ್ರಮದಲ್ಲಿ ಲೇಖಕರಾದ ಎಂ.ಪಿ.ಎಂ. ವೀರೇಶ್ ಮತ್ತು ಎಂ.ವಿ. ಶಿವಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಕಲಾವಿದೆ ಶಾಂತಿ ವಾಸು, ಸಂಶೋಧಕ ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಎಸ್‌. ರಾಮಲಿಂಗೇಶ್ವರ, ಕೃಷ್ಣ ಹಾನ್‌ಬಾಳ್‌, ಸಾಹಿತಿ ಹಂ.ಪ. ನಾಗರಾಜಯ್ಯ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ಕರುನಾಡ ಸಿರಿ ಸಾಹಿತ್ಯ ವೇದಿಕೆ ನಗರದಲ್ಲಿ ಆಯೋಜಿಸಿದ್ದ ಅಭಿನಂದನಾ, ಜಾನಪದ ಝೇಂಕಾರ ಹಾಗೂ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಎನ್‌. ವೇಣುಗೋಪಾಲ್‌, ವೇದಮಾಲ ಕೆ., ಶಿವಸ್ವಾಮಿ ಎಂ. ಹಾಗೂ ವಿದ್ಯಾಶ್ರೀ ಅವರನ್ನು ಅಭಿನಂದಿಸಲಾಯಿತು. ವೇದಿಕೆಯ ಉಪಾಧ್ಯಕ್ಷೆ ಇಂದಿರಾ ಶರಣ್ ಜಮ್ಮಲದಿನ್ನಿ, ಕೆ. ವಿ. ರಾಜೇಶ್ವರಿ, ಎ.ಎಸ್‌. ನಾಗರಾಜಸ್ವಾಮಿ, ನೇ. ಭ. ರಾಮಲಿಂಗಶೆಟ್ಟಿ, ಚನ್ನವೀರಯ್ಯ, ರಾಂ.ಕೆ. ಹನುಮಂತಯ್ಯ ಹಾಗೂ ವೇದಿಕೆ ಅಧ್ಯಕ್ಷೆ ಶಾಂತಲಾ ಸುರೇಶ್ ಇದ್ದಾರೆ



ಕೊತ್ತನೂರಿನ ಶ್ರೀಸಿದ್ಧಾರ್ಥ ಸನಿವಾಸ ಪ್ರೌಢಶಾಲೆಯಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಗುರುವಂದನಾ ಸಮಾರಂಭದಲ್ಲಿ 2007–08ನೇ ಸಾಲಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

‘ಜಾತಿ ಪದ್ಧತಿ ವಿರುದ್ಧ ಹೋರಾಟ’

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಾಲ ಬ್ಲಾಕ್ ಕಾಂಗ್ರೆಸ್ ಸಮಿತಿ ವತಿಯಿಂದ ಚಿಕ್ಕಜಾಲದಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಬಸವಣ್ಣನವರ ಜಯಂತ್ಯುತ್ಸವ ಆಚರಿಸಲಾಯಿತು.

ಕಾರ್ಯಕರ್ತರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಅರ್ಪಿಸಿದರು.

ಜಾಲ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎನ್.ಕೆ. ಮಹೇಶ್‌ಕುಮಾರ್ ಮಾತನಾಡಿ, ‘ಬಸವಣ್ಣ 12ನೇ ಶತಮಾನದಲ್ಲೇ ಜಾತಿ ಪದ್ಧತಿ ವಿರುದ್ಧ ಹೋರಾಟ ನಡೆಸಿ, ಸಮಾನತೆಯ ಸಂದೇಶ ಸಾರಿದ ಮಹಾನ್ ದಾರ್ಶನಿಕ. ಅವರ ತತ್ವ-ಸಿದ್ಧಾಂತಗಳು ಮತ್ತು ಅವರು ಹಾಕಿಕೊಟ್ಟ ಮಾರ್ಗವು ಸಮಾಜಕ್ಕೆ ದಾರಿದೀಪ’ ಎಂದರು.

ಚಿಕ್ಕಜಾಲ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ಎಂ. ರವಿಕುಮಾರ್, ಮಾಜಿ ಅಧ್ಯಕ್ಷ ಚಂದು, ಕಾಂಗ್ರೆಸ್ ಮುಖಂಡರಾದ ಪ್ರದೀಪ್, ತಿರುಮಳಪ್ಪ, ಹರೀಶ್ ಕುಮಾರ್, ಪ್ರಭಾಕರ್, ಶಿವರಾಜ್ ಸಿ.ಎ., ಕುದುರೆಗೆರೆ ಮಂಜು, ಅಮೀರ್ ಜಾನ್, ವೆಂಕಟೇಶ್, ಕಿರಣ್, ಸುಜಾತಮ್ಮ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಚಿಕ್ಕಜಾಲದಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಬಸವಣ್ಣನವರ ಜಯಂತ್ಯುತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು



ಬಸವ ಜಯಂತಿ ಪ್ರಯುಕ್ತ ಟಿ. ದಾಸರಹಳ್ಳಿ ಮಲ್ಲಸಂದ್ರದಲ್ಲಿ ಬಸವ ಸೇವಾ ಟ್ರಸ್ಟ್ ವತಿಯಿಂದ ಪೌರಕಾರ್ಮಿಕರನ್ನು ಗೌರವಿಸಲಾಯಿತು. ಟ್ರಸ್ಟ್ ಅಧ್ಯಕ್ಷ ಎಂ. ರವಿಕುಮಾರ್, ಉಪಾಧ್ಯಕ್ಷ ಎಂ. ಮಹದೇವಸ್ವಾಮಿ, ಪದಾಧಿಕಾರಿಗಳು ಉಪಸ್ಥಿತರಿದ್ದರು

ಹೆಣ್ಣಾನೆಗೆ ರೇಡಿಯೊ ಕಾಲರ್ ಅಳವಡಿಕೆ

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಅರೇಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಅರಣ್ಯ ಇಲಾಖೆಯು ಕೈಗೊಂಡಿದ್ದ ಕಾಡಾನೆಗಳ ಕಾರ್ಯಾಚರಣೆ ಭಾಗವಾಗಿ ಸೋಮವಾರ ಹೆಣ್ಣಾನೆಗೆ ಯಶಸ್ವಿಯಾಗಿ ರೇಡಿಯೊ ಕಾಲರ್ ಅಳವಡಿಸಲಾಯಿತು.

ಭಾನುವಾರ ಕಾನಹಳ್ಳಿ ಅರಣ್ಯ ವ್ಯಾಪ್ತಿಯಲ್ಲಿ ತಪ್ಪಿಸಿಕೊಂಡಿದ್ದ ಆನೆಯು ಅದೇ ಪ್ರದೇಶ ಸಮೀಪದ ಶಿರಗುರ ಎಂಬಲ್ಲಿ ಸೋಮವಾರ ಬೆಳಿಗ್ಗೆ ಮೊದಲಿಗೆ ಕಂಡುಬಂತು. ಅದನ್ನು ಅನುಭವಿ ವೈದ್ಯರ ತಂಡವು ಪಟ್ಟುಬಿಡದೆ ಹಿಂಬಾಲಿಸಿತ್ತು.

ಬೆಳಿಗ್ಗೆ 8.30ಕ್ಕೆ ಕಂಡುಬಂದ ಆನೆಯು ಒಂದೆಡೆ ನಿಲ್ಲದೇ ಸಂಚರಿಸಲಾರಂಭಿಸಿತ್ತು. ನೇರಲಕಟ್ಟೆ, ಕುಂಬಾರಹಳ್ಳಿ, ಶಿರಗುರದ ಮೂಲಕ ಸೂಳೇಗುಡ್ಡದತ್ತ ತೆರಳಿದ್ದರಿಂದ ಸಿಬ್ಬಂದಿ ಅದನ್ನು ಹಿಂಬಾಲಿಸುವಲ್ಲಿ ಹೈರಾಣಾದರು. ಅವಿಶ್ರಾಂತವಾಗಿ ಹುಡುಕಾಡಿದ ಬಳಿಕ, ಕೊನೆಗೆ ನೇರಲಮಕ್ಕಿಯ ಕಾನಹಳ್ಳಿ ಅರಣ್ಯ ಪ್ರದೇಶದಲ್ಲಿ ಸಿಕ್ಕ ಆನೆಗೆ ಚುಚ್ಚುಮದ್ದು ನೀಡಿ ರೇಡಿಯೊ ಕಾಲರ್ ಅಳವಡಿಸಲಾಯಿತು. ಏಳುಬೀಳುಗಳ ನಡುವೆ ಕಾಲರ್ ಅಳವಡಿಸುವ ಕಾರ್ಯವು ಪೂರ್ಣಗೊಂಡಿದ್ದರಿಂದ ಎಲ್ಲ ಸಿಬ್ಬಂದಿಯೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು.



ಹನೂರು ತಾಲ್ಲೂಕಿನ ಮರೂರು ಸಮೀಪದ ಅರಣ್ಯದೊಳಗೆ ಕಾಳ್ಗಿಚ್ಚು ಕಾಣಿಸಿಕೊಂಡಿದೆ

ಮರೂರು ಅರಣ್ಯದಲ್ಲಿ ಕಾಳ್ಗಿಚ್ಚು 20 ಎಕರೆಯಷ್ಟು ಕಾಡು ನಾಶ

ಪ್ರಜಾವಾಣಿ ವಾರ್ತೆ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಪೊನ್ನಾಚಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರೂರು ಬಳಿ ಅರಣ್ಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ಕಾಳ್ಗಿಚ್ಚಿನಿಂದ 20 ಎಕರೆಯಷ್ಟು ಕಾಡು ನಾಶವಾಗಿದೆ. ‘ಭಾನುವಾರ ಮಧ್ಯಾಹ್ನ ಬೆಂಕಿ ಕಾಣಿಸಿಕೊಂಡಿದ್ದು ಸೋಮವಾರ ಸಂಜೆಯ ಹೊತ್ತಿಗೆ ನಿಯಂತ್ರಣಕ್ಕೆ ಬಂದಿದೆ’ ಎಂದು ಅರಣ್ಯ ಇಲಾಖೆಯ ಸಿಬ್ಬಂದಿ ತಿಳಿಸಿದ್ದಾರೆ.

ಜಮೀನಿನ ಬದುವಿನಲ್ಲಿ ಕಾಣಿಸಿದ ಬೆಂಕಿ ಅರಣ್ಯಕ್ಕೆ ವ್ಯಾಪಿಸಿದ್ದು, ಬೆಟ್ಟ-ಗುಡ್ಡಗಳಿಂದ ಕೂಡಿರುವ ಜಾಗ ಆದ್ದರಿಂದ ಬೆಂಕಿ ನಂದಿಸುವುದು ಸವಾಲಾಗಿದೆ. ಅರಣ್ಯದೊಳಗೆ ಬಿದಿರು ಒಣಗಿ ನಿಂತಿದೆ. ಗಾಳಿಯ ವೇಗಕ್ಕೆ ಬೆಂಕಿಯ ಜ್ವಾಲೆ ವ್ಯಾಪಿಸಿದೆ. ಸಿಬ್ಬಂದಿ ಸ್ಥಳದಲ್ಲೇ ಬೀಡುಬಿಟ್ಟಿದ್ದು ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಭದ್ರಾ ಮೇಲ್ದಂಡೆ: ಮೂರು ಷರತ್ತು ವಿಧಿಸಿದ ಜಲಶಕ್ತಿ ಸಚಿವಾಲಯದ ಸಲಹಾ ಸಮಿತಿ

₹5,300 ಕೋಟಿಗೆ ಖಾತರಿ ಕೊಡದ ಕೇಂದ್ರ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದ ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಘೋಷಿಸಿರುವ ₹5,300 ಕೋಟಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಯಾವುದೇ ಖಾತರಿ ಕೊಡುವುದಿಲ್ಲ ಎಂದು ಕೇಂದ್ರ ಜಲಶಕ್ತಿ ಸಚಿವಾಲಯದ ಸಲಹಾ ಸಮಿತಿ ಸ್ಪಷ್ಟಪಡಿಸಿದೆ.

ಜಲಶಕ್ತಿ ಸಚಿವಾಲಯದ ಕಾರ್ಯದರ್ಶಿ ವಿ.ಎಲ್.ಕಾಂತಾ ರಾವ್ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿಯ 160ನೇ ಸಭೆಯಲ್ಲಿ ಮೂರು ಷರತ್ತುಗಳನ್ನು ವಿಧಿಸಿ ಯೋಜನೆಯ ₹21,167 ಕೋಟಿ ಪರಿಷ್ಕೃತ ವೆಚ್ಚಕ್ಕೆ ಅನುಮೋದನೆ ಕೊಡಲಾಗಿದೆ. ಕೇಂದ್ರ ಜಲ ಆಯೋಗದ ಅಧ್ಯಕ್ಷರು, ನೀತಿ ಆಯೋಗದ ಪ್ರತಿನಿಧಿ ಗಳು ಹಾಗೂ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳು ಭಾಗಿಯಾಗಿದ್ದ ಈ ಸಭೆಯಲ್ಲಿ ರಾಜ್ಯ ಸರ್ಕಾರಕ್ಕೆ ಈ ಷರತ್ತು ವಿಧಿಸಲಾಗಿದೆ.

‘2029ಕ್ಕೆ ಯೋಜನೆ ಪೂರ್ಣ’




- ಯೋಜನೆಗೆ ಇಲ್ಲಿಯವರೆಗೆ ರಾಜ್ಯ ಸರ್ಕಾರದ ಅನುದಾನ ₹10,467 ಕೋಟಿ ವೆಚ್ಚ ಮಾಡಲಾಗಿದೆ
- ಯೋಜನೆಯನ್ನು 2029ರ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಿ ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ನೀರು ಒದಗಿಸಲಿದ್ದೇವೆ
- ಭೂಸ್ವಾಧೀನ ಪ್ರಕ್ರಿಯೆ ಶೇ 90ರಷ್ಟು ಪೂರ್ಣಗೊಂಡಿದೆ
- ಹಣಕಾಸಿನ ಅಡೆತಡೆ ಹೊರತುಪಡಿಸಿ ಯೋಜನೆಗೆ ಬೇರೆ ಯಾವುದೇ ಅಡ್ಡಿ ಆತಂಕಗಳಿಲ್ಲ

ಈ ಯೋಜನೆಗೆ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ, ಪ್ರವಾಹ ನಿರ್ವಹಣೆ ಯೋಜನೆ ಸೇರಿದಂತೆ ಯಾವುದೇ ಯೋಜನೆ ಅಥವಾ ಬಾಹ್ಯ ಹಣಕಾಸು ನೆರವು ಕೊಡಿಸುವ ಖಾತರಿ ನೀಡುವುದಿಲ್ಲ ಎಂದು ಸಮಿತಿ ಸ್ಪಷ್ಟವಾಗಿ ಹೇಳಿದೆ. ಅಲ್ಲದೇ, ಈ ಯೋಜನೆಗಳೆಲ್ಲ 16ನೇ ಹಣಕಾಸು ಆಯೋಗದ ಅವಧಿಯಲ್ಲಿ ಹೊಸ ಸ್ವರೂಪ ಪಡೆಯುವ ಸಾಧ್ಯತೆ ಇದೆ ಎಂದೂ ಸಲಹಾ ಸಮಿತಿ ಹೇಳಿದೆ. ಯೋಜನೆಗೆ ಕೇಂದ್ರ ಅರಣ್ಯ ಸಚಿವಾಲಯ, ಬುಡಕಟ್ಟು ಸಚಿವಾಲಯ ಸೇರಿದಂತೆ ವಿವಿಧ ಇಲಾಖೆಗಳಿಂದ ಅಗತ್ಯ ಅನುಮೋದನೆ ಪಡೆಯಬೇಕು ಎಂದು ಸಮಿತಿ ನಿರ್ದೇಶನ ನೀಡಿದೆ.

ರೈತರಿಗೆ ಸಕಾಲದಲ್ಲಿ ನೀರು ತಲುಪುವಂತೆ ನೋಡಿಕೊಳ್ಳಲು ತ್ವರಿತಗತಿಯಲ್ಲಿ ಶಾಖಾ ಕಾಲುವೆಗಳ ಕಾಮಗಾರಿ ನಡೆಸಬೇಕು ಎಂದು ನೀತಿ ಆಯೋಗದ ಉಪ ಸಲಹೆಗಾರರು ಸಲಹೆ ನೀಡಿದರು. ‘ಪ್ರಸ್ತುತ ಮುಖ್ಯ ಕಾಲುವೆ ಕಾಮಗಾರಿ ಪೂರ್ಣಗೊಳಿಸಿ ಕೆರೆಗಳನ್ನು ತುಂಬಿಸುತ್ತೇವೆ. ನಂತರ ಹಂತ ಹಂತವಾಗಿ ಶಾಖಾ ಕಾಲುವೆ ಕೈಗೆತ್ತಿಕೊಳ್ಳಲಾಗುವುದು’ ಎಂದು ಕರ್ನಾಟಕ ಸರ್ಕಾರದ ಅಧಿಕಾರಿಗಳು ಸ್ಪಷ್ಟಪಡಿಸಿದರು.

‘2020ರಲ್ಲಿ ನಡೆದ ಸಲಹಾ ಸಮಿತಿಯ 147ನೇ ಸಭೆಯಲ್ಲಿ ಯೋಜನೆಯ ಮೌಲ್ಯಮಾಪನ ನಡೆಸಲಾಗಿತ್ತು. 2018–19ನೇ ಸಾಲಿನ ದರಕ್ಕೆ ಅನುಗುಣವಾಗಿ ಯೋಜನಾ ಮೊತ್ತ ₹16,125 ಕೋಟಿಗೆ ಹೂಡಿಕೆ ಅನುಮೋದನೆ ಸಮಿತಿ 2021ರಲ್ಲಿ ಒಪ್ಪಿಗೆಕೊಟ್ಟಿತ್ತು. ರಾಷ್ಟ್ರೀಯ ಯೋಜನೆಯನ್ನಾಗಿ ಪರಿಗಣಿಸಲು ಉನ್ನತಾಧಿಕಾರ ಸಮಿತಿ ಶಿಫಾರಸು ಮಾಡಿತ್ತು. 2022ರಲ್ಲಿ ನಡೆದ ಸಾರ್ವಜನಿಕ ಹೂಡಿಕೆ ಸಮಿತಿ ಸಭೆಯಲ್ಲಿ ಯೋಜನೆಯ ಮೌಲ್ಯಮಾಪನ ನಡೆಸಲಾಗಿತ್ತು. ಈಗಿನ ದರ ಹಂತಕ್ಕೆ ಅನುಗುಣವಾಗಿ ಯೋಜನಾ ಮೊತ್ತ ಪರಿಷ್ಕರಣೆ ಮಾಡಲು ತೀರ್ಮಾನಿಸಲಾಗಿತ್ತು. ಇದೀಗ ಪರಿಷ್ಕೃತ ಮೊತ್ತದ ಪ್ರಸ್ತಾವ ಸಲ್ಲಿಸಲಾಗಿದೆ’ ಎಂದು ವಿಶ್ವೇಶ್ವರಯ್ಯ ಜಲ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಸಮಿತಿಯ ಗಮನಕ್ಕೆ ತಂದರು.

ಗುವಾಹಟಿ: ಭಾರಿ ಮಳೆ, ಮಹಿಳೆ ಸಾವು



ಗುವಾಹಟಿ (ಪಿಟಿಐ): ಅಸ್ಸಾಂನ ರಾಜಧಾನಿ ಗುವಾಹಟಿಯಲ್ಲಿ ಭಾರಿ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಮಲಿಗಾಂವ್ ಚರಿಯಲಿ ಎಂಬಲ್ಲಿ ಮಹಿಳೆಯೊಬ್ಬರು ಚರಂಡಿಗೆ ಬಿದ್ದು ಮೃತಪಟ್ಟಿದ್ದಾರೆ ಎಂದು ಅಸ್ಸಾಂ ವಿಕೋಪ ನಿರ್ವಹಣೆ ಪ್ರಾಧಿಕಾರ ತಿಳಿಸಿದೆ.

ಖಾನಾಪಾರಾದಲ್ಲಿ 21.5 ಸೆಂ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಮುಂದಿನ 24 ಗಂಟೆಗಳಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಗಾಳಿ ಸಹಿತ ಮಳೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ.

ಗುವಾಹಟಿಯಲ್ಲಿ ಭಾನುವಾರ ರಾತ್ರಿ ಆರಂಭವಾದ ಮಳೆ ಸೋಮವಾರ ಬೆಳಗಿನವರೆಗೂ ಮುಂದುವರಿಯಿತು. ಹಲವು ರಸ್ತೆಗಳು ಮತ್ತು ತಗ್ಗು ಪ್ರದೇಶದಲ್ಲಿರುವ ಮನೆಗಳು ಜಲಾವೃತಗೊಂಡವು. ನಗರದಾದ್ಯಂತ ಸಂಚಾರ ದಟ್ಟಣೆ ಕಂಡುಬಂದದ್ದರಿಂದ ವಾಹನ ಸವಾರರು ಪರದಾಡಿದರು.

ಚಿಟಿಕೆ ಸುದ್ದಿ

ಮಂಡ್ಯ ಜೈಲಿನಲ್ಲಿ ಗಾಂಜಾ ಪತ್ತೆ: ಪ್ರಕರಣ ದಾಖಲು

ಮಂಡ್ಯ: ಇಲ್ಲಿಯ ಜಿಲ್ಲಾ ಕಾರಾಗೃಹದಲ್ಲಿ ಟೇಪ್ ಸುತ್ತಿದ ಚೆಂಡಿನಲ್ಲಿ 10 ಗ್ರಾಂ ಗಾಂಜಾ ಹಾಗೂ ಮೊಬೈಲ್ ಪತ್ತೆಯಾಗಿದ್ದು, ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚೆಂಡು ಕೊಯ್ದು ಮೊಬೈಲ್, ಗಾಂಜಾ ಇರಿಸಿ ಕಾರಾಗೃಹದ ಒಳಭಾಗಕ್ಕೆ ಎಸೆಯಲಾಗಿತ್ತು. ಬಳಿಕ ಅದನ್ನು ಕೈದಿ ನಾಗ ಅಲಿಯಾಸ್ ಹಂದಿ ನಾಗ ಎತ್ತಿಕೊಂಡಿದ್ದ. ಸಿ.ಸಿ.ಟಿ.ವಿ ಕ್ಯಾಮೆರಾದ ದೃಶ್ಯಾವಳಿ ಗಮನಿಸಿದ ಅಧಿಕಾರಿಗಳು ನಾಗನ ಸೆಲ್‌ಗೆ ಹೋಗಿ ಪರಿಶೀಲಿಸಿದಾಗ ಗಾಂಜಾ, ಮೊಬೈಲ್ ಪತ್ತೆಯಾಯಿತು.

ಗಾಂಧಿ ಪುತ್ಥಳಿ ಭಗ್ನ ಆರೋಪಿ ಬಂಧನ

ಹಾವೇರಿ: ಇಲ್ಲಿಯ ನಗರಸಭೆ ಬಳಿ ಪ್ರತಿಷ್ಠಾಪಿಸಿದ್ದ ಮಹಾತ್ಮ ಗಾಂಧಿ ಪುತ್ಥಳಿಯನ್ನು ಭಗ್ನಗೊಳಿಸಿದ ಆರೋಪದಡಿ ವೈಭವ್ ವಿನೋದ ರಾಯ್ಕರ್ (28) ಎಂಬಾತನನ್ನು ಶಹರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಭಾನುವಾರ ತಡರಾತ್ರಿ ಆರೋಪಿ, ಸಿಮೆಂಟ್ ಇಟ್ಟಿಗೆಯಿಂದ ಹೊಡೆದು ಪುತ್ಥಳಿ ಭಗ್ನಗೊಳಿಸಿದ್ದ. ನಗರಸಭೆ ಪೌರಾಯುಕ್ತ ಎಚ್.ಕಾಂತರಾಜು ಈ ಬಗ್ಗೆ ದೂರು ನೀಡಿದ್ದರು. ಆತ ಮಾನಸಿಕ ಅಸ್ವಸ್ಥ ಎಂದು ಗೊತ್ತಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ತಿಳಿಸಿದ್ದಾರೆ.

'ವಿನಯ ಕುಲಕರ್ಣಿಗೆ ಶಿಕ್ಷೆ: ಆದೇಶ ತಲುಪಿಲ್ಲ'

ಮಂಗಳೂರು: 'ಶಾಸಕ ವಿನಯ ಕುಲಕರ್ಣಿಗೆ ಜೀವಾವಧಿ ಶಿಕ್ಷೆ ವಿಧಿಸಿರುವ ಕುರಿತು ನ್ಯಾಯಾಲಯದಿಂದ ಈ ವರೆಗೆ ನಮ್ಮ ಕಚೇರಿಗೆ ಅಧಿಕೃತ ಆದೇಶ ಬಂದಿಲ್ಲ. ಆದೇಶ ಬಂದ ನಂತರ ಮುಂದಿನ ಕ್ರಮದ ಬಗ್ಗೆ ಯೋಚಿಸಲಾಗುವುದು' ಎಂದು ವಿಧಾನ-ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಯಾವ ಆಧಾರದಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲು ಹೊರಟಿದೆ ಎಂಬ ಬಗ್ಗೆ ಮಾಹಿತಿ ಇಲ್ಲ' ಎಂದರು.



ವಿನಯ ಕುಲಕರ್ಣಿ

'ಆದರೆ, ಯಾವುದೇ ಕಾನೂನು ರೂಪಿಸುವಾಗ ಎಲ್ಲ ಪ್ರದೇಶ, ಜಾತಿ, ವರ್ಗ, ಧರ್ಮದ-ವರನ್ನು ವಿಶ್ವಾಸಕ್ಕೆ ಪಡೆದು, ಯಾರಿಗೂ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾಗುತ್ತದೆ' ಎಂದು ಹೇಳಿದರು.

ಸಮಿತಿ ಸಭೆ: ಪಕ್ಷಾಂತರ ನಿಷೇಧ ಕಾಯ್ದೆ ಬಲಪಡಿಸುವ ನಿಟ್ಟಿನಲ್ಲಿ ರಚನೆಯಾಗಿರುವ ಪರಿಶೀಲನಾ ಸಮಿತಿಯ ಸಭೆಯು ಒಡಿಶಾದ ಭುವನೇಶ್ವರದಲ್ಲಿ ಇದೇ 22 ಮತ್ತು 23ರಂದು ನಡೆಯಲಿದೆ. ಕರ್ನಾಟಕ, ಮಹಾರಾಷ್ಟ್ರ, ಒಡಿಶಾ, ನಾಗಾಲ್ಯಾಂಡ್, ಸಿಕ್ಕಿಂ ರಾಜ್ಯಗಳ ಸ್ಪೀಕರ್‌ಗಳು, ಹಿರಿಯ ವಕೀಲರು ಭಾಗವಹಿಸಲಿದ್ದಾರೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ರಚಿಸಿರುವ ಈ ಸಮಿತಿ ಈಗಾಗಲೇ ಒಂದು ಸಭೆ ನಡೆಸಿದ್ದು, ಇನ್ನು ಒಂದು ವರ್ಷದ ಒಳಗಾಗಿ ವರದಿ ಸಲ್ಲಿಸಲಿದೆ ಎಂದರು.

ವನ್ಯಜೀವಿ-ಮಾನವ ಸಂಘರ್ಷ ನಿಯಂತ್ರಿಸಲು ಅರಣ್ಯ ಇಲಾಖೆ ವಿಫಲವಾಗಿದೆಯೇ?


• ಹೌದು • ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಆಸ್ಪತ್ರೆಗೆ ಬಾರದೆ ವೈದ್ಯರ ಕಳ್ಳ ಹಾಜರಿ

ತಂತ್ರಜ್ಞಾನ ಆಧಾರಿತ ವ್ಯವಸ್ಥೆ ತಪ್ಪಿಸಲು ಕಳ್ಳಮಾರ್ಗ • ವಿಶ್ಲೇಷಣೆಯಿಂದ ದೃಢ

• ವರುಣ ಹೆಗಡೆ



ಬೆಂಗಳೂರು: ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಜಿಯೋ ಫೆನ್ಸಿಂಗ್ ತಂತ್ರಜ್ಞಾನ ಆಧರಿಸಿದ ನೂತನ ಹಾಜರಾತಿ ವ್ಯವಸ್ಥೆಯಿಂದ ತಪ್ಪಿಸಿಕೊಳ್ಳಲು ವಾಮಮಾರ್ಗ ಹಿಡಿದಿರುವ ಕೆಲವು ಆಯುಷ್ ವೈದ್ಯರು ಹಾಗೂ ಸಿಬ್ಬಂದಿ, ಛಾಯಾಚಿತ್ರ ಬಳಸಿ ಹಾಜರಿ ಹಾಕಿ, ಕರ್ತವ್ಯಕ್ಕೆ ಗೈರಾಗುತ್ತಿರುವ ಕೃತ್ಯ ಪತ್ತೆಯಾಗಿದೆ.

ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯ (ಕೆಎಎಂಎಸ್) ವಿಶ್ಲೇಷಣೆಯಿಂದ ವೈದ್ಯರು, ಸಿಬ್ಬಂದಿಯ ಕಳ್ಳ ಚಟುವಟಿಕೆ ದೃಢಪಟ್ಟಿದೆ.

ಹಾಜರಾತಿಯಲ್ಲಿ ಪಾರದರ್ಶಕತೆ ಮತ್ತು ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಮೊಬೈಲ್ ಫೋನ್ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು (ಕರ್ತವ್ಯ) ಕಳೆದ ವರ್ಷ ಜಾರಿ ಮಾಡಿದೆ. ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯಲ್ಲಿ ದೋಷಗಳು ಕಾಣಿಸಿ ಕೊಳ್ಳುತ್ತಿದ್ದ ಕಾರಣ, ಮೊಬೈಲ್ ಆಧಾರಿತ ಇ-ಹಾಜರಾತಿ ವ್ಯವಸ್ಥೆಯನ್ನು ಇಲಾಖೆ ಪರಿಚಯಿಸಿತ್ತು. ಆದರೆ, ಆಯುಷ್ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಕೆಲ ವೈದ್ಯರು ಹಾಗೂ ಸಿಬ್ಬಂದಿ ಆಸ್ಪತ್ರೆ ಮತ್ತು ಕಚೇರಿಗೆ ತೆರಳದೆ, ಆಪ್ತರ ನೆರವಿನಿಂದ ತಮ್ಮ ಹಾಜರಿ ಹಾಕಿಸುತ್ತಿದ್ದಾರೆ. ಇದರಿಂದಾಗಿ ಹಾಜರಾತಿ ವ್ಯವಸ್ಥೆಯಲ್ಲಿ ಪಾರದರ್ಶಕತೆ ತರುವ ಹಾಗೂ ವೈದ್ಯರ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಆಶಯಕ್ಕೆ ಹಿನ್ನಡೆಯಾಗಿದೆ.

84 ಮಂದಿ ಈ ರೀತಿ ಅನ್ಯ ಮಾರ್ಗ ಕಂಡುಕೊಂಡು ಹಾಜರಿ ಹಾಕಿದ್ದಾರೆ. ಅವರಲ್ಲಿ ವೈದ್ಯಕೀಯ ಅಧೀಕ್ಷಕರು, ವೈದ್ಯಾಧಿಕಾರಿಗಳ ಜತೆಗೆ, ಇಲಾಖೆಯ ಸಹಾಯಕ ಆಡಳಿತಾಧಿಕಾರಿಗಳೂ ಸೇರಿದ್ದಾರೆ. ಅವರು ತಮ್ಮ ಗುರುತಿನ ಸಂಖ್ಯೆ, ಮುಖವನ್ನು ಗುರುತಿಸಲು ನೆರವಾಗುವ ಫೋಟೊಗಳು, ವಿಡಿಯೊಗಳನ್ನು ಹಂಚಿಕೊಳ್ಳುವ ಮೂಲಕ ಈ ರೀತಿ, ಇನ್ನೊಬ್ಬರಿಂದ ಹಾಜರಿ ಹಾಕಿಸುತ್ತಿರುವುದು ದೃಢಪಟ್ಟಿದೆ.

ತಂತ್ರಾಂಶ ಕಾರ್ಯನಿರ್ವಹಣೆ ಹೇಗೆ?

ಅನಧಿಕೃತ ಗೈರು, ತಡವಾಗಿ ಕಚೇರಿ ಅಥವಾ ಆಸ್ಪತ್ರೆಗೆ ಬರುವುದು, ಬೇಗ ಹೊರಡುವುದಕ್ಕೆ ಕಡಿವಾಣ ಹಾಕುವ ಉದ್ದೇಶವನ್ನು ಹೊಸ ವ್ಯವಸ್ಥೆ ಹೊಂದಿದೆ. ಹಲವು ಇಲಾಖೆಯಲ್ಲಿ ಈ ವ್ಯವಸ್ಥೆ ಜಾರಿಯಾಗಿದೆ. ಮೇ 1ರಿಂದ ಎಲ್ಲ ಇಲಾಖೆ, ನಿಗಮ ಮಂಡಳಿ ನೌಕರರು ಇದೇ ವ್ಯವಸ್ಥೆಯಡಿ ಹಾಜರಿ ಹಾಕುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇದೇ 7 ರಂದು ಆದೇಶ ಹೊರಡಿಸಿದೆ.

ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ನಂತರ ಆಧಾರ್ ಅಂಕಿಗಳನ್ನು ನಮೂದಿಸಬೇಕು. ಬಳಿಕ ಅದರಲ್ಲಿ ಅವರ ಕೆಲಸಕ್ಕೆ ಸಂಬಂಧಿಸಿದ ವಿವರಗಳನ್ನು ಅಪ್‌ಲೋಡ್ ಮಾಡಬೇಕು. ಇದನ್ನು ಒಮ್ಮೆ ಮಾಡಿದರೆ ಸಾಕು, ಎಲ್ಲ ಮಾಹಿತಿ ಅದರಲ್ಲಿ ಕಾಯಂ ಆಗಿ ಸಂಗ್ರಹವಾಗಿರುತ್ತದೆ. ಇದಾದ ಬಳಿಕ ಲಾಗ್‌ಇನ್, ಲಾಗ್‌ಔಟ್ ಮೊಬೈಲ್ ಆ್ಯಪ್ ಮೂಲಕವೇ ದಾಖಲಾಗುತ್ತದೆ. ನಿಗದಿತ ಸ್ಥಳಕ್ಕೆ ಹೋದಲ್ಲಿ ಮಾತ್ರ ಹಾಜರಾತಿ ಹಾಕಲು ಸಾಧ್ಯವಾಗಲಿದೆ. ಚಲನವಲನದ ಮೇಲೆ ನಿಗಾ ಇಡಲು ಇದು ಸಹಕಾರಿಯಾಗಿದೆ.

'ಶಿಸ್ತುಕ್ರಮ ಕೈಗೊಳ್ಳಲಾಗುವುದು'

'ಕೆಎಎಂಎಸ್ ತಂತ್ರಾಂಶದಲ್ಲಿ ಹಾಜರಾತಿ ದಾಖಲಿಸುವಾಗ ಕೆಲವರು ಫೋಟೊ ಪ್ರತಿ ಬಳಸುತ್ತಿರುವುದು ಕೆಎಎಂಎಸ್ ವಿಶ್ಲೇಷಣೆಯಿಂದ ದೃಢಪಟ್ಟಿದೆ. ಐಡಿ ಅಥವಾ ಫೋಟೊಗಳನ್ನು, ಇನ್ನಿತರೆ ಅನಧಿಕೃತ ಮಾರ್ಗಗಳನ್ನು ಬಳಸಿ ಹಾಜರಾತಿ ದಾಖಲಿಸುವ ದುರ್ವರ್ತನೆ ತೋರಿ, ಸರ್ಕಾರಿ ನಿಯಮಗಳನ್ನು ಉಲ್ಲಂಘಿಸಿದ್ದೀರಿ. ಇನ್ನುಮುಂದೆ ಈ ರೀತಿ ಪುನರಾವರ್ತನೆಯಾಗದಂತೆ ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸಬೇಕು. ಪುನರಾವರ್ತನೆಯಾದಲ್ಲಿ ನಿಯಮಾನುಸಾರ ನಿಮ್ಮ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು' ಎಂದು ಆಯುಷ್ ಇಲಾಖೆ ಆಯುಕ್ತ ಸುನೀಲ್ ಪನ್ವಾರ್ ಅವರು, ತಪ್ಪು ಮಾಡಿದವರಿಗೆ ನೀಡಿದ ನೋಟಿಸ್‌ನಲ್ಲಿ ಎಚ್ಚರಿಸಿದ್ದಾರೆ.

ಕರ್ತವ್ಯಕ್ಕೆ ಹಾಜರಾಗದೆ, ಬೇರೆ ಮಾರ್ಗದಿಂದ ಹಾಜರಿ ಹಾಕುತ್ತಿರುವವರಿಗೆ ಇಲಾಖೆ ಆಯುಕ್ತರಾದ ಸುನೀಲ್ ಪನ್ವಾರ್ ಅವರು ಎಚ್ಚರಿಕೆಯ ನೋಟಿಸ್ ನೀಡಿದ್ದಾರೆ.

ಮುಖಚರ್ಯೆ ಆಧಾರಿತ ವ್ಯವಸ್ಥೆ: ಈ ಹಿಂದೆ ಜಾರಿಯಲ್ಲಿದ್ದ ಬಯೋಮೆಟ್ರಿಕ್ ಹಾಜರಾತಿ ವ್ಯವಸ್ಥೆಯಲ್ಲಿ ಯಂತ್ರದ ಮುಂದೆ ಸರತಿ ಸಾಲಿನಲ್ಲಿ ನಿಂತು, ಬೆರಳಚ್ಚು ಒತ್ತಬೇಕಾಗಿತ್ತು. ಆದ್ದರಿಂದ ಮೊಬೈಲ್ ಫೋನ್ ಮೂಲಕವೇ ಹಾಜರಾತಿ ದಾಖಲಿಸಲು 'ಕರ್ತವ್ಯ' ತಂತ್ರಜ್ಞಾನ ಆಧಾರಿತ ಹಾಜರಾತಿ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಪರಿಚಯಿಸಲಾಗಿದೆ. ಇದು ಮುಖಚರ್ಯೆ ಆಧಾರಿತ ವ್ಯವಸ್ಥೆಯಾಗಿದೆ.

'ಆಯುಷ್ ವೈದ್ಯರು ಹಾಗೂ ಸಿಬ್ಬಂದಿ ತಮ್ಮ ಒಂದು ಮೊಬೈಲ್ ಫೋನ್ ಅನ್ನು ಆಪ್ತರಿಗೆ ನೀಡಿ, ನಿಗದಿತ ಸ್ಥಳದಲ್ಲಿ 'ಲಾಗ್ ಇನ್' ಮತ್ತು 'ಲಾಗ್ ಔಟ್' ಆಗಲು ಸೂಚಿಸುತ್ತಿದ್ದರು. ಮುಖಚರ್ಯೆ ನೀಡುವ ಆಯ್ಕೆ ತೆರೆದುಕೊಂಡಾಗ, ಆಪ್ತರ ಮೊಬೈಲ್ ಫೋನ್ ಮೂಲಕ ಫೋಟೊ ಅಥವಾ ವಿಡಿಯೊ ಪ್ರದರ್ಶಿಸುತ್ತಿದ್ದರು. ಹೀಗೆ ಹಾಜರಿ ಹಾಕುತ್ತಿದ್ದಾರೆ' ಎಂದು ಇಲಾಖೆ ಮೂಲಗಳು ತಿಳಿಸಿವೆ.

'ಆಯುಷ್ ಇಲಾಖೆಯಡಿ ರಾಜ್ಯದ ವಿವಿಧೆಡೆ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಅಂತಹ ಆಸ್ಪತ್ರೆಗಳು ಈಗಾಗಲೇ ವೈದ್ಯರ ಹಾಗೂ ಸಿಬ್ಬಂದಿ ಕೊರತೆ ಎದುರಿಸುತ್ತಿವೆ. ಹೀಗಿರುವಾಗ ಲಭ್ಯ ವೈದ್ಯರು ಸೇವೆಗೆ ಗೈರಾಗಿ, ಬೇರೆಯವರಿಂದ ಹಾಜರಿ ಹಾಕಿಸುತ್ತಿರುವುದು ವೈದ್ಯಕೀಯ ಸೇವೆಗೆ ಹಿನ್ನಡೆಯಾಗಿದೆ. ಕೆಲವರು ಆಸ್ಪತ್ರೆಯಲ್ಲಿನ ಸಿಬ್ಬಂದಿಯನ್ನೇ ದುರ್ಬಳಕೆ ಮಾಡಿಕೊಂಡು, ಗೈರಾಗುತ್ತಿದ್ದಾರೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

'ಸುಳ್ಳು ಜಾತಿ ಪ್ರಮಾಣ ಪತ್ರ ಕೊಡಿಸಲು ನಾಯಕರ ಸಹಾಯ'

ವಿಜಯಪುರ: 'ಸುಳ್ಳು ಜಾತಿ ಪ್ರಮಾಣ ಪತ್ರ ಕೊಡಿಸುವ ಸ್ಪರ್ಧೆ ರಾಜ್ಯದ ರಾಜಕೀಯ ನಾಯಕರಲ್ಲಿ ನಡೆಯುತ್ತಿದೆ' ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಹೇಳಿದರು.

'2020ರಿಂದ ಈವರೆಗೆ ರಾಜ್ಯದಲ್ಲಿ 2,39,166 ಜನ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ 56,814 ಜನರಿಗೆ ನೀಡಲಾಗಿದೆ. ಇದನ್ನು ಕೊಡಿಸಲು ಎಲ್ಲ ರಾಜಕೀಯ ಪಕ್ಷಗಳ ನಾಯಕರು ಸಹಾಯ ಮಾಡಿದ್ದಾರೆ' ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.



'ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿ ತಡೆಯಾಜ್ಞೆ ತೆರವಿಗೆ ರಾಜ್ಯ ಸರ್ಕಾರ ಕೂಡಲೇ ಅರ್ಜಿ ಸಲ್ಲಿಸಬೇಕು. ತಡೆಯಾಜ್ಞೆ ತೆರವಾಗದಿದ್ದರೆ ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಬೇಕು' ಎಂದರು.

'ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ಬೇಕು'

ಬೆಳಗಾವಿ: 'ಅಲ್ಪಸಂಖ್ಯಾತರು ಕಾಂಗ್ರೆಸ್ ಪಕ್ಷದ ಭದ್ರಬುನಾದಿಯಾಗಿದ್ದು, ಅವರಿಗೆ ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎಂಬುದು ನನ್ನ ನಿಲುವು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಚುನಾವಣೆ ಸಂದರ್ಭ ಮತ್ತು ನಂತರ ಅಲ್ಪಸಂಖ್ಯಾತ ಮುಖಂಡರನ್ನು ಪಕ್ಷದಿಂದ ದೂರವಿಟ್ಟಿದ್ದು ಅಥವಾ ಹೊರಹಾಕಿದ್ದು ಸರಿಯಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ತಿಳಿಸಿದ್ದೇನೆ. ಮುಂದೆ ಇದನ್ನು ಸರಿಪಡಿಸುವುದಾಗಿ ಭರವಸೆ ನೀಡಿದ್ದಾರೆ' ಎಂದು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಎನ್.ಎ.ಹ್ಯಾರಿಸ್ ಮತ್ತು ಅವರ ಪುತ್ರ ಮೊಹಮ್ಮದ್ ನಲಪಾಡ್ ಮನೆ ಮೇಲೆ ಇ.ಡಿ ದಾಳಿ ಕುರಿತು 'ಇಂತಹ ಘಟನೆಗಳು ಸಹಜವಾಗಿ ನಡೆಯುತ್ತಿರುತ್ತವೆ. ಕಾನೂನು ಹೋರಾಟ ಮಾಡಬೇಕಷ್ಟೆ' ಎಂದರು.

ಡಿಸಿಆರ್‌ಇ: ಅಧಿಕಾರಿಗಳಿಂದ ಕಿರುಕುಳದ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದಲ್ಲಿ (ಡಿಸಿಆರ್‌ಇ) ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೆ, ಹಿರಿಯ ಅಧಿಕಾರಿಗಳು ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪವಿದ್ದು, ಈ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಹಾಗೂ ಡಿಸಿಆರ್‌ಇ ಡಿಜಿಪಿಗೆ ಎರಡು ಪ್ರತ್ಯೇಕ ದೂರುಗಳು ಸಲ್ಲಿಕೆ ಆಗಿವೆ.

ಡಿಸಿಆರ್‌ಇ ಡಿವೈಎಸ್‌ಪಿ ಮಹೇಶ್ವರಗೌಡ ಹಾಗೂ ಕೇಂದ್ರ ಕಚೇರಿಯ ಎಸ್.ಪಿ ಕರಿಬಸನಗೌಡ ಅವರ ವಿರುದ್ಧ ಪಶ್ಚಿಮ ವಿಭಾಗದ ಇನ್‌ಸ್ಪೆಕ್ಟರ್ ಟಿ.ಆರ್.ಶ್ರೀನಿವಾಸ್ ದೂರು ಸಲ್ಲಿಸಿದ್ದಾರೆ. ಶ್ರೀನಿವಾಸ್ ಅವರು ಪತ್ರದಲ್ಲಿ 18 ಅಂಶಗಳನ್ನು ಉಲ್ಲೇಖಿಸಿದ್ದಾರೆ. ಅಲ್ಲದೇ, ವಿಡಿಯೊ ಹೇಳಿಕೆಯನ್ನೂ ಬಿಡುಗಡೆ ಮಾಡಿದ್ದಾರೆ. ಐಪಿಎಸ್ ಅಧಿಕಾರಿಗಳು ದೌರ್ಜನ್ಯ ಎಸಗುತ್ತಿದ್ದಾರೆ ಎಂದು ಆರೋಪಿಸಿ, ಡಿಸಿಆರ್‌ಇ ಎಸ್‌ಪಿ ಎಸ್.ಎಸ್.ಕಾಶಿ ಸಹ ದೂರು ನೀಡಿದ್ದಾರೆ.

ಐಪಿಎಸ್ ಅಧಿಕಾರಿಗಳ ದೌರ್ಜನ್ಯ: ಐಪಿಎಸ್ ಅಧಿಕಾರಿಗಳು ನೀಡುತ್ತಿರುವ ದೌರ್ಜನ್ಯವನ್ನು ಎಳೆಎಳೆಯಾಗಿ ಬಹಿರಂಗಪಡಿಸಲು ಅನುಮತಿ ನೀಡುವಂತೆ ಸಲೀಂ ಅವರಿಗೆ ಸಲ್ಲಿಸಿರುವ ಪತ್ರದಲ್ಲಿ ಕಾಶಿ ಅವರು ಕೋರಿದ್ದಾರೆ.

'ರಾಜ್ಯದಲ್ಲಿ ಕೆಲಸ ಮಾಡುತ್ತಿರುವ ಕೆಲವು ಐಪಿಎಸ್ ಅಧಿಕಾರಿಗಳು, ತಮ್ಮ ಅಧಿಕಾರ ಬಲದಿಂದ ಕೆಳಹಂತದ ಅಧಿಕಾರಿಗಳು, ಸಿಬ್ಬಂದಿ ಮೇಲೆ ದರ್ಪ, ತಾರತಮ್ಯ, ಸ್ವಜನ ಪಕ್ಷಪಾತ ಮಾಡುತ್ತಿದ್ದಾರೆ' ಎಂದು ದೂರಿನಲ್ಲಿ ಕಾಶಿ ಉಲ್ಲೇಖಿಸಿದ್ದಾರೆ.

'ಕರ್ನಾಟಕ ಕೇಡರ್‌ನ ಅಧಿಕಾರಿಗಳು, ಕನ್ನಡಿಗ ಅಧಿಕಾರಿಗಳನ್ನು ಹತ್ತಿಕ್ಕುವ ಉದ್ದೇಶದಿಂದ ದರ್ಪ ತೋರಿಸುತ್ತಾ ಅಧಿಕಾರದ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ' ಎಂದು ಆಪಾದಿಸಿದ್ದಾರೆ. 'ಈ ಹಿಂದೆಯೂ ತಮ್ಮ ಬಳಿ ಈ ವಿಚಾರ ಪ್ರಸ್ತಾಪಿಸಿದಾಗ ಸಮಸ್ಯೆಗಳ ಪೈಕಿ ಶೇ 20ರಷ್ಟು ಬಗೆಹರಿಸಿದ್ದೀರಿ. ಉಳಿದ ಶೇ 80ರಷ್ಟು ಸಮಸ್ಯೆಗಳು ಬಗೆಹರಿದಿಲ್ಲ. ಮುಖ್ಯಮಂತ್ರಿ ಮತ್ತು ಗೃಹ ಸಚಿವರ ಸಮ್ಮುಖದಲ್ಲಿ ಈ ಕುರಿತು ಮುಕ್ತವಾಗಿ ಮಾತನಾಡಲು ಅವಕಾಶ ಕಲ್ಪಿಸಿ. ಕೇವಲ 30 ನಿಮಿಷಗಳಲ್ಲಿ ಎಲ್ಲ ವಿಚಾರಗಳನ್ನೂ ತಿಳಿಸುತ್ತೇನೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಚನ್ನರಾಯಪಟ್ಟಣದ ವಿವಿಧೆಡೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ

ಮಳೆ –ಗಾಳಿಗೆ ಹಾರಿದ ಶೀಟ್‌ಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಹಾಸನ ಮತ್ತು ಕೊಡಗಿನಲ್ಲಿ ಭಾನುವಾರ ರಾತ್ರಿ ಹಾಗೂ ಸೋಮವಾರ ಸಂಜೆ ಬಿರುಗಾಳಿಯೊಂದಿಗೆ ಗುಡುಗು–ಸಿಡಿಲಿನ ಮಳೆ ಸುರಿಯಿತು.

ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆಯಲ್ಲಿ ಕಾಲೇಜು ಕಟ್ಟಡ, ಬಿಜಿಎಸ್ ಸಮುದಾಯ ಭವನ ಹಾಗೂ ವಾಣಿಜ್ಯ ಮಳಿಗೆಗಳ ಶೀಟ್‌ಗಳು ಹಾರಿ ರಸ್ತೆಗೆ ಬಿದ್ದವು. ಮರದ ಕೊಂಬೆ ಬಿದ್ದು, ಎರಡು ಕಾರುಗಳಿಗೆ ಹಾನಿಯಾಯಿತು. ತಾಲ್ಲೂಕಿನ ಮಲ್ಲಿಪಟ್ಟಣದಲ್ಲಿ ಅರ್ಧ ಗಂಟೆ ಬಿರುಸಿನ ಮಳೆಯಾಯಿತು.

ಚನ್ನರಾಯಪಟ್ಟಣ ತಾಲ್ಲೂಕಿನ ವಿವಿಧೆಡೆ ತೆಂಗಿನ ಮರಗಳು ವಿದ್ಯುತ್ ತಂತಿ ಮಾರ್ಗದ ಮೇಲೆ ಬಿದ್ದು, ವಿದ್ಯುತ್ ಪೂರೈಕೆಯಲ್ಲಿ ಗಂಟೆಗಳ ಕಾಲ ವ್ಯತ್ಯಯವಾಯಿತು.

'8ಕ್ಕೂ ಹೆಚ್ಚು ಕಡೆ ವಿದ್ಯುತ್ ಕಂಬಗಳು ಉರುಳಿವೆ' ಎಂದು ಸೆಸ್ಕ್ ಜೆಇ ಮಹದೇವ್ ತಿಳಿಸಿದರು. ಬಾಗೂರು ಹೋಬಳಿಯಲ್ಲಿ ಬಾಳೆ, ಜೋಳ, ತೆಂಗು, ಮಾವಿನ ಬೆಳೆ ಹಾನಿಯಾಗಿದೆ.

ಕೊಡಗು ಜಿಲ್ಲೆಯ ನಾಪೋಕ್ಲು ಪಟ್ಟಣ, ಸಿದ್ದಾಪುರ, ಗುಹ್ಯ, ಸಿದ್ದಾಪುರ, ಕರಡಿಗೋಡು ಸೇರಿ ಹಲವೆಡೆ ಬಿರುಸಿನ ಮಳೆಯಾಗಿದೆ.



ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆಯಲ್ಲಿ ಸೋಮವಾರ ಸಂಜೆ ಗಾಳಿಗೆ ಮಳಿಗೆಗಳ ಚಾವಣಿಯ ಶೀಟ್ ಹಾರಿಬಿದ್ದವು

ಕಳಸ: ಭಾರಿ ಗಾಳಿ, ಮಳೆ

ಚಿಕ್ಕಮಗಳೂರು: ಕಳಸ, ಶೃಂಗೇರಿ ತಾಲ್ಲೂಕಿನ ಹಲವೆಡೆ ಹಾಗೂ ಬಾಳೆಹೊನ್ನೂರು ಸುತ್ತಮುತ್ತ ಸೋಮವಾರ ಸಂಜೆ ಭಾರಿ ಗಾಳಿ ಜೊತೆಗೆ ಮಳೆ ಸುರಿಯಿತು. ಕಾಫಿ, ಅಡಿಕೆ ತೋಟಗಳಲ್ಲಿ ಮರಗಳು ಧರೆಗೆ ಉರುಳಿದವು. ಅನೇಕ ಮನೆಗಳ ಚಾವಣಿ ಶೀಟುಗಳು ಹಾರಿವೆ

ಮರಗಳು ವಿದ್ಯುತ್ ತಂತಿಯ ಮೇಲೆ ಉರುಳಿದ್ದರಿಂದ ವಿದ್ಯುತ್ ಪೂರೈಕೆ ವ್ಯತ್ಯಯವಾಗಿದೆ. ಕಳಸ, ಹಳುವಳ್ಳಿ, ಮುನ್ನೂರುಪಾಲಿನಲ್ಲಿ 3 ಸೆಂ.ಮೀ ಮಳೆ ಸುರಿದಿರುವುದು ದಾಖಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟ್ವಾಳ ತಾಲ್ಲೂಕಿನ ಕೆಲವೆಡೆ, ಕುಕ್ಕೆ ಸುಬ್ರಹ್ಮಣ್ಯ, ಕುಲ್ಕುಂದ, ಕೈಕಂಬ, ಏನೇಕಲ್ಲು ಪಂಜ ಹಾಗೂ ಐನಕ್ಕಿದು ಕೊಲ್ಲಮೊಗ್ರ ಹರಿಹರ ಪ್ರದೇಶಗಳಲ್ಲಿ ಉತ್ತಮ ಮಳೆಯಾಗಿದೆ.

ಸಿಡಿಲು: ವೃದ್ಧೆ ಸಾವು

ಆಲೂರು (ಹಾಸನ ಜಿಲ್ಲೆ): ತಾಲ್ಲೂಕಿನ ಹುಲಕುಂದ ಎಸ್ಟೇಟ್ ಬಳಿ ಸೋಮವಾರ ಸಂಜೆ ದನ ಮೇಯಿಸುತ್ತಿದ್ದ ಮಾದಿಹಳ್ಳಿಯ ನೀಲಮ್ಮ (70) ಸಿಡಿಲು ಬಡಿದು ಮೃತಪಟ್ಟರು. ಮಳೆಯಿಂದ ರಕ್ಷಣೆ ಪಡೆಯಲು ಸಮೀಪದ ಮರದಡಿಯಲ್ಲಿ ಆಶ್ರಯ ಪಡೆದಿದ್ದಾಗ ಅವಘಡ ಸಂಭವಿಸಿದೆ. ಮೂಡುಬಿದಿರೆಯ ದರೆಗುಡ್ಡೆದಲ್ಲಿ ಸಿಡಿಲು ಬಡಿದು ಮೂರು ರಾಸು ಸಾವಿಗೀಡಾಗಿವೆ.

11 ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಬೆಂಗಳೂರು: ಕಲಬುರಗಿ, ಹಾಸನ, ಉಡುಪಿ ಸೇರಿದಂತೆ 11 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಏ.21ರಂದು ಗುಡುಗು ಸಹಿತ ಹಗುರ ಮಳೆಯಾಗಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆ, ಉತ್ತರ ಒಳನಾಡಿನ ವಿಜಯಪುರ, ಕಲಬುರಗಿ, ಯಾದಗಿರಿ, ಬೆಳಗಾವಿ ಹಾಗೂ ಧಾರವಾಡ ಜಿಲ್ಲೆ, ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆಯಿದೆ.

ಕಲಬುರಗಿ, ಬೀದರ್ ಜಿಲ್ಲೆಯಲ್ಲಿ ಸೋಮವಾರ ಅತ್ಯಧಿಕ ಉಷ್ಣಾಂಶ ದಾಖಲಾಗಿದೆ. ಕಲಬುರಗಿಯಲ್ಲಿ 41.7 ಡಿಗ್ರಿ ಸೆಲ್ಸಿಯಸ್, ಬೀದರ್‌ನಲ್ಲಿ 41.6 ಡಿಗ್ರಿ ಸೆಲ್ಸಿಯಸ್, ರಾಯಚೂರಿನಲ್ಲಿ 41.4 ಡಿಗ್ರಿ, ಕೊಪ್ಪಳದಲ್ಲಿ 40.4 ಡಿಗ್ರಿ, ವಿಜಯಪುರದಲ್ಲಿ 39.9 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಬೆಂಗಳೂರು ನಗರದಲ್ಲಿ 36 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶವಿತ್ತು.

ಬಸವ ಜಯಂತಿ ಸಂಭ್ರಮ

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.



ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬಸವ ಸಮಿತಿ ಸೋಮವಾರ ಬೆಂಗಳೂರಿನ ಬಸವೇಶ್ವರವೃತ್ತದಲ್ಲಿ ಆಯೋಜಿಸಿದ್ದ ವಿಶ್ವ ಬಸವ ಜಯಂತಿ ಕಾರ್ಯಕ್ರಮದ ವೇಳೆ ಮಹಿಳೆಯರು ಡೊಳ್ಳು ಬಾರಿಸಿ ಸಂಭ್ರಮಿಸಿದರು

'ಬಿಟ್‌ಕಾಯಿನ್: ರಾಜಕಾರಣಿಗಳ ಹೂಡಿಕೆ'

ಬೆಂಗಳೂರು: 'ರಾಜಕಾರಣಿಗಳು ಬಿಟ್‌ಕಾಯಿನ್ ಮೂಲಕ ವಿವಿಧ ದೇಶಗಳಲ್ಲಿ ಹೂಡಿಕೆ ಮಾಡಿದ್ದಾರೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಆರೋಪಿಸಿದ್ದಾರೆ.

ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಅವರ ಮನೆ ಮೇಲೆ ಜಾರಿ ನಿರ್ದೇಶನಾ-ಲಯದ ಅಧಿಕಾರಿಗಳ ತಂಡ ಶೋಧ ನಡೆಸಿದ ಅವರು ಪ್ರತಿಕ್ರಿಯಿಸಿದರು.



'ವಿಶೇಷವಾಗಿ ಕಾಂಗ್ರೆಸ್ ರಾಜಕಾರಣಿಗಳು ಹೆಚ್ಚು ಪ್ರಮಾಣದಲ್ಲಿ ಹೂಡಿಕೆ ಮಾಡಿದ್ದಾರೆ' ಎಂದರು.

'ಕಾಂಗ್ರೆಸ್ ನಾಯಕರು ನಿರಂತರವಾಗಿ ಆರ್ಥಿಕ ಅಪರಾಧ-ಗಳನ್ನು ಮಾಡುತ್ತಲೇ ಬರುತ್ತಿದ್ದಾರೆ. ಇದರಲ್ಲಿ ಬಿಟ್‌ಕಾಯಿನ್ ಕೂಡ ಒಂದು. ಬಿಟ್‌ಕಾಯಿನ್‌ನಲ್ಲಿ ಹೂಡಿಕೆ ಆಗಿದೆ ಎಂಬ ಮಾಹಿತಿ ಆಧರಿಸಿ ದಾಳಿ ನಡೆದಿದೆ' ಎಂದು ಹೇಳಿದರು.

ಹ್ಯಾರಿಸ್ ಮಕ್ಕಳಿಗೆ ಇ.ಡಿ ಬಿಸಿ

ಒಂದನೇ ಪುಟದಿಂದ...

ಹಿಂದೆ ವಿಶೇಷ ತನಿಖಾ ದಳ ಮೊಹಮ್ಮದ್ ಅವರನ್ನು ವಿಚಾರಣೆಗೊಳಪಡಿಸಿತ್ತು. ಬಿಟ್‌ಕಾಯಿನ್ ಪ್ರಕರಣ ಪತ್ತೆಯಾಗುವುದಕ್ಕೂ ಮೊದಲ ಆರು ವರ್ಷಗಳ ಅವಧಿಯಲ್ಲಿ ಮೊಹಮ್ಮದ್ ಮತ್ತು ಶ್ರೀಕಿ ಮಧ್ಯೆ ನಿರಂತರ ಹಣಕಾಸು ವ್ಯವಹಾರ ನಡೆದಿದೆ. ಈ ಅವಧಿಯಲ್ಲಿ ಒಟ್ಟು ₹4.65 ಕೋಟಿ ಹಣ ಕೈ ಬದಲಾಗಿದೆ. ಬಿಟ್‌ಕಾಯಿನ್ ವಹಿವಾಟಿಗೂ ಇದಕ್ಕೂ ಸಂಬಂಧವಿದೆಯೇ ಅಥವಾ ಇದು ಬೇರೆ ಅಕ್ರಮ ವಹಿವಾಟು ಆಗಿರಬಹುದೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಇ.ಡಿ ಮೂಲಗಳು ತಿಳಿಸಿವೆ.

2017ರಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿ ಬಿಟ್‌ಕಾಯಿನ್‌ಗಳನ್ನು ಕಳವು ಮಾಡಿ ಅವುಗಳನ್ನು ಕ್ರಿಪ್ಟೋ ಪ್ಲಾಟ್‌ಫಾರ್ಮ್‌ಗಳ ಮೂಲಕ ಮಾರಾಟ ಮಾಡಿದ ಆರೋಪದ ಮೇಲೆ ಶ್ರೀಕಿ ಮತ್ತು ಅವರ ಸಹಚರರ ವಿರುದ್ಧ ರಾಜ್ಯ ಪೊಲೀಸರು ಸಲ್ಲಿಸಿದ ಎಫ್‌ಐಆರ್‌ಗಳು ಮತ್ತು ಆರೋಪ ಪಟ್ಟಿಗಳಿಂದ ಹಣ ಅಕ್ರಮ ವರ್ಗಾವಣೆ ಪ್ರಕರಣ ಗೊತ್ತಾಯಿತು. ಈ ಪ್ರಕರಣದಲ್ಲಿ ಮೊಹಮ್ಮದ್ ನಲಪಾಡ್, ಒಮರ್ ಫಾರೂಕ್ ನಲಪಾಡ್ ಮತ್ತು ಅಕೀಬ್ ಖಾನ್ ಅವರು ಶಾಮೀಲಾಗಿರುವ ಶಂಕೆಯ ಮೇರೆಗೆ ಇ.ಡಿ ಶೋಧ ನಡೆಸಿದೆ.

ಈ ಹಿಂದೆ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೊಹಮ್ಮದ್ ನಲಪಾಡ್ ಅವರನ್ನು ವಿಶೇಷ ತನಿಖಾ ತಂಡ ವಿಚಾರಣೆಗೆ ಒಳಪಡಿಸಿತ್ತು. ಆಗ ಅವರು, 'ನಾನು ಮತ್ತು ನನ್ನ ಸಹೋದರ ಯಾವುದೇ ಅಕ್ರಮವೆಸಗಿಲ್ಲ. ಅಲ್ಲದೇ ತನಿಖಾ ಸಂಸ್ಥೆ ಆರೋಪ ಮಾಡಿದಂತೆ ಅಕ್ರಮವಾಗಿ ಹಣ ಪಡೆದುಕೊಂಡಿಲ್ಲ' ಎಂದು ಹೇಳಿದ್ದರು.

ತನಿಖೆಯ ಭಾಗವಾಗಿ ಶ್ರೀಕಿಯನ್ನು ರಾಜ್ಯ ಪೊಲೀಸರು ಬಂಧಿಸಿದ್ದರು.

ಪ್ರಕರಣ ನಡೆದುಬಂದ ಹಾದಿ

2019 ಜುಲೈ	:	ರಾಜ್ಯ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಹ್ಯಾಕ್ ಮಾಡಿದ್ದ ಶ್ರೀಕಿ
2020 ನವೆಂಬರ್	:	ಡಾರ್ಕ್‌ನೆಟ್ ಡ್ರಗ್ ಪ್ರಕರಣದಲ್ಲಿ ಶ್ರೀಕಿ ಬಂಧಿಸಿದ ಸಿಸಿಬಿ ಪೊಲೀಸರು
2021 ಜನವರಿ	:	ಶ್ರೀಕಿಯಿಂದ ₹9 ಕೋಟಿ ಮೌಲ್ಯದ 31 ಬಿಟ್‌ಕಾಯಿನ್ ವಶಪಡಿಸಿಕೊಂಡಿದ್ದಾಗಿ ಹೇಳಿದ ಸಿಸಿಬಿ. ಬಳಿಕ ಅವುಗಳು ನಾಪತ್ತೆಯಾದವು
2023 ಜೂನ್	:	ಬಿಟ್‌ಕಾಯಿನ್ ಹಗರಣ ತನಿಖೆಗಾಗಿ ವಿಶೇಷ ತಂಡ ರಚಿಸಿದ (ಎಸ್‌ಐಟಿ) ರಾಜ್ಯ ಸರ್ಕಾರ
2024 ಜೂನ್	:	ಶ್ರೀಕಿ ಬಂಧಿಸಿದ ಎಸ್‌ಐಟಿ
2024 ಜುಲೈ	:	ಶ್ರೀಕಿ ಮತ್ತು ಆತನ ಸಹಚರರಿಗೆ ಜಾಮೀನು ಮಂಜೂರು
2025 ಅಕ್ಟೋಬರ್	:	ಪೋಕರ್ ಬಾಜಿ ಹ್ಯಾಕಿಂಗ್ ಪ್ರಕರಣದಲ್ಲಿ ಶ್ರೀಕಿ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಸಿದ ಎಸ್‌ಐಟಿ

ಮೂರು ತಾಸು ಆಗಸದಲ್ಲೇ ಹಾರಾಟ • ಭಯದಿಂದ ತತ್ತರಿಸಿದ ಪ್ರಯಾಣಿಕರು

ಹುಬ್ಬಳ್ಳಿ ವಿಮಾನ ತುರ್ತು ಭೂ ಸ್ಪರ್ಶ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಹೈದರಾಬಾದ್‌ನಿಂದ ಹುಬ್ಬಳ್ಳಿಗೆ ಹೊರಟಿದ್ದ ಫ್ಲೈ–91 ವಿಮಾನ ಹವಾಮಾನ ವೈಪರೀತ್ಯದಿಂದ ಭಾನುವಾರ ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ತುರ್ತು ಭೂ ಸ್ಪರ್ಶ ಮಾಡಿದೆ.

ಮಧ್ಯಾಹ್ನ 3.30ಕ್ಕೆ ಹೈದರಾಬಾದ್‌ನಿಂದ ನಿರ್ಗಮಿಸಿದ್ದ ವಿಮಾನ ಸಂಜೆ 4.30ಕ್ಕೆ ಹುಬ್ಬಳ್ಳಿ ತಲುಪಬೇಕಾಗಿತ್ತು. ಸುಂಟರಗಾ-ಳಿಯಿಂದಾಗಿ ವಿಮಾನ ಇಳಿಯಲು ಆಗಲಿಲ್ಲ. ಪರಿಸ್ಥಿತಿ ಸುಧಾರಿಸುವ ನಿರೀಕ್ಷೆಯಲ್ಲಿ ಪೈಲಟ್, ವಿಮಾನವನ್ನು ಹುಬ್ಬಳ್ಳಿ ವಾಯುಪ್ರದೇಶದಲ್ಲೇ ಒಂದು ತಾಸು ಸುತ್ತಾಡಿದರು ಎಂದು ಮೂಲಗಳು ತಿಳಿಸಿವೆ.

ಹವಾಮಾನದಲ್ಲಿ ಸುಧಾರಣೆ ಕಾಣದ್ದರಿಂದ ಸುರಕ್ಷತಾ ಕ್ರಮವಾಗಿ ಬಳಿಕ ವಿಮಾನವನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಿರುಗಿಸಿದ್ದಾರೆ. ಈ ಅವಧಿಯಲ್ಲಿ ವಿಮಾನ ಮೂರು ತಾಸು ಮುಂಡಗೋಡು, ದಾವಣಗೆರೆ ಸುತ್ತಮುತ್ತ ಆಗಸದಲ್ಲಿಯೇ ಹಾರಾಟ ನಡೆಸಿದೆ. ಕೆಲ ಪ್ರಯಾಣಿಕರು ಭಯದಿಂದ ಕಣ್ಣೀರಿಟ್ಟು, ಪ್ರಾಣ ರಕ್ಷಣೆಗಾಗಿ ಪ್ರಾರ್ಥಿಸಿದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ವಿಮಾನ ದೇವನಹಳ್ಳಿಯ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಸಂಜೆ ಸುರಕ್ಷಿತವಾಗಿ ಇಳಿದಿದ್ದು, ಬಳಿಕ ಹವಾಮಾನ ಸುಧಾರಿಸಿದ ನಂತರ ರಾತ್ರಿ 11ಕ್ಕೆ ಹುಬ್ಬಳ್ಳಿಯತ್ತ ಮರುಪ್ರಯಾಣ ಆರಂಭಿಸಿತು. ವಿಮಾನದಲ್ಲಿ ಒಟ್ಟು 22 ಪ್ರಯಾಣಿಕರು ಇದ್ದರು ಎಂದು ಮೂಲಗಳು ತಿಳಿಸಿವೆ.

'ಎಲ್ಲ ಪ್ರಯಾಣಿಕರೂ ಸುರಕ್ಷಿತರಾಗಿದ್ದಾರೆ. ಯಾವುದೇ ಅಪಾಯ ಉಂಟಾಗಿಲ್ಲ' ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ವೇಳೆ ಹವಾಮಾನ ವೈಪರೀತ್ಯ ಪರಿಣಾಮ ಹುಬ್ಬಳ್ಳಿಯ ಸುತ್ತಮುತ್ತ ಹಾರಾಟ ನಡೆಸುತ್ತಿದ್ದ ಇತರ ವಿಮಾನಗಳ ಸಂಚಾರದಲ್ಲೂ ವ್ಯತ್ಯಯ ಉಂಟಾಗಿದೆ ಎಂದು ತಿಳಿದು ಬಂದಿದೆ.

'ಬೇಜವಾಬ್ದಾರಿ ವರ್ತನೆ'

ಹುಬ್ಬಳ್ಳಿ: 'ಪ್ರಯಾಣಿಕರ ಸುರಕ್ಷತೆ ಬಗ್ಗೆ ಫ್ಲೈ–91 ಸಂಸ್ಥೆಯ ವಿಮಾನ ಸಿಬ್ಬಂದಿ ನಿರ್ಲಕ್ಷ್ಯ ವಹಿಸಿದರು. ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ಕಂಪನಿಯ ಸಿಬ್ಬಂದಿ ಪ್ರಯಾಣಿಕರ ಸಂಬಂಧಿಗಳಿಗೆ ಮಾಹಿತಿ ನೀಡುವಲ್ಲೂ ಬೇಜವಾಬ್ದಾರಿ ಪ್ರದರ್ಶಿಸಿದರು' ಎಂದು ವಿಮಾನದಲ್ಲಿದ್ದ ಪ್ರಯಾಣಿಕರೊ-ಬ್ಬರ ಸಂಬಂಧಿ ಶ್ಲೋಕ್ ಅಳಗುಂಡಗಿ ಹೇಳಿದರು.

'ವಿಮಾನವನ್ನು ಬೆಂಗಳೂರಿನಲ್ಲಿ ಸುರಕ್ಷಿತವಾಗಿ ತುರ್ತು ಭೂ ಸ್ಪರ್ಶ ಮಾಡಿಸಿದರೂ, ಪ್ರಯಾಣಿಕರು ಅಲ್ಲಿಂದ ಹುಬ್ಬಳ್ಳಿಗೆ ಬರಲು ಪರ್ಯಾಯ ವ್ಯವಸ್ಥೆ ಮಾಡಲಿಲ್ಲ' ಎಂದು ಆರೋಪಿಸಿದರು.



ಎ.ಐ ಚಿತ್ರ

'ಹುಬ್ಬಳ್ಳಿ ಸಮೀಪ ವಿಮಾನ ಬಂದಾಗ ಹವಾಮಾನ ವೈಪರೀತ್ಯದಿಂದ ವಿಮಾನ ನಿಯಂತ್ರಣಾಧಿಕಾರಿ ಸೂಚನೆಯಂತೆ ಬೆಂಗಳೂರಿನಲ್ಲಿ ತುರ್ತು ಭೂ ಸ್ಪರ್ಶ ಮಾಡಲಾಯಿತು. ವಿಮಾನಯಾನದಲ್ಲಿ ಇದು ಸಾಮಾನ್ಯ. ಯಾವುದೇ ತಾಂತ್ರಿಕ ದೋಷಗಳು ಕಂಡು ಬಂದಿರಲಿಲ್ಲ' ಎಂದು ಫ್ಲೈ–91 ಸಂಸ್ಥೆಯ ಪ್ರತಿನಿಧಿಯೊಬ್ಬರು ತಿಳಿಸಿದರು.

ಹಿಂದಿಗೆ ಅಂಕ, ಗ್ರೇಡ್: ಇಂದು ನಿರ್ಧಾರ

ಒಂದನೇ ಪುಟದಿಂದ...

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ 2026ರ ಪರೀಕ್ಷೆಯಿಂದಲೇ ಅನ್ವಯವಾಗುವಂತೆ ಮೂರನೇ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು, ಗ್ರೇಡ್ ನಮೂದಿಸಲು ಶಾಲಾ ಶಿಕ್ಷಣ ಇಲಾಖೆ ನಿರ್ಧರಿಸಿತ್ತು. ಹಿಂದಿನ ವರ್ಷಗಳಂತೆ 100 ಅಂಕಗಳಿಗೆ ಪ್ರಶ್ನೆಪತ್ರಿಕೆ ಇದ್ದರೂ ಮೌಲ್ಯಮಾಪನದ ನಂತರ ಅಂಕಪಟ್ಟಿಯಲ್ಲಿ ಅಂಕಗಳನ್ನು ನಮೂದಿಸದೆ ಗ್ರೇಡ್ ಎ, ಬಿ, ಸಿ ಎಂದು ನಮೂದಿಸಲಾಗುತ್ತದೆ. ಇದುವರೆಗೂ ಮಕ್ಕಳು 625 ಅಂಕಗಳಿಗೆ ಪರೀಕ್ಷೆ ಬರೆಯುತ್ತಿದ್ದರು. ಈಗಲೂ ಅಷ್ಟೇ ಅಂಕಗಳಿಗೆ ಪರೀಕ್ಷೆ ಬರೆಯುತ್ತಾರೆ. ಆದರೆ, ತೃತೀಯ ಭಾಷೆ ಹೊರತುಪಡಿಸಿ ಉಳಿದ ವಿಷಯಗಳ ಗರಿಷ್ಠ 525 ಅಂಕಗಳನ್ನಷ್ಟೇ ಪರಿಗಣಿಸಿ, ಪ್ರತಿ ವಿದ್ಯಾರ್ಥಿಯ ಶೇಕಡವಾರು ಅಂಕಗಳನ್ನು ಲೆಕ್ಕ ಹಾಕಲಾಗುತ್ತದೆ ಎಂದು ಕರಡು ಅಧಿಸೂಚನೆಯಲ್ಲಿ ವಿವರಿಸಲಾಗಿತ್ತು.

ತೃತೀಯ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ರಾಜ್ಯ ಸರ್ಕಾರದ ನಿರ್ಧಾರ ಪ್ರಶ್ನಿಸಿ ಕೆಲವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. 2025ರ ಪರೀಕ್ಷೆ ವೇಳೆ ಜಾರಿಯಲ್ಲಿದ್ದ ನಿಯಮವನ್ನು ಅನುಸರಿಸಲು ಕೋರ್ಟ್ ಸೂಚಿಸಿದೆ. ಅಷ್ಟು ಹೊತ್ತಿಗೆ ಇಲಾಖೆಯು ಗ್ರೇಡ್ ನೀಡುವ ಕುರಿತು ಅಧಿಸೂಚನೆ ಹೊರಡಿಸಿದೆ.

2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾರ್ಚ್ 18 ಏ.1ರವರೆಗೆ ನಡೆದಿತ್ತು. ಏ.24ರಂದು ಫಲಿತಾಂಶ ಪ್ರಕಟಿಸುವುದಾಗಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಘೋಷಿಸಿತ್ತು.

ಜೆಇಇ ಫಲಿತಾಂಶ: ಬೆಂಗಳೂರಿನ ವಿಷ್ಣು ಸಾಯಿ ತೇಜ ಮತ್ತೆ ಮೊದಲಿಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಂಟಿ ಪ್ರವೇಶ ಪರೀಕ್ಷೆ (ಜೆಇಇ ಮೇನ್–2) ಫಲಿತಾಂಶದಲ್ಲೂ ಬೆಂಗಳೂರಿನ ನಾರಾಯಣ ಕೋ–ಕಾವೇರಿ ಭವನ ವಿದ್ಯಾರ್ಥಿ ಎ.ವಿಷ್ಣು ಸಾಯಿ ತೇಜ ಅವರು ರಾಜ್ಯಕ್ಕೆ ಮೊದಲಿಗರಾಗಿ ಹೊರಹೊಮ್ಮಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಸೋಮವಾರ ಫಲಿತಾಂಶ ಪ್ರಕಟಿಸಿದೆ. ಜೆಇಇ ಮೇನ್–1ರಲ್ಲಿ ರಾಜ್ಯದಲ್ಲಿ ಮೊದಲ ಸ್ಥಾನ ಪಡೆದಿದ್ದ ವಿಷ್ಣು ಸಾಯಿ ತೇಜ ಅವರೇ ಎರಡನೆಯದರಲ್ಲೂ ಸಾಧನೆ ಮುಂದುವರಿಸಿದ್ದಾರೆ. ಫಲಿತಾಂಶವನ್ನು ವೃದ್ಧಿಸಿಕೊಳ್ಳಲು ಪರೀಕ್ಷೆ ಬರೆದಿದ್ದ ಅವರು ಹಿಂದಿನ ಫಲಿತಾಂಶದಂತೆಯೇ ಮತ್ತೆ 99.99 ಪರ್ಸೆಂಟೈಲ್ ಗಳಿಸಿದ್ದಾರೆ. ಮೊದಲು ಅಖಿಲ ಭಾರತ ಮಟ್ಟದಲ್ಲಿ 14ನೇ ರ‍್ಯಾಂಕ್ ಗಳಿಸಿದ್ದ ಅವರು 28ನೇ ಸ್ಥಾನ ಪಡೆದಿದ್ದಾರೆ. ದೇಶದ ಪ್ರಮುಖ ಐಐಟಿಗಳಲ್ಲಿ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಕೋರ್ಸ್‌ಗೆ ಪ್ರವೇಶ ಪಡೆಯುವ ಗುರಿ ಹೊಂದಿದ್ದಾರೆ.



ವಿಷ್ಣು ಸಾಯಿ ತೇಜ

ವಿಷ್ಣು ಅವರ ತಂದೆ ರವಿಕುಮಾರ್ ಶೆಟ್ಟಿ ಬೆಂಗಳೂರಿನ ವಿಸ್ಟಿಯಾನ್ ಸಂಸ್ಥೆಯಲ್ಲಿ ಗ್ಲೋಬಲ್ ಎಂಜಿನಿಯರಿಂಗ್ ಲೀಡರ್ ಆಗಿದ್ದು, ತಾಯಿ ಪಲ್ಲವಿ ಎಂಬಿಎ ಪದವೀಧರೆ.

ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. ಏಪ್ರಿಲ್ 2ರಿಂದ 8ರವರೆಗೆ ದೇಶದ 319 ನಗರಗಳಲ್ಲಿ 584 ಕೇಂದ್ರಗಳಲ್ಲಿ ಹಾಗೂ ವಿದೇಶದ 15 ನಗರಗಳಲ್ಲಿ ಪರೀಕ್ಷೆ ನಡೆದಿದ್ದವು. ಸುಮಾರು 11 ಲಕ್ಷ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, 10,34,330 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ದೇಶದ ವಿವಿಧ ರಾಜ್ಯಗಳ 26 ವಿದ್ಯಾರ್ಥಿಗಳು 100 ಪರ್ಸೆಂಟೈಲ್ ಪಡೆದಿದ್ದಾರೆ. ಕರ್ನಾಟಕ ಯಾವ ವಿದ್ಯಾರ್ಥಿಗಳೂ 100 ಪರ್ಸೆಂಟೈಲ್ ಪಡೆಯಲು ಸಾಧ್ಯವಾಗಿಲ್ಲ.

‘ಚಲನಶೀಲತೆಗಾಗಿ ವೈಚಾರಿಕ ಶಿಕ್ಷಣ’

ಸಿ.ಎಂ ಸಿದ್ದರಾಮಯ್ಯ ಅಭಿಮತ • ಸಿದ್ಧರಾಮ ಶರಣ ಬೆಲ್ದಾಳರಿಗೆ ‘ಬಸವ ರಾಷ್ಟ್ರೀಯ ಪುರಸ್ಕಾರ’ ಪ್ರದಾನ

ಪ್ರಜಾವಾಣಿ ವಾರ್ತೆ

ಮೈಸೂರು: ‘ಬಸವಾದಿ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತೇವೆಂದು ಎಲ್ಲರೂ ಶಪಥ ಮಾಡಬೇಕು. ಜಾತಿ ವ್ಯವಸ್ಥೆಯಿಂದ ಜಡ್ಡುಗಟ್ಟಿರುವ ಸಮಾಜದಲ್ಲಿ ಚಲನಶೀಲತೆ ತರಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ಪಡೆಯಲೇಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಪ್ರತಿಪಾದಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾಡಳಿತ, ಬಸವ ಬಳಗಗಳ ಒಕ್ಕೂಟವು ಇಲ್ಲಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ, ಬೀದರ್‌ನ ಕೌಠಾ(ಬಿ) ಬಸವ ಯೋಗಾಶ್ರಮದ ಸಿದ್ಧರಾಮ ಶರಣ ಬೆಲ್ದಾಳ ಅವರಿಗೆ ‘ಬಸವ ರಾಷ್ಟ್ರೀಯ ಪುರಸ್ಕಾರ’ ಪ್ರದಾನ ಮಾಡಿ ಅವರು ಮಾತನಾಡಿದರು.

‘ಶರಣರ ಕನಸಿನ ಸಮಾಜವನ್ನು ಸಾಕಾರಗೊಳಿಸಲು ಸರ್ಕಾರ ಬದ್ಧವಾಗಿದೆ. ಗ್ಯಾರಂಟಿ ಯೋಜನೆಗಳೂ ಬಸವ ತತ್ವದಂತೆ ಎಲ್ಲರನ್ನೂ ಒಳಗೊಂಡಿವೆ’ ಎಂದು ಹೇಳಿದರು.

‘ವೈಚಾರಿಕ ಶಿಕ್ಷಣ ಎಲ್ಲರಿಗೂ ಸಿಗದಿರುವುದರಿಂದಲೇ ವ್ಯವಸ್ಥೆ ಜೊತೆಗೆ ರಾಜಿ ಆಗುವ ಪರಿಸ್ಥಿತಿ ನಿರ್ಮಾಣ ಆಗಿದೆ. ಪಟ್ಟಭದ್ರ ಮನುವಾದಿಗಳು ಮೂಢನಂಬಿಕೆಗಳನ್ನು ಬಿತ್ತಿ, ಜಾತಿ ವ್ಯವಸ್ಥೆ ಗಟ್ಟಿಗೊಳಿಸುತ್ತಿರುತ್ತಾರೆ. ಅಸಮಾನತೆಯ ಸಮಾಜದಲ್ಲಿ ಇನ್ನೂ ಎಷ್ಟು ದಿನ ಇರಬೇಕು? ನಾವು ಏಕೆ ಅನಕ್ಷರಸ್ಥರು, ಬಡವರು, ಸೂರಿಲ್ಲದವರು ಎಂದು ಎಲ್ಲರೂ ಕಾರಣ ತಿಳಿಯಬೇಕು. ಬಸವಣ್ಣ, ಬುದ್ಧ, ಗಾಂಧೀಜಿ, ಅಂಬೇಡ್ಕರ್ ಅವರ ಹೋರಾಟಗಳನ್ನು ನೆನೆಯಬೇಕು’ ಎಂದು ಹೇಳಿದರು.

‘ಸಾಮಾಜಿಕ ಮತ್ತು ಆರ್ಥಿಕ ತಳಹದಿಯ ಮೇಲೆ ರಾಜಕೀಯ ಸ್ವಾತಂತ್ರ್ಯ ನಿಂತಿದೆ. ಸರ್ವರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ಬರದಿದ್ದರೆ ಪಟ್ಟಭದ್ರ ಹಿತಾಸಕ್ತಿಗಳು ವಿಜೃಂಭಿಸುತ್ತಾರೆ. ಹೀಗಾಗಿ, ಅವರ ವರ್ಣಾಶ್ರಮ ಹಾಗೂ ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿ’ ಎಂದು ಸಲಹೆ ಮಾಡಿದರು.

ಜನರ ಭಾಷೆಯಾದ ಕನ್ನಡವನ್ನು ದೈವ ಭಾಷೆಯಾಗಿಸಿದ ನಾಯಕ ಬಸವಣ್ಣ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ದೇಶದ ಧ್ರುವತಾರೆಗಳು
ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಯುವಕರು ಕೋಮುವಾದಕ್ಕೆ ಬಲಿಯಾಗದೇ ಬಸವ ತತ್ವಗಳನ್ನು ಅನುಸರಿಸಬೇಕು. ಜಾಗೃತಿ ಮೂಡಿಸಲು ಇಲಾಖೆಯು ಪ್ರತಿ ಜಿಲ್ಲೆಯಲ್ಲಿ ಬಸವ ಜಯಂತಿ ಆಚರಿಸುತ್ತಿದೆ
ಶಿವರಾಜ್ ಎಸ್. ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಸಚಿವ

ಧರ್ಮ, ಜಾತಿ, ಭಾಷೆಯ ಹೆಸರಿನಲ್ಲಿ ವೈಮನಸ್ಯ ಮೂಡುತ್ತಿದೆ. ಭಾರತ ಒಂದಾಗಬೇಕೆಂದರೆ ಮನುಷ್ಯರು ಒಂದಾಗಬೇಕು. ಅದಿಲ್ಲದಿದ್ದರೆ ‘ಹಿಂದೂ ಒಂದು’ ಎಂಬ ಮಾತುಗಳೆಲ್ಲ ಕಪಟವಷ್ಟೇ
ಸಿದ್ಧರಾಮ ಶರಣ ಬೆಲ್ದಾಳ, ‘ಬಸವ ರಾಷ್ಟ್ರೀಯ ಪ್ರಶಸ್ತಿ’ ಪುರಸ್ಕೃತರು



ಮೈಸೂರಿನಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಸಿದ್ಧರಾಮ ಶರಣ ಬೆಲ್ದಾಳ ಅವರಿಗೆ ‘ಬಸವ ರಾಷ್ಟ್ರೀಯ ಪುರಸ್ಕಾರ’ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಿವರಾಜ ಎಸ್‌.ತಂಗಡಗಿ, ಡಾ.ಎಚ್‌.ಸಿ.ಮಹದೇವಪ್ಪ, ಪುಷ್ಪಾ ಅಮರನಾಥ್, ಸಿ.ಎನ್‌. ಮಂಜೇಗೌಡ, ತನ್ವೀರ್ ಸೇಠ್, ಕೆ.ಶಿವಕುಮಾರ್, ಜೆ.ಮಂಜುನಾಥ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘ಗ್ಯಾರಂಟಿಗಳು ಬಸವಣ್ಣನವರ ಕನಸಿನ ಕೂಸುಗಳು’

ಪ್ರಶಸ್ತಿ ಪುರಸ್ಕೃತ ಸಿದ್ಧರಾಮ ಶರಣ ಬೆಲ್ದಾಳ ಅವರು, ‘ಸಾಂಸ್ಕೃತಿಕ ನಾಯಕ ಘೋಷಣೆ, ಕಚೇರಿಗಳಲ್ಲಿ ಭಾವಚಿತ್ರ ಅನಾವರಣ, ಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣ ಸೇರಿ ರಾಜ್ಯ ಸರ್ಕಾರದಿಂದ ಬಸವ ಪರ ಕಾರ್ಯಗಳು ನಡೆಯುತ್ತಿವೆ’ ಎಂದು ಶ್ಲಾಘಿಸಿದರು.

‘ಗ್ಯಾರಂಟಿ ಯೋಜನೆಗಳು ಬಸವಣ್ಣನ ಕನಸಿನ ಕೂಸುಗಳೇ ಆಗಿವೆ. ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಶರಣರೇ ಕುಲಜರು ಎಂದು ಬಸವಣ್ಣ ಹೇಳಿದಂತೆ, ಸರ್ಕಾರ ಹಿಂದೂ–ಮುಸ್ಲಿಂ, ದಲಿತ–ಸವರ್ಣೀಯ, ಹೆಣ್ಣು–ಗಂಡು ಎಂಬ ಭೇದವಿಲ್ಲದ ಸಾಮಾಜಿಕ ನ್ಯಾಯವನ್ನು ಗ್ಯಾರಂಟಿ ಯೋಜನೆಗಳ ಮೂಲಕ ಕೊಟ್ಟಿದೆ’ ಎಂದರು.

‘ತಾಳೆಗರಿಗಳಲ್ಲಿರುವ ಶರಣರ ಸಾವಿರಾರು ವಚನಗಳು, ಸ್ವರವಚನಗಳ ಸಂಗ್ರಹಗಳು ಸರ್ಕಾರದ ಸೊತ್ತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಬೇಕು’ ಎಂದು ಕೋರಿದರು.

‘ಎದೆಗಾರಿಕೆ ಬೇಕು’

‘ಜಾತೀಯತೆ, ಮತೀಯತೆ ಕಿತ್ತೊಗೆದು ಸಮಸಮಾಜ ನಿರ್ಮಿಸಬೇಕು. ಬಸವನ ಅನುಯಾಯಿ ಎಂದು ಹೇಳಿಕೊಳ್ಳಲು ಎದೆಗಾರಿಕೆ ಬೇಕು. ಅದನ್ನು ಸಿದ್ದರಾಮಯ್ಯ, ಮಹದೇವಪ್ಪ ಯಾವಾಗಲೂ ಹೇಳಿಕೊಳ್ಳುತ್ತಾರೆ’ ಎಂದು ಸಿದ್ಧರಾಮ ಶರಣ ಬೆಲ್ದಾಳ ಹೇಳಿದರು.

ಸಂಸತ್ ಆವರಣದಲ್ಲಿ ಬಸವ ಜಯಂತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜಗಜ್ಯೋತಿ ಬಸವಣ್ಣ ಅವರ ಸಂದೇಶಗಳು ಇಂದಿಗೂ ಎಂದಿಗೂ ಎಂದೆಂದಿಗೂ ಪ್ರೇರಣದಾಯಕ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಬಸವ ಜಯಂತಿ ಪ್ರಯುಕ್ತ ಸಂಸತ್ ಭವನದ ಆವರಣದಲ್ಲಿರುವ ಪ್ರೇರಣಾ ಸ್ಥಳದಲ್ಲಿ ಜಗಜ್ಯೋತಿ ಬಸವೇಶ್ವರರಿಗೆ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಅವರು ಪುಷ್ಪನಮನ ಅರ್ಪಿಸಿ ಮಾತನಾಡಿದರು.

‘12ನೇ ಶತಮಾನದಲ್ಲಿ ಪ್ರಜಾಪ್ರಭುತ್ವ ಹಾಗೂ ಜನರ ಆಡಳಿತದ ಬಗ್ಗೆ ಬಸವಣ್ಣನವರು ಆಲೋಚನೆ ಮಾಡಿದರು. ಆ ಸಂದರ್ಭದಲ್ಲಿಯೇ ಪುರುಷ, ಸ್ತ್ರೀ ಎಂಬ ಭೇದವಿಲ್ಲದೆ ಎಲ್ಲರಿಗೂ ಸಮಾನ ಸ್ಥಾನಮಾನಗಳನ್ನು ದೊರಕಿಸಿಕೊಡಲು ಶ್ರಮಿಸಿದರು. ಅವರ ಸಂದೇಶಗಳು ಮತ್ತು ಆದರ್ಶಗಳು ನಮಗೆ ದೊಡ್ಡ ಆಸ್ತಿಯಾಗಿವೆ’ ಎಂದು ರಿಜಿಜು ಹೇಳಿದರು.

ಜನರನ್ನು ಸಶಕ್ತಗೊಳಿಸುವ ಬಸವಣ್ಣ ಅವರ ಅಚಲ ಯತ್ನ ಮತ್ತು ಅವರ ಸಮ ಸಮಾಜದ ಪರಿಕಲ್ಪನೆಯು ನಮ್ಮನ್ನು ಸದಾ ಪ್ರೇರೇಪಿಸುತ್ತದೆ
ನರೇಂದ್ರ ಮೋದಿ, ಪ್ರಧಾನಿ

ಜಾತಿ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದು, ಅಂಧ ಶ್ರದ್ಧೆಗಳನ್ನು ವಿರೋಧಿಸಿ, ವೈಚಾರಿಕತೆಯ ತಳಹದಿಯ ಮೇಲೆ ಮನುಕುಲಕ್ಕೆ ಕಾಯಕದ ಮಹತ್ವವನ್ನು ಬೋಧಿಸಿದವರು ಬಸವಣ್ಣ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ವಿ.ಸೋಮಣ್ಣ ಮಾತನಾಡಿ, ‘12ನೇ ಶತಮಾನದಲ್ಲಿಯೇ ಅನುಭವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಬೀಜಾಂಕುರ ಹಾಕಿದ್ದ ಬಸವಣ್ಣನವರು, ಸಾಮರಸ್ಯವನ್ನು ಒತ್ತಿ ಹೇಳಿದ್ದರು’ ಎಂದರು.



ಜಗಜ್ಯೋತಿ ಬಸವೇಶ್ವರರಿಗೆ ಎಚ್‌.ಡಿ.ಕುಮಾರಸ್ವಾಮಿ ಪುಷ್ಪನಮನ ಸಲ್ಲಿಸಿದರು. ಸಚಿವರಾದ ಕಿರಣ್ ರಿಜಿಜು, ವಿ.ಸೋಮಣ್ಣ ಹಾಜರಿದ್ದರು



ಬಸವ ಜಯಂತಿ ಆಚರಣೆಯಲ್ಲಿ ತಾಲ್ಲೂಕು ಆಡಳಿತ ನಿರ್ಲಕ್ಷ್ಯ ತಾಳಿದೆ ಎಂದು ಆರೋಪಿಸಿ ಮದ್ದೂರು ತಾಲ್ಲೂಕು ಕಚೇರಿ ಬಳಿ ವೀರಶೈವ ಲಿಂಗಾಯತ ಮುಖಂಡರು ಸೋಮವಾರ ಬಸವಣ್ಣನ ಫೋಟೊ ಇರಿಸಿ ಪ್ರತಿಭಟಿಸಿದರು

‘ಬಸವ ಜಯಂತಿ ಆಚರಣೆಯಲ್ಲಿ ನಿರ್ಲಕ್ಷ್ಯ’

ಬೇಲೂರು, ಮದ್ದೂರಿನಲ್ಲಿ ಅಧಿಕಾರಿಗಳ ವರ್ತನೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ ಜಿಲ್ಲೆ): ತಾಲ್ಲೂಕು ಕಚೇರಿಯಲ್ಲಿ ಸೋಮವಾರ ಬಸವ ಜಯಂತಿ ಕಾರ್ಯಕ್ರಮ ಏರ್ಪಡಿಸುವಲ್ಲಿ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ದೂರಿ ವೀರಶೈವ ಮುಖಂಡರು ಹೊರ ನಡೆದರು.

ಬೆರಳೆಣಿಕೆಯಷ್ಟು ಅಧಿಕಾರಿಗಳು ಹಾಜರಿದ್ದು, ಕಾರ್ಯಕ್ರಮ ಮುಂದುವರಿಸಲು ಮುಖಂಡರು ಒಪ್ಪಲಿಲ್ಲ. ‘ಅಂಬೇಡ್ಕರ್ ಜಯಂತಿಯಲ್ಲೂ ನಿರ್ಲಕ್ಷ್ಯ ವಹಿಸಲಾಗಿತ್ತು’ ಎಂದು ಮುಖಂಡರು ಸ್ಮರಿಸಿದರು.

ವೀರಶೈವ ಸಮಾಜದ ತಾಲ್ಲೂಕು ಘಟಕದ ಅಧ್ಯಕ್ಷ ಅಡುಗೂರು ಬಸವರಾಜ್ ಹಾಗೂ ರಾಜ್ಯ ಯುವ ಘಟಕದ ಕಾರ್ಯದರ್ಶಿ ವಿಕ್ರಂ ಕೌರಿ ಮಾತನಾಡಿ, ‘ಪ್ರತಿ ವರ್ಷವೂ ಇದೇ ರೀತಿ ನಿರ್ಲಕ್ಷ್ಯ ಮಾಡಲಾಗುತ್ತಿದೆ. ಇದು ಸರ್ಕಾರಿ ಕಾರ್ಯಕ್ರಮವೇ ಅಥವಾ ಕೆಲವರ ಪ್ರತಿಷ್ಠೆಯ ಪ್ರದರ್ಶನವೇ’ ಎಂದು ಪ್ರಶ್ನಿಸಿದರು. ‘ಅಂಬೇಡ್ಕರ್ ಜಯಂತಿಯಲ್ಲೂ ನಿರ್ಲಕ್ಷ್ಯ ತೋರಲಾಗಿದೆ. ಚೆಂಡು ಹೂವು, ಪ್ಲಾಸ್ಟಿಕ್ ಹೂವು ಹಾಕಿ ಕಾರ್ಯಕ್ರಮ ಮುಗಿಸಿದ್ದಾರೆ. ಇದು ಗೌರವವೇ’ ಎಂದು ಮುಖಂಡರು ಪ್ರಶ್ನಿಸಿದರು.

ಕೊನೆಗೆ ಮುಖಂಡರು, ಸಭಿಕರು ಸಭೆಯಿಂದ ಹೊರನಡೆದರು. ಹೊಳೆನರಸೀಪುರ ತಾಲ್ಲೂಕು ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲೂ ಕಂದಾಯ ಇಲಾಖೆಯ ಸಿಬ್ಬಂದಿ ಬಿಟ್ಟರೆ ಬಹುತೇಕ ಅಧಿಕಾರಿಗಳು ಗೈರಾಗಿದ್ದರು.

ಜಯಂತಿ ಆಯೋಜನೆಯಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ವಿಪಕ್ಷದ ಶಾಸಕ ಎನ್ನುವ ಕಾರಣಕ್ಕೆ ಮಲತಾಯಿ ಧೋರಣೆ ತೋರಲಾಗುತ್ತಿದೆಯೇ?
ಎಚ್‌.ಕೆ.ಸುರೇಶ್, ಶಾಸಕ, ಬೇಲೂರು

ಕಾಟಾಚಾರದ ಆಚರಣೆ: ಆಕ್ರೋಶ

ಮದ್ದೂರು (ಮಂಡ್ಯ ಜಿಲ್ಲೆ): ‘ಬಸವೇಶ್ವರ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುವಲ್ಲಿ ತಾಲ್ಲೂಕು ಆಡಳಿತ ನಿರ್ಲಕ್ಷ್ಯ ತೋರಿದೆ’ ಎಂದು ತಾಲ್ಲೂಕು ವೀರಶೈವ ಲಿಂಗಾಯತ ಸಮುದಾಯದ ಮುಖಂಡರು ತಾಲ್ಲೂಕು ಕಚೇರಿ ಬಳಿ ಪ್ರತಿಭಟಿಸಿದರು.

ಪ್ರತಿಭಟನೆ ವೇಳೆ ಸೋಮವಾರ ಕಚೇರಿ ಮುಂಭಾಗದಲ್ಲೇ ಬಸವಣ್ಣ ಅವರ ಭಾವಚಿತ್ರವಿಟ್ಟು ಪೂಜೆ ಸಲ್ಲಿಸಿದರು.

ವೀರಶೈವ ಲಿಂಗಾಯತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಜಿ. ಗೌರಿಶಂಕರ್, ‘ಕಾಟಾಚಾರಕ್ಕೆ ನಾಲ್ಕು ಗೋಡೆಗಳ ಮಧ್ಯೆ ಭಾವಚಿತ್ರ ಇರಿಸಿ ಆಚರಿಸಲಾಗಿದೆ’ ಎಂದರು.

ತಹಶೀಲ್ದಾರ್ ಪರಶುರಾಮ ಸತ್ತಿಗೇರಿ, ‘ಮುಂದಿನ ವರ್ಷ ಅರ್ಥಪೂರ್ಣ ಮತ್ತು ಅದ್ದೂರಿಯಾಗಿ ಆಚರಿಸಲಾಗುವುದು’ ಎಂದು ಭರವಸೆ ನೀಡಿದರು.

‘ಈ ತಿಂಗಳಲ್ಲೇ ಇನ್ನೊಂದು ದಿನ ಅದ್ದೂರಿಯಾಗಿ ಮಾಡಬೇಕು’ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ‘ಸಭೆ ನಡೆಸಿ ತೀರ್ಮಾನಿಸಲಾಗುವುದು’ ಎಂದು ತಹಶೀಲ್ದಾರ್ ತಿಳಿಸಿದರು.

ತಮಿಳುನಾಡು ಚುನಾವಣೆ: ಕೇಂದ್ರದ ವಿರುದ್ಧ ಒಗ್ಗಟ್ಟಿನ ಹೋರಾಟ – ಡಿ.ಕೆ.ಶಿವಕುಮಾರ್

ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡಿಎಂಕೆ ನೇತೃತ್ವದ ಮೈತ್ರಿಕೂಟವು ತನ್ನ ಪ್ರಣಾಳಿಕೆಯಲ್ಲಿ ತಮಿಳುನಾಡಿನ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ₹2 ಸಾವಿರ ನಗದು ನೀಡುವ ಭರವಸೆ ನೀಡಿದೆ’ ಎಂದು ಕರ್ನಾಟಕದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಥಳೀ ವಿಧಾನಸಭಾ ಕ್ಷೇತ್ರದ ಕೆಲಮಂಗಲಂನಲ್ಲಿ ಸೋಮವಾರ ನಡೆದ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

‘ಪ್ರಧಾನಿ ನರೇಂದ್ರ ಮೋದಿ ಅವರಿಂದಾಗಿ ಅಡುಗೆ ಅನಿಲ ಹೋಗಿ ಸೌದೆ ಒಲೆ ವಾಪಸ್ ಬಂದಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಹಾಗಾಗಿ, ಅಗತ್ಯ ವಸ್ತುಗಳ ಖರೀದಿಗೆ ಪ್ರತಿ ಕುಟುಂಬಕ್ಕೆ ₹8 ಸಾವಿರ ನೀಡುವ ಭರವಸೆ ಕೊಟ್ಟಿದ್ದೇವೆ’ ಎಂದರು.

‘ದಕ್ಷಿಣ ಭಾರತದ ಸ್ವಾಭಿಮಾನ ಉಳಿಸಲು ಎಲ್ಲ ರಾಜ್ಯಗಳೂ ಒಟ್ಟಾಗಿ ಕೇಂದ್ರದ ವಿರುದ್ಧ ಹೋರಾಟ ಮಾಡುತ್ತಿದ್ದೇವೆ. ಕರ್ನಾಟಕ ಮತ್ತು ತಮಿಳುನಾಡು ಮಧ್ಯೆ ಒಂದು ಗೋಡೆಯಷ್ಟು ಅಂತರವಿದೆ. ಬಿಜೆಪಿ ಸಮಾಜವನ್ನೇ ಒಡೆಯುತ್ತಿದೆ. ಕಾಂಗ್ರೆಸ್–ಡಿಎಂಕೆ ಸೂಜಿಯಂತೆ ಎಲ್ಲರನ್ನೂ ಮತ್ತೆ ಸೇರಿಸುತ್ತಿವೆ. ಕೇಂದ್ರದ ವಂಚನೆ ವಿರುದ್ಧ ಹೋರಾಟ ನಡೆಸುತ್ತಿವೆ’ ಎಂದರು.

‘ಅಧಿಕಾರಕ್ಕೆ ಬಂದರೆ ವಿದೇಶದಲ್ಲಿನ ಕಪ್ಪುಹಣ ದೇಶಕ್ಕೆ ತಂದು ₹15 ಲಕ್ಷ ಹಾಕುವ ಭರವಸೆ ನೀಡಿದ್ದರು. ಆದರೆ, ನುಡಿದಂತೆ ನಡೆಯಲಿಲ್ಲ. ಕರ್ನಾಟಕದಲ್ಲಿ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಭರವಸೆ ನೀಡಿತ್ತು. ಕೊಟ್ಟ ಮಾತು ಉಳಿಸಿಕೊಂಡಿತು’ ಎಂದು ಹೇಳಿದರು.

‘ಕರ್ನಾಟಕದ ಗ್ಯಾರಂಟಿ ಯೋಜನೆಗಳ ಮೂಲ ಥಳೀ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ರಾಮಚಂದ್ರನ್. ಅವರ ಜನಪ್ರಿಯತೆ ಕುರಿತು ಮಾಹಿತಿ ತಿಳಿದುಕೊಳ್ಳಲು ಹೋದಾಗ ಈ ಮಾಹಿತಿ ಸಿಕ್ಕಿತ್ತು. ಸಿದ್ದರಾಮಯ್ಯ ಸೇರಿದಂತೆ ಎಲ್ಲರೂ ಚರ್ಚೆ ಮಾಡಿ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದೆವು’ ಎಂದು ಮಾಹಿತಿ ನೀಡಿದರು.

‘ಕಾಂಗ್ರೆಸ್, ಡಿಎಂಕೆ, ಕಮ್ಯುನಿಸ್ಟ್ ಸೇರಿದಂತೆ ಇಂಡಿಯಾ ಮೈತ್ರಿಕೂಟದ 20 ಪಕ್ಷಗಳ ಶಕ್ತಿ ರಾಮಚಂದ್ರನ್ ಪರವಾಗಿದೆ. ಪೆರಿಯಾರ್ ಅವರ ಮಾರ್ಗದರ್ಶನದಲ್ಲಿ ಡಿಎಂಕೆ ನೇತೃತ್ವದ ಸರ್ಕಾರ ಆಡಳಿತ ನಡೆಸುತ್ತಿದೆ. ಪೆರಿಯಾರ್ ಅವರ ಮಾತೃಭಾಷೆ ಕನ್ನಡವಾಗಿದ್ದರೂ ತಮಿಳು ಭಾಷೆಗಾಗಿ ಹೋರಾಟ ಮಾಡಿದ್ದರು. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಮಾತೃಭಾಷೆ ತಮಿಳು. ಕನ್ನಡ–ತಮಿಳು ಸಾವಿರಾರು ವರ್ಷಗಳಿಂದಲೂ ಸಹೋದರ ಭಾಷೆಗಳು’ ಎಂದರು.



ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯ ಥಳೀ ವಿಧಾನಸಭಾ ಕ್ಷೇತ್ರದ ಕೆಲಮಂಗಲಂನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಡಿಎಂಕೆ ಅಭ್ಯರ್ಥಿ ರಾಮಚಂದ್ರನ್ ಪರ ರಾಮಲಿಂಗಾರೆಡ್ಡಿ, ಡಿ.ಕೆ.ಶಿವಕುಮಾರ್, ಕೆ.ವೈ.ನಂಜೇಗೌಡ, ಆನೇಕಲ್ ಶಿವಣ್ಣ ಪ್ರಚಾರ ನಡೆಸಿದರು

ಅಣ್ಣಾಮಲೈ ಅವರನ್ನು ಬಿಜೆಪಿ ಕಿತ್ತೊಗೆಯಿತು. ಆತನನ್ನು ಇಟ್ಟುಕೊಂಡರೆ ಹತ್ತಿರಕ್ಕೂ ಬರುವುದಿಲ್ಲ ಎಂದು ಎಐಡಿಎಂಕೆ ಷರತ್ತು ಹಾಕಿದೆ. ಬಿಜೆಪಿ ನಂಬಿಕೊಂಡವರಿಗೆ ಇದೇ ಗತಿ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ತಪ್ಪು ತಿದ್ದಿಕೊಳ್ಳಿ: ಮುಸ್ಲಿಂ ಸಂಘಟನೆಗಳ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಸ್ಲಿಂ ಸಮುದಾಯವನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ಖಂಡಿಸಿ ರಾಜ್ಯದ ವಿವಿಧ ಪ್ರದೇಶಗಳ ಪ್ರಮುಖ ಮುಸ್ಲಿಂ ಸಂಘಟನೆಗಳು, ಸಂಘ ಸಂಸ್ಥೆಗಳು ಹಾಗೂ ಒಕ್ಕೂಟದ ಪ್ರತಿನಿಧಿಗಳು ಕಾಂಗ್ರೆಸ್‌ನ ಹಿರಿಯ ನಾಯಕರಿಗೆ ಪತ್ರ ಬರೆದಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅವರಿಗೆ ಈ ಪತ್ರ ಬರೆಯಲಾಗಿದೆ.

ಪತ್ರಕ್ಕೆ ವಿಜಯಪುರದ ಮೌಲಾನಾ ಸೈಯದ್ ತನ್ವೀರ್ ಹಾಶ್ಮಿ, ಬೀದರ್‌ನ ಅಬ್ದುಲ್ ಖದೀರ್ ಸಾಹೇಬ್, ಬೆಂಗಳೂರಿನ ಮೌಲಾನಾ ಶಬ್ಬೀರ್ ಅಹ್ಮದ್ ನದ್ವಿ, ಉಡುಪಿಯ ಕೆ.ಎಸ್. ಮೊಹಮ್ಮದ್ ಮಸೂದ್, ಮೊಹಮ್ಮದ್ ಹನೀಫ್, ಮೊಹಮ್ಮದ್ ಮೌಲಾ, ಯಾಸೀನ್ ಮಲ್ಪೆ, ಭಟ್ಕಳದ ಮೌಲಾನಾ ಅಬ್ದುರ‍್ರಕೀಬ್ ನದ್ವಿ, ಹುಬ್ಬಳ್ಳಿಯ ಅಶ್ರಫ್ ಅಲಿ ಬಶೀರ್, ಅಬ್ದುಲ್ ಕರೀಂ ಹುಬ್ಬಳ್ಳಿ, ಕೆ. ಅಶ್ರಫ್ ದಕ್ಷಿಣ ಕನ್ನಡ, ಅಬೂಬಕರ್ ನೇಜಾರು ಸೇರಿದಂತೆ ವಿವಿಧ ಜಿಲ್ಲೆಗಳ ಅನೇಕರು ಸಹಿ ಹಾಕಿದ್ದಾರೆ.

‘2023ರ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದವರು ಕಾಂಗ್ರೆಸ್ ಅನ್ನು ಬೆಂಬಲಿಸಿದ್ದರಿಂದಾಗಿ, ಆ ಪಕ್ಷ ಅಧಿಕಾರಕ್ಕೆ ಬರಲು ಕಾರಣವಾಯಿತು. ಆದರೆ, ಅಧಿಕಾರಕ್ಕೆ ಬಂದ ಬಳಿಕ ಪ್ರಮುಖ ನೇಮಕಾತಿಗಳಲ್ಲಿ ಮುಸ್ಲಿಮರಿಗೆ ಸರಿಯಾದ ಪ್ರಾತಿನಿಧ್ಯ ನೀಡಲಿಲ್ಲ. ತಾರತಮ್ಯ ನೀತಿ, ನ್ಯಾಯಯುತವಾಗಿ ನಡೆದುಕೊಳ್ಳದೆ ಇರುವುದು ಮುಂದುವರಿದಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯ ಟಿಕೆಟ್ ಹಂಚಿಕೆ ಹಾಗೂ ಮತದಾನದ ಬಳಿಕ ಕಾಂಗ್ರೆಸ್ ನಡೆದುಕೊಂಡಿರುವ ರೀತಿಯಿಂದ ಮುಸ್ಲಿಂ ಸಮುದಾಯಕ್ಕೆ ತೀವ್ರ ಆಘಾತವಾಗಿದೆ’ ಎಂದು ತಿಳಿಸಲಾಗಿದೆ.

‘ನ್ಯಾಯವಾಗಿ ನೀಡಲೇಬೇಕಾಗಿದ್ದ ಟಿಕೆಟ್ ನಿರಾಕರಿಸಲಾಯಿತು. ಟಿಕೆಟ್ ಕೇಳಿದ್ದೇ ಅಪರಾಧ ಎಂಬಂತೆ ವರಿಷ್ಠರು ನಡೆದುಕೊಂಡರು. ವಿವರಣೆಗೆ ಅವಕಾಶವನ್ನೂ ನೀಡದೆ ನಾಯಕರನ್ನು ಪಕ್ಷದಿಂದ ವಜಾ ಮಾಡಲಾಯಿತು’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ಡಿಕೆಶಿ ಹೇಳಿಕೆ ಖಂಡನೀಯ’

‘ಮುಸಲ್ಮಾನರಿಗೆ ಕಾಂಗ್ರೆಸ್ ಕೊಟ್ಟಷ್ಟು ರಕ್ಷಣೆ ಬೇರೆ ಯಾವುದೇ ಪಕ್ಷ ಕೊಟ್ಟಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿ.ಕೆ. ಶಿವಕುಮಾರ್ ಅವರು ಹೇಳಿರುವುದು ಖಂಡನೀಯ. ಸರ್ಕಾರ ಮತ್ತು ಪಕ್ಷ ಕೂಡಲೇ ಗಮನಹರಿಸಿ ಮುಸ್ಲಿಂ ಸಮುದಾಯದ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬೇಕು. ತನ್ನ ತಪ್ಪುಗಳನ್ನು ತಿದ್ದಿಕೊಳ್ಳಬೇಕು’ ಎಂದು ಪತ್ರದಲ್ಲಿ ಒತ್ತಾಯಿಸಲಾಗಿದೆ.

ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿ ಪರ: ಮುಖ್ಯಮಂತ್ರಿ ಸಿದ್ದರಾಮಯ್ಯ

‘ಗಣತಿ ಬಳಿಕ ಕ್ಷೇತ್ರ ಮರುವಿಂಗಡಣೆ ಸೂಕ್ತ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಜನಗಣತಿ ಪ್ರಕ್ರಿಯೆ ಬಳಿಕವೇ ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಮಾಡುವುದು ಸೂಕ್ತ. ಅದಕ್ಕಾಗೇ ನಾವು ಈಗ ವಿರೋಧಿಸಿದೆವು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಲ್ಲಿ ಹೇಳಿದರು.

ಸೋಮವಾರ ಇಲ್ಲಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ಕಾಂಗ್ರೆಸ್ ಎಂದಿಗೂ ಮಹಿಳಾ ಮೀಸಲಾತಿಯ ಪರವಾಗಿದೆ’ ಎಂದರು.

‘ಮಹಿಳಾ ಮೀಸಲಾತಿ ಮಸೂದೆಯು 2023ರಲ್ಲಿಯೇ ಅಂಗೀಕಾರವಾಗಿದೆ. ಆಗಲೇ ಜಾರಿಗೊಳಿಸಬೇಕಿತ್ತು. ಇಲ್ಲಿಯವರೆಗೆ ಏಕೆ ಕಾಯಬೇಕಿತ್ತು’ ಎಂದೂ ಪ್ರಶ್ನಿಸಿದರು.

‘ಮಹಿಳಾ ಮೀಸಲಾತಿ ಮಸೂದೆ ಕುರಿತು ಪ್ರಧಾನಿ ಅವರದ್ದು ‘ಅವರದ್ದು ತಾರತಮ್ಯದ ಧೋರಣೆ. ಅವರು ಸಾಮಾಜಿಕ ನ್ಯಾಯದ ಪರವಾಗಿಲ್ಲ. ಅಧಿಕಾರಕ್ಕೆ ಬಂದು 12 ವರ್ಷಗಳಲ್ಲಿ ಮೀಸಲಾತಿಯನ್ನು ಏಕೆ ಜಾರಿಗೊಳಿಸಲಿಲ್ಲ? ಈಗಲೂ 2023ರ ಪ್ರಕಾರ ಜಾರಿಗೊಳಿಸಲಿ’ ಎಂದರು.

‘ಲೋಕಸಭಾ ಸ್ಥಾನಗಳನ್ನು ಶೇ 50ರಷ್ಟು ಹೆಚ್ಚಿಸುವುದಾಗಿ ಹೇಳಿದ್ದು, ಇದರಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ಈ ರಾಜ್ಯಗಳಂತೆ ಉತ್ತರ ಭಾರತದ ರಾಜ್ಯಗಳು ಜನಸಂಖ್ಯೆಯನ್ನು ಉತ್ತಮವಾಗಿ ನಿಯಂತ್ರಿಸಿಲ್ಲ. ಜನಗಣತಿ ಮಾಡಿ ಎಲ್ಲರಿಗೂ ಸಮಾನವಾಗಿ ಸ್ಥಾನಗಳನ್ನು ಕೊಡಬೇಕು’ ಎಂದರು.

‘ತಮಿಳುನಾಡು ಚುನಾವಣೆ ಪ್ರಚಾರಕ್ಕೆ ನಾನು ಹೋಗಿಲ್ಲ. ಅಲ್ಲಿ ಡಿಎಂಕೆ ಮತ್ತು ಮಿತ್ರ ಪಕ್ಷಗಳು ಗೆಲ್ಲಲಿದ್ದು, ಕೇರಳದಲ್ಲಿ ಕಾಂಗ್ರೆಸ್ ಗೆಲ್ಲಲಿದೆ’ ಎಂದರು.

ಪ್ರಧಾನಿ ಬೆಂಗಳೂರಿಗೆ ಬಂದಿದ್ದಾಗ ನಾವೇನೂ ಗುಟ್ಟಾಗಿ ಮಾತನಾಡಿಲ್ಲ. ಮಹಿಳಾ ಮೀಸಲಾತಿ ಬಗ್ಗೆ ನಿಮ್ಮ ನಿಲುವೇನೆಂದು ಕೇಳಿದ್ದರು. ಅದರ ಪರವಾಗಿ ಇದ್ದೇವೆಂದು ತಿಳಿಸಿದ್ದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಜನಗಣತಿ ನಂತರ ಕ್ಷೇತ್ರ ಮರುವಿಂಗಡಣೆಯಾದರೆ, ದಕ್ಷಿಣದ ರಾಜ್ಯಗಳಿಗೆ ದೊಡ್ಡ ನಷ್ಟವಾಗಲಿದೆ. ರಾಜ್ಯದಲ್ಲಿ 2 ಸ್ಥಾನ ಕಡಿಮೆಯಾಗಲಿವೆ
ಬಸವರಾಜ ಬೊಮ್ಮಾಯಿ, ಸಂಸದ

‘ಮಸೂದೆ ಸೋಲಿಸಿದ್ದವರಿಗೆ ಮುಖಭಂಗ’

ಬೆಂಗಳೂರು: ಮಹಿಳಾ ಮೀಸಲಾತಿ ಮಸೂದೆಯನ್ನು ಅಂದು ಸೋಲಿಸಿದ್ದವರು ಈಗ ಮಹಿಳೆಯರ ಪರ ಎನ್ನುತ್ತಿದ್ದಾರೆ. ಬಿಜೆಪಿ ಹಾಗೂ ಎನ್‌ಡಿಎಗೆ ಲೋಕಸಭೆಯಲ್ಲಿ ಮೊದಲ ಮುಖಭಂಗವಾಗಿದೆ ಎಂದು ಕಾಂಗ್ರೆಸ್ ನಾಯಕಿ ಮಾರ್ಗರೇಟ್ ಆಳ್ವಾ ಹೇಳಿದರು.



ಮಾರ್ಗರೇಟ್ ಆಳ್ವಾ

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ‘ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೊಳಿಸುವ ಚರ್ಚೆಯು ರಾಜೀವ್ ಗಾಂಧಿ ಅವರ ಕಾಲದಲ್ಲೇ ಆರಂಭವಾಗಿತ್ತು. ನನ್ನ ಅಧ್ಯಕ್ಷತೆಯಲ್ಲೇ 14 ಜನರ ಸಮಿತಿ ಮಾಡಿದ್ದರು. 12 ವಿಭಾಗಗಳನ್ನು ಒಳಗೊಂಡ ವರದಿ ಸಿದ್ಧಪಡಿಸಿದ್ದೆವು. ಮಹಿಳೆಯರಿಗೆ ರಾಜಕೀಯ ಮೀಸಲಾತಿ ಸೇರಿ ಹಲವು ಶಿಫಾರಸುಗಳನ್ನು ಮಾಡಿದ್ದೆವು. ವರದಿಯನ್ನು 1989ರಲ್ಲೇ ಸರ್ಕಾರಕ್ಕೆ ಸಲ್ಲಿಸಲಾಗಿತ್ತು’ ಎಂದರು.

‘ವರದಿ ಸಲ್ಲಿಕೆ ಬಳಿಕ ಸಂಸತ್ತಿನಲ್ಲಿ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಮಹಿಳೆಯರಿಗೆ ಸ್ಥಾನ ಬಿಟ್ಟುಕೊಟ್ಟು ಮನೆಯಲ್ಲಿ ಅಡುಗೆ ಮಾಡಬೇಕೇ ಎಂದು ಪ್ರಶ್ನಿಸಿದ್ದರು. ಆನಂತರ ರಾಜೀವ್ ಗಾಂಧಿ ಅವರು ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡಿಸಿದರು. ಎಲ್ಲಾ ವಿರೋಧ ಪಕ್ಷಗಳು ಒಂದಾಗಿ ಸೋಲಿಸಿದರು. ನಂತರ ಪ್ರಧಾನಿಯಾದ ಪಿ.ವಿ.ನರಸಿಂಹರಾವ್ ಅವರ ಕಾಲದಲ್ಲಿ ಮೀಸಲಾತಿ ಮಸೂದೆ ಅಂಗೀಕಾರ ಪಡೆಯಿತು. ಕಾಂಗ್ರೆಸ್‌ನಿಂದಾಗಿಯೇ 15 ಲಕ್ಷ ಮಹಿಳೆಯರು ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಪಡೆದರು. ಅಂದು ಮಸೂದೆ ಅಂಗೀಕಾರವಾಗದಂತೆ ತಡೆದವರೇ ಇಂದು ಮಹಿಳೆಯರ ಪರ ಎನ್ನುತ್ತಿದ್ದಾರೆ’ ಎಂದು ಟೀಕಿಸಿದರು.

‘ಮಹಿಳಾ ಮೀಸಲಾತಿ ಜತೆಗೆ ಕ್ಷೇತ್ರ ಪುನರ್‌ವಿಂಗಡಣೆಯನ್ನು ತಳುಕು ಹಾಕಿದ್ದಾರೆ. 2011ರ ಜನಗಣತಿ ಆಧಾರದಲ್ಲೇ ವಿಂಗಡಣೆ ಮಾಡಲು ಹೊರಟಿರುವುದು ಅವೈಜ್ಞಾನಿಕ. ಆರ್‌ಎಸ್‌ಎಸ್ ತೀರ್ಮಾನದಂತೆ ಕೇಂದ್ರ ಸರ್ಕಾರ ನಡೆದುಕೊಳ್ಳುತ್ತಿದೆ. ಕೆಲ ರಾಜ್ಯಗಳಿಗೆ ಅನುಕೂಲ ಮಾಡಿಕೊಡಲು ಇಂತಹ ಆತುರದ ಕ್ರಮಕ್ಕೆ ಮುಂದಾಗಿದೆ’ ಎಂದು ದೂರಿದರು.

‘ನೀರಿಗಾಗಿ ಕಚ್ಚಾಡಿದ್ದು ಸಾಕು’

ಪ್ರಜಾವಾಣಿ ವಾರ್ತೆ

ಆನೇಕಲ್: ‘ದಕ್ಷಿಣದ ರಾಜ್ಯಗಳು ನೀರಿಗಾಗಿ ರಾಜಕೀಯ ಹೊಡೆದಾಟ ಮಾಡಿದ್ದು ಸಾಕು. ಇನ್ನಾದರೂ ನೈಜ ಅಭಿವೃದ್ಧಿಯತ್ತ ಗಮನ ಹರಿಸಬೇಕು’ ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದರು.

ತಮಿಳುನಾಡಿನ ಥಳೀ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ. ನಾಗೇಶ್, ಹೊಸೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಾಲಕೃಷ್ಣಾ ರೆಡ್ಡಿ ಪರ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

‘ನೀರಿನ ವಿಷಯದಲ್ಲಿ ರಾಜಕೀಯ ಮಾಡದೆ ಎಲ್ಲರೂ ಒಗ್ಗೂಡಿ ದಕ್ಷಿಣ ಭಾರತದ ಸಮಗ್ರತೆ ಎತ್ತಿ ಹಿಡಿಯಬೇಕು. ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗಲು ನಾನು ಬಿಡಲ್ಲ’ ಎಂದರು.

‘ಡಬಲ್ ಇಂಜಿನ್ ಸರ್ಕಾರದಿಂದ ಆಂಧ್ರಪ್ರದೇಶ ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿದೆ. ತಮಿಳುನಾಡು ಅಭಿವೃದ್ಧಿಗೂ ಡಬಲ್ ಎಂಜಿನ್ ಸರ್ಕಾರ ಅಗತ್ಯವಿದೆ. ಮಹಿಳೆಯರ ರಾಜಕೀಯ ಮೀಸಲಾತಿಗೆ ಅಡ್ಡಗಾಲು ಹಾಕಿದ ಕಾಂಗ್ರೆಸ್, ಡಿಎಂಕೆ ಪಕ್ಷಗಳಿಗೆ ಮಹಿಳಾ ಮತದಾರರು ಪಾಠ ಕಲಿಸಬೇಕು’ ಎಂದು ನಾಯ್ಡು ಮನವಿ ಮಾಡಿದರು.

ಕೇಂದ್ರ ಸಚಿವರಾದ ಕೆ.ರಾಮ ಮೋಹನ್ ನಾಯ್ಡು, ಚಂದ್ರಶೇಖರ್, ಕರ್ನಾಟಕ ವಿರೋಧ ಪಕ್ಷದ ನಾಯಕ ಆರ್.ಅಶೋಕ ಇದ್ದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಹಿಂಸೆಯ ಆಧಾರದ ಮೇಲೆ ಶಾಶ್ವತವಾದುದನ್ನು ಸಾಧಿಸಲು ಎಂದಿಗೂ ಸಾಧ್ಯವಿಲ್ಲ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ರಾಜಕೀಯ ಟೀಕೆಗೆ ರಾಷ್ಟ್ರೀಯ ವೇದಿಕೆ ಅಧಿಕಾರ ದುರುಪಯೋಗದ ನಿದರ್ಶನ

ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷಗಳನ್ನು ಟೀಕಿಸುವುದಕ್ಕಾಗಿ, ಹುದ್ದೆಯ ಕಾರಣದಿಂದಾಗಿ ತಮಗೆ ದೊರೆತಿರುವ ರಾಷ್ಟ್ರೀಯ ವೇದಿಕೆಯನ್ನು ಬಳಸಿಕೊಂಡಿರುವುದು ದುರದೃಷ್ಟಕರ. ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾನೂನಿಗೆ ಸಾಂವಿಧಾನಿಕ ತಿದ್ದುಪಡಿ ಮಾಡುವ ಪ್ರಯತ್ನವು ವಿಫಲವಾದ ನಂತರ, ರಾಷ್ಟ್ರೀಯ ವೇದಿಕೆಯ ಮೂಲಕ ವಿರೋಧ ಪಕ್ಷಗಳ ವಿರುದ್ಧ ಪ್ರಧಾನಿ ಟೀಕಾಪ್ರಹಾರ ನಡೆಸಿದ್ದಾರೆ. ಕಳೆದ ಶುಕ್ರವಾರ (ಏಪ್ರಿಲ್ 17) ಸದನದಲ್ಲಿ ಮಸೂದೆ ಸೋಲು ಕಂಡಿತು; ಶನಿವಾರ ರಾತ್ರಿ ದೇಶವನ್ನು ಉದ್ದೇಶಿಸಿ ಮಾತನಾಡಿದ ನರೇಂದ್ರ ಮೋದಿ ಅವರು, ಮಹಿಳಾ ಮೀಸಲಾತಿ ಪ್ರಕ್ರಿಯೆಯನ್ನು ಹತ್ತಿಕ್ಕಿದ್ದಕ್ಕಾಗಿ ವಿರೋಧ ಪಕ್ಷಗಳನ್ನು, ವಿಶೇಷವಾಗಿ ಕಾಂಗ್ರೆಸ್, ಡಿಎಂಕೆ ಹಾಗೂ ತೃಣಮೂಲ ಕಾಂಗ್ರೆಸ್‌ಗಳನ್ನು ಕಟುವಾದ ಶಬ್ದಗಳಲ್ಲಿ ಟೀಕಿಸಿದ್ದಾರೆ. ಎರಡು ಪ್ರಮುಖ ರಾಜ್ಯಗಳಾದ ತಮಿಳುನಾಡು ಮತ್ತು ಪಶ್ಚಿಮ ಬಂಗಾಳಗಳಲ್ಲಿ ವಿಧಾನಸಭಾ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಪ್ರಧಾನಿ ತಮ್ಮ ರಾಜಕೀಯ ಭಾಷಣಕ್ಕಾಗಿ ರಾಷ್ಟ್ರೀಯ ವೇದಿಕೆಯನ್ನು ಬಳಸಿಕೊಂಡಿರುವುದು ಅನುಚಿತವಾದ ಹಾಗೂ ಚುನಾವಣೆ ಸಂದರ್ಭದಲ್ಲಿನ ಮಾದರಿ ನೀತಿಸಂಹಿತೆಯ ಉಲ್ಲಂಘನೆಯ ರೂಪದಲ್ಲಿ ನೋಡಬಹುದಾದ ನಡವಳಿಕೆಯಾಗಿದೆ. ರಾಷ್ಟ್ರೀಯ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅಥವಾ ರಾಷ್ಟ್ರೀಯ ಮಹತ್ವದ ವಿಷಯಗಳ ಬಗ್ಗೆ ಜನರ ಗಮನಸೆಳೆಯುವುದಕ್ಕಾಗಿ ಪ್ರಧಾನ ಮಂತ್ರಿ ದೇಶವನ್ನು ಉದ್ದೇಶಿಸಿ ಮಾತನಾಡುತ್ತಾರೆ. ಮಸೂದೆಯೊಂದು ಸದನದ ಅನುಮೋದನೆ ಪಡೆಯಲು ವಿಫಲವಾದ ಸಂದರ್ಭ ರಾಷ್ಟ್ರೀಯ ತುರ್ತು ಪರಿಸ್ಥಿತಿಯೂ ಅಲ್ಲ, ಜನರ ಗಮನವನ್ನು ತುರ್ತಾಗಿ ಸೆಳೆಯಬೇಕಾದ ಸಂಗತಿಯೂ ಆಗಿರಲಿಲ್ಲ. ಹಾಗಾಗಿ, ಅಧಿಕಾರ ದುರುಪಯೋಗದ ರೂಪದಲ್ಲಿ ಪ್ರಧಾನಿ ಅವರ ಭಾಷಣವನ್ನು ನೋಡಬಹುದಾಗಿದೆ.



> ವಿರೋಧ ಪಕ್ಷಗಳನ್ನು ಟೀಕಿಸುವುದಕ್ಕಾಗಿ ನರೇಂದ್ರ ಮೋದಿ ಅವರು ರಾಷ್ಟ್ರೀಯ ವೇದಿಕೆಯನ್ನು ಬಳಸಿಕೊಂಡಿರುವುದು ಅಧಿಕಾರ ಸ್ಥಾನದ ದುರುಪಯೋಗಕ್ಕೆ ಸ್ಪಷ್ಟ ನಿದರ್ಶನವಾಗಿದೆ.

ಚುನಾವಣೆಯ ಸಮಯದಲ್ಲಿ ಅಧಿಕೃತ ಸಮೂಹ ಮಾಧ್ಯಮವನ್ನು ರಾಜಕೀಯ ಸುದ್ದಿಗಳ ಪಕ್ಷಪಾತದ ವರದಿಗಾಗಿ ಹಾಗೂ ಅಧಿಕಾರದಲ್ಲಿ ಇರುವ ಪಕ್ಷದ ಹಿತಾಸಕ್ತಿಗೆ ಪೂರಕವಾಗಿ, ಸಾಧನೆಗಳ ಪ್ರಚಾರಕ್ಕಾಗಿ ದುರುಪಯೋಗ ಮಾಡಿಕೊಳ್ಳುವುದನ್ನು ತಪ್ಪಿಸಬೇಕು ಎಂದು ಆಡಳಿತದಲ್ಲಿರುವ ಪಕ್ಷಕ್ಕೆ ಸಂಬಂಧಿಸಿದಂತೆ ಚುನಾವಣಾ ನೀತಿಸಂಹಿತೆ ಸ್ಪಷ್ಟವಾಗಿ ಹೇಳುತ್ತದೆ. ವಿರೋಧ ಪಕ್ಷಗಳ ಮೇಲೆ ರಾಜಕೀಯ ಟೀಕಾಪ್ರಹಾರ ನಡೆಸುತ್ತ, ಅವುಗಳಿಗೆ ಬುದ್ಧಿ ಕಲಿಸಬೇಕೆಂದು ಜನರಿಗೆ ಕರೆನೀಡಲು ದೂರದರ್ಶನವನ್ನು ಬಳಸಿಕೊಳ್ಳುವುದು ಚುನಾವಣಾ ನೀತಿಸಂಹಿತೆಗೆ ವಿರುದ್ಧವಾಗಿದೆ. ಪ್ರಧಾನಿ ಅವರ ಈ ದುರುಪಯೋಗವನ್ನು, 1975ರ ರಾಯ್ ಬರೇಲಿ ಚುನಾವಣೆ ಸಂದರ್ಭದಲ್ಲಿ ಇಂದಿರಾ ಗಾಂಧಿ ಅವರಿಂದಾದ ಮಾದರಿ ನೀತಿಸಂಹಿತೆಯ ಉಲ್ಲಂಘನೆಯೊಂದಿಗೆ ಹೋಲಿಸಲಾಗುತ್ತಿದೆ. ಪ್ರಸಕ್ತ ಉಲ್ಲಂಘನೆಯ ಬಗ್ಗೆ ವಿರೋಧ ಪಕ್ಷಗಳು ಭಾರತೀಯ ಚುನಾವಣಾ ಆಯೋಗಕ್ಕೆ (ಇಸಿಐ) ದೂರು ನೀಡಿವೆ. ಆದರೆ, ಅಷ್ಟೇನೂ ಗಂಭೀರವಲ್ಲದ ದೂರುಗಳ ಸಂದರ್ಭದಲ್ಲಿಯೇ ಕ್ರಮ ಕೈಗೊಳ್ಳದ ಆಯೋಗ, ಪ್ರಸ್ತುತ ಅತ್ಯಂತ ಗಂಭೀರವಾದ ದೂರಿನ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಸಂದೇಹವಿದೆ. ಆಯೋಗ ಕ್ರಮ ಕೈಗೊಳ್ಳದೆ ಹೋದಲ್ಲಿ ನ್ಯಾಯಾಲಯಗಳು ಕ್ರಮ ಕೈಗೊಳ್ಳಬಹುದಾಗಿದೆ.

ಪ್ರಧಾನಿ ಅವರ ದೂರದರ್ಶನ ಭಾಷಣವು ಕಠಿಣ ಶಬ್ದಗಳನ್ನು ಒಳಗೊಂಡಿತ್ತು ಹಾಗೂ ಕೆಲವೊಮ್ಮೆ ಸಭ್ಯತೆಯ ಎಲ್ಲೆ ಮೀರಿತ್ತು. ಮಸೂದೆ ಕುರಿತಂತೆ ವಿರೋಧ ಪಕ್ಷಗಳ ನಿಲುವನ್ನು ವಿವರಿಸಲು 'ಭ್ರೂಣಹತ್ಯೆ' ಹಾಗೂ 'ಪಾಪ' ಎನ್ನುವಂತಹ ಭಾವನಾತ್ಮಕ ಹಾಗೂ ಧಾರ್ಮಿಕ ಅರ್ಥಗಳನ್ನು ಹೊಂದಿರುವ ಪರಿಭಾಷೆಯನ್ನು ಪ್ರಧಾನಿ ಬಳಸಿದ್ದು ನ್ಯಾಯಯುತವೆಂದು ಒಪ್ಪುವುದು ಸಾಧ್ಯವಿಲ್ಲ. ಪ್ರಮುಖ ರಾಜಕೀಯ ಪಕ್ಷಗಳೊಂದಿಗೆ ಯಾವುದೇ ಗಂಭೀರ ಸಮಾಲೋಚನೆ ನಡೆಸದೆಯೇ ಸರ್ಕಾರ ಸದನದಲ್ಲಿ ಮಸೂದೆ ಮಂಡಿಸಿತ್ತು. ಹಾಗಾಗಿ, ಮಸೂದೆಯ ಸೋಲಿನಲ್ಲಿ ವಿರೋಧ ಪಕ್ಷಗಳಂತೆ ಸರ್ಕಾರದ ಸಮಾನ ಪಾತ್ರವೂ ಇದೆ. ಅನುಮೋದನೆ ಪಡೆಯುವಲ್ಲಿ ವಿಫಲವಾಗುತ್ತದೆ ಎನ್ನುವುದನ್ನು ತಿಳಿದೂ ಸದನದ ಮುಂದೆ ಮಸೂದೆ ತಂದದ್ದನ್ನು ಗಮನಿಸಿದರೆ, ಸರ್ಕಾರದ ಪ್ರಯತ್ನದ ಹಿಂದೆ ರಾಜಕೀಯ ಉದ್ದೇಶಗಳಿದ್ದವು ಎಂದೇ ಅರ್ಥ. ಪ್ರಧಾನಿ ಅವರ ಭಾಷಣದಲ್ಲೂ ಆ ರಾಜಕೀಯ ಉದ್ದೇಶವೇ ಇತ್ತು. ಇಡೀ ಪ್ರಕರಣವು, ಮಹಿಳಾ ಮೀಸಲಾತಿ ವಿಷಯವು ರಾಜಕೀಯ ಪಕ್ಷಗಳಿಗೆ ಆಯುಧವಾಗಿದೆಯೇ ಹೊರತು, ಬದ್ಧತೆಯಾಗಿಲ್ಲ ಎನ್ನುವುದನ್ನು ಮತ್ತೊಮ್ಮೆ ಬಹಿರಂಗಪಡಿಸುವಂತಿದೆ.

ಜಾಲಾಡಿ



ಎಲ್ಲ ಕಾಲದ ಅಧ್ಯಾತ್ಮ

ಬಸವಣ್ಣನ ಬುದ್ಧಿ, ಅಕ್ಕನ ಹೃದಯ ಮತ್ತು ಅಲ್ಲಮನ ಆತ್ಮ; ಎಲ್ಲ ಕಾಲಕ್ಕೂ ಸಲ್ಲುವ ಅಧ್ಯಾತ್ಮ!

ಸವಿರಾಜ್ ಆನಂದೂರು, ಕಥೆಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಸಂವಿಧಾನ ತಿದ್ದುಪಡಿ ಮಸೂದೆಯ ಸೋಲಿನ ಬಗ್ಗೆ ಪ್ರಧಾನಿ ಮೋದಿಯವರು ಏನೇ ಭಾಷಣ ಮಾಡಿದರೂ, ಅದರ ಹಿಂದಿನ ಸಂಚು ಜನರಿಗೆ ಅರ್ಥವಾಗಿದೆ. ಇದು ಚುನಾವಣಾ ಗಿಮಿಕ್ ಅಲ್ಲದೆ ಬೇರೇನೂ ಅಲ್ಲ.

ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

25 ವರ್ಷಗಳ ಹಿಂದೆ

ಶನಿವಾರ, 21-4-2001

• ಸಚಿವೆ ನಫೀಸ್, 10 ಶಾಸಕರ ಆಯ್ಕೆ ಹೈಕೋರ್ಟ್‌ನಿಂದ ರದ್ದು

ಬೆಂಗಳೂರು, ಏ. 20– ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಕಳೆದ ವರ್ಷದ ಜೂನ್‌ನಲ್ಲಿ ನಡೆದ ಚುನಾವಣೆಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವೆ ನಫೀಸ್ ಸೇರಿದಂತೆ 11 ಸದಸ್ಯರ ಆಯ್ಕೆಯನ್ನು ಹೈಕೋರ್ಟ್ ಇಂದು ರದ್ದುಪಡಿಸಿದ್ದು, ನಾಮಪತ್ರ ಪರಿಶೀಲನೆ ನಂತರದ ಪ್ರಕ್ರಿಯೆಯನ್ನು ಪುನಃ ಪ್ರಾರಂಭಿಸಬೇಕು ಎಂದು ಆದೇಶಿಸಿದೆ.

ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಪೈಕಿ ಒಬ್ಬರಾಗಿದ್ದ ಕನ್ನಡ ಚಳವಳಿ ನಾಯಕ ವಾಟಾಳ್ ನಾಗರಾಜ್ ಅವರು ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ಮೇಲೆ ನ್ಯಾಯಮೂರ್ತಿ ಚಂದ್ರಶೇಖರಯ್ಯ ಇಂದು ಈ ಆದೇಶ ಮಾಡಿದರು.

ಈ ಆದೇಶ ಆರು ವಾರಗಳ ನಂತರ ಜಾರಿಗೆ ಬರಲಿದ್ದು, ಅದಕ್ಕೂ ಮುಂಚೆ ಸರ್ಕಾರ ಅಥವಾ ಸಂಬಂಧಪಟ್ಟವರು ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಬಹುದಾಗಿದೆ. ಲಾಭದಾಯಕ ಹುದ್ದೆಯನ್ನು ಹೊಂದಿದ್ದಾರೆ ಎಂಬ ಕಾರಣದ ಮೇಲೆ ವಾಟಾಳ್ ಅವರ ನಾಮಪತ್ರವನ್ನು ತಿರಸ್ಕರಿಸಿದ ಚುನಾವಣಾ ಅಧಿಕಾರಿಗಳ ಕ್ರಮ ಕಾನೂನುಬಾಹಿರ ಎಂದು ನ್ಯಾಯ ಮೂರ್ತಿಗಳು ಅಭಿಪ್ರಾಯಪಟ್ಟಿದ್ದಾರೆ.

• ಹೈಕೋರ್ಟ್ ಪೀಠ ಸ್ಥಾಪನೆಗೆ ಸಂಸದೀಯ ಸಮಿತಿ ಶಿಫಾರಸು

ನವದೆಹಲಿ, ಏ. 20 (ಪಿಟಿಐ)– ರಾಜಧಾನಿಗಳಲ್ಲಿ ಮಾತ್ರವಲ್ಲದೆ ಬೇರೆ ಸ್ಥಳಗಳಲ್ಲೂ ಹೈಕೋರ್ಟ್ ಪೀಠಗಳನ್ನು ಸ್ಥಾಪಿಸಬೇಕು ಎಂದು ಗೃಹ ವ್ಯವಹಾರಗಳ ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ.

ನಿನ್ನೆ ಸಂಸತ್ತಿನಲ್ಲಿ ಮಂಡಿಸಲಾದ ತನ್ನ 74ನೇ ವರದಿಯಲ್ಲಿ 42 ಸದಸ್ಯರ ಸಮಿತಿ ಈ ಶಿಫಾರಸು ಮಾಡಿದೆ.

75 ವರ್ಷಗಳ ಹಿಂದೆ

ಶನಿವಾರ, 21-4-1951

• ಸುಪ್ರೀಂ ಕೋರ್ಟ್ ಲಾಯರು ಗಳಿಗೆ ಹೈಕೋರ್ಟ್‌ಗಳಲ್ಲಿ ವಾದಿಸುವ ಹಕ್ಕು

ದೆಹಲಿ, ಏ. 20– ಭಾರತ ಪಾರ್ಲಿಮೆಂಟಿನಲ್ಲಿ ಇಂದು ಸಿವಿಲ್ ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡ್ ತಿದ್ದುಪಡಿ ಮಸೂದೆ, ಸಿವಿಲ್ ಪ್ರೊಸೀಜರ್ ಕೋಡ್‌ನ ದ್ವಿತೀಯ ತಿದ್ದುಪಡಿ ಮಸೂದೆ ಮತ್ತು ಸುಪ್ರೀಂ ಕೋರ್ಟಿನ ಅಡ್ವೋಕೇಟರುಗಳು ಹೈಕೋರ್ಟ್‌ಗಳಲ್ಲಿ ವಾದ ಮಾಡುವ ವಿಚಾರಕ್ಕೆ ಸಂಬಂಧಿಸಿದ ಮಸೂದೆಯನ್ನು ಅಂಗೀಕರಿಸಲಾಯಿತು.

ಜಲಿಯನ್ ವಾಲಾಬಾಗಿನ ಧರ್ಮದರ್ಶಿತ್ವ ಆಸ್ತಿಪಾಸ್ತಿಗಳ ಬಗ್ಗೆ ಆಡಳಿತ ನಿರ್ವಹಿಸಲು ಶಾಸನಬದ್ಧ ಧರ್ಮದರ್ಶಿತ್ವ ಸಮಿತಿಯೊಂದನ್ನು ರಚಿಸಬೇಕೆಂಬ ಮತ್ತು ಆ ಹುತಾತ್ಮರ ಸ್ಮಾರಕ ಸ್ಥಾಪನೆಯ ಬಗ್ಗೆ ನ್ಯಾಯಾಂಗ ಮಂತ್ರಿ ಅಂಬೇಡ್ಕರ್ ಅವರು ತಂದ ಮಸೂದೆಯ ಮೇಲೆ ಚರ್ಚೆ ನಡೆದು ಸಭೆ ಮುಕ್ತಾಯವಾಯಿತು.

ಪಾಯಲ್: ಆರ್ಚರಿ ಕ್ಷೇತ್ರದ ಅಚ್ಚರಿ



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಪಾಯಲ್ ನಾಗ್ ಆಗ 8 ವರ್ಷದ ಹುಡುಗಿ. ಆ ದಿನ, ಅಮ್ಮ ಕೊಟ್ಟ ತಿಂಡಿ ತಿಂದು ಕೈಯನ್ನು ಅಂಗಿಗೆ ಒರೆಸಿಕೊಳ್ಳುತ್ತ, ತಮ್ಮನೊಂದಿಗೆ ಆಡಲು ಓಡಿದ್ದಳು. ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ನಾಲ್ಕನೇ ಅಂತಸ್ತಿನ ಮಾಳಿಗೆಯೇ ಅವರ ಆಟದ ಮೈದಾನ. ಸ್ವಲ್ಪ ಹೊತ್ತಾದ ನಂತರ ಪಾಯಲ್ ಕಿಟಾರನೆ ಕಿರುಚಿದ ಸದ್ದು ಕೇಳಿಸಿತು. ಆಡುತ್ತಿದ್ದ ಹುಡುಗಿಗೆ ಏನಾಯಿತು ಎಂದು ಸಮೀಪದಲ್ಲಿ ಇದ್ದವರು ಓಡಿ ಬಂದರು. ಪುಟ್ಟ ಹುಡುಗಿಗೆ ಪ್ರಜ್ಞೆ ತಪ್ಪಿದೆ. ತಾರಸಿಯಲ್ಲಿ ನಿಂತ ನೀರಿನ ಸಮೀಪದಲ್ಲಿದ್ದ ಹೈವೋಲ್ಟೇಜ್ ವಿದ್ಯುತ್ ತಂತಿ ಸ್ಪರ್ಶದಿಂದ ಬಾಲಕಿ ಪ್ರಜ್ಞೆ ಕಳೆದುಕೊಂಡಿದ್ದಾಳೆ. ಅಕ್ಕನನ್ನು ರಕ್ಷಿಸಲು ಹೋದ ತಮ್ಮನಿಗೂ ಆಘಾತವಾಗಿದೆ.

ಮಕ್ಕಳನ್ನು ಕೂಡಲೇ ಆಸ್ಪತ್ರೆಗೆ ಕರೆದೊಯ್ಯಲಾಯಿತು. ವೈದ್ಯರು ಜೀವ ಉಳಿಸಿದರು. ಆದರೆ, ಪಾಯಲ್‌ಳ ಎರಡೂ ಕೈಗಳನ್ನು ತೋಳುಸಹಿತ ಮತ್ತು ಕಾಲುಗಳನ್ನು ಮಂಡಿಯವರೆಗೂ ಕತ್ತರಿಸಲಾಯಿತು. ಅಪ್ಪ, ಅಮ್ಮನ ದುಃಖದ ಕಟ್ಟೆಯೊಡೆದಿತ್ತು. ಮೊದಲೇ ಹಾಸಿ ಹೊದೆಯುವಷ್ಟು ಬಡತನ. ಅದರ ಮೇಲೆ ಈ ಬರಸಿಡಿಲು! ಆ ಸಂಕಷ್ಟದಲ್ಲೂ ಒಂದು ಸಮಾಧಾನದ ನಿಟ್ಟುಸಿರು ಅವರ ಪಾಲಿಗಿತ್ತು. ಪಾಯಲ್‌ಳ ತಮ್ಮ ಯಾವ ಹಾನಿಯೂ ಇಲ್ಲದೆ ಅಪಾಯದಿಂದ ಪಾರಾಗಿದ್ದ.

ಆ ದುರ್ಘಟನೆ ಸಂಭವಿಸಿ ಈಗ 10 ವರ್ಷಗಳಾಗಿವೆ. ಈ ಅವಧಿಯಲ್ಲಿ ಪಾಯಲ್ ಮತ್ತು ಕುಟುಂಬವು ಅನುಭವಿಸಿದ ಕಷ್ಟ–ನಷ್ಟಗಳು ಒಂದೆರಡಲ್ಲ. 'ಕೈಗಳಿಲ್ಲ, ಕಾಲುಗಳೂ ಇಲ್ಲ. ಹುಡುಗಿಯ ಭವಿಷ್ಯ ಹೇಗೆ? ಸತ್ತುಹೋಗಿದ್ದರೆ ಸರಿಯಾಗುತ್ತಿತ್ತು?' ಎಂದವರಿಗೆ ಲೆಕ್ಕವಿಲ್ಲ. ಹಾಗೆ ಮಾತನಾಡಿದವರೆಲ್ಲ ಈಗ ಅಚ್ಚರಿಯಿಂದ ಕಣ್ಣುಗಳನ್ನು ಅರಳಿಸುವಂತಾಗಿದೆ. ಕಳೆದ ಎರಡು ವಾರಗಳಿಂದ ಪಾಯಲ್ ವಿಶ್ವದ ಗಮನ ಸೆಳೆಯುತ್ತಿದ್ದಾರೆ. ಪ್ರೇರಣೆಯ ಕಥೆಯಾಗುತ್ತಿದ್ದಾರೆ. ಎರಡೂ ಕೈ–ಕಾಲುಗಳಿಲ್ಲದ ಯುವತಿಯ ಕೊರಳಲ್ಲಿ ಫಳಗುಟ್ಟುವ ಚಿನ್ನದ ಪದಕಗಳಿವೆ. ಚೆಂದದ ನಗುವಿನ 18 ವರ್ಷದ ಪಾಯಲ್ ಚಿತ್ರ, ವಿಡಿಯೊಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ಸಾವಿರಾರು ಜನರ ಮನಗೆಲ್ಲುತ್ತಿವೆ.

ದೇಶದ 'ಕ್ರೀಡಾಪ್ರಿಯರು' ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಕಳೆದು ಹೋಗಿರುವ ಹೊತ್ತಿನಲ್ಲಿ, ಬ್ಯಾಂಕಾಕ್‌ನಲ್ಲಿ ನಡೆದ ವಿಶ್ವ ಪ್ಯಾರಾ ಆರ್ಚರಿ ಸಿರೀಸ್‌ನ ಮಹಿಳೆಯರ ಕಾಂಪೌಂಡ್ (ವೈಯಕ್ತಿಕ) ವಿಭಾಗದಲ್ಲಿ ಪಾಯಲ್ ಮಾಡಿದ ಸಾಧನೆ ಹೆಚ್ಚು ಸದ್ದು ಮಾಡಲಿಲ್ಲ. ಅವರು ಅಲ್ಲಿ ಎರಡು ಚಿನ್ನದ ಪದಕ ಕೊರಳಿಗೇರಿಸಿಕೊಂಡರು. ಆ ಸ್ಪರ್ಧೆಯಲ್ಲಿ ಅವರು ಹಿಂದಿಕ್ಕಿದ್ದು ಶೀತಲ್ ದೇವಿ ಅವರನ್ನು! ಪಾಯಲ್ ಪಾಲಿಗೆ ಶೀತಲ್ ಸ್ಫೂರ್ತಿಯ ಸಂಕೇತ. ಈಗ, ತಮ್ಮ ಬದುಕಿನ ಪ್ರೇರಣೆ ಆಗಿದ್ದ ಸಾಧಕಿಯನ್ನೇ ಮೀರಿಸಿದ ಸಾಧನೆ ಅವರದಾಗಿದೆ. ಅಷ್ಟೇ ಅಲ್ಲ, ಶೀತಲ್ ಅವರೊಂದಿಗೆ ಸೇರಿ ತಂಡ ವಿಭಾಗದ ಚಿನ್ನವನ್ನೂ ತಮ್ಮದಾಗಿಸಿಕೊಂಡಿದ್ದಾರೆ.

ಜಮ್ಮು–ಕಾಶ್ಮೀರದ ಶೀತಲ್ ಅವರ ಯಶೋಗಾಥೆ ಜನಜನಿತ. ಮೂರು ವರ್ಷಗಳಿಂದ ಪ್ಯಾರಾ ಆರ್ಚರಿಯಲ್ಲಿ ಅವರದು ಅಪೂರ್ವ ಸಾಧನೆ. ಏಷ್ಯನ್ ಗೇಮ್ಸ್, ಪ್ಯಾರಾಲಿಂಪಿಕ್ ಕೂಟಗಳಲ್ಲಿ ಪದಕ ಸಾಧನೆ ಮಾಡಿರುವ ಕಾಶ್ಮೀರದ 19 ವರ್ಷದ ಶೀತಲ್ ಅವರಿಗೆ ಎರಡೂ ಕೈಗಳಿಲ್ಲ. ಕಾಲುಗಳನ್ನೇ ಕೈಗಳಂತೆ ಬಳಸಿಕೊಂಡು ಬಿಲ್ಗಾರಿಕೆ ಮಾಡುತ್ತಾರೆ. ಅದರಲ್ಲಿ ಪರಿಣತಿ ಸಾಧಿಸಲು ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಪಾಯಲ್ ಅವರದು ಮತ್ತೂ ಕಷ್ಟದ ದಾರಿ. ಕೈಗಳೊಂದಿಗೆ ಕಾಲುಗಳೂ ಇಲ್ಲದ ಈ ಚಿನ್ನದ ಬಾಲೆ ಬ್ಯಾಂಕಾಕ್ ಕೂಟದಲ್ಲಿ ತಮ್ಮ ವಿರುದ್ಧ ಗೆದ್ದಾಗ ಶೀತಲ್ ಬೇಸರಿಸಿಕೊಳ್ಳಲಿಲ್ಲ. ತಾವೇ ಗೆದ್ದಂತೆ ನಗೆ ಚೆಲ್ಲಿದರು. 'ನನಗೆ ಒಳ್ಳೆಯ ಜೊತೆಗಾತಿ ಸಿಕ್ಕಿದ್ದಾಳೆ. ಇಬ್ಬರೂ ಸೇರಿ ಭಾರತದ ಕೀರ್ತಿ ಹೆಚ್ಚಿಸುತ್ತೇವೆ' ಎಂದರು ಶೀತಲ್. ಇದಲ್ಲವೇ ಕ್ರೀಡಾಸ್ಫೂರ್ತಿ? 'ಶೀತಲ್ ದೀದಿಯನ್ನು ನೋಡಿ ನಾನು ಕಲಿತೆ. ಅವರೇ ನನಗೆ ಸ್ಫೂರ್ತಿ' ಎಂದು ಹೇಳುವಾಗ ಪಾಯಲ್ ಭಾವುಕರಾಗುತ್ತಾರೆ.

ಪಾಯಲ್ ಬೆಳವಣಿಗೆಯ ದಾರಿಯನ್ನು ಗಮನಿಸಿದರೆ, ಆಕೆ ಅಕ್ಷರಶಃ ಬೆಂಕಿಯಲ್ಲಿ ಅರಳಿದ ಹೂವು. ಪಾಯಲ್, ಒಡಿಶಾದ ಬಲಂಗೀರ್‌ನ ಬಿಜಯ್ ಕುಮಾರ್ ಮತ್ತು ಜನತಾದೇವಿ ದಂಪತಿಯ ಪುತ್ರಿ. ಮೂರನೇ ತರಗತಿಯಲ್ಲಿದ್ದಾಗ ನಡೆದ ದುರ್ಘಟನೆಯಲ್ಲಿ ಕೈ–ಕಾಲು ಕಳೆದುಕೊಳ್ಳಬೇಕಾಯಿತು. ಕೆಲವು ತಿಂಗಳುಗಳ ಆಸ್ಪತ್ರೆ ವಾಸದ ನಂತರ ಮನೆಗೆ ಬಂದ ಪಾಯಲ್ ಶಾಲೆಗೆ ಹೋಗುವುದನ್ನು ಮುಂದುವರಿಸಿದರು. ಮಗಳನ್ನು ದಿನವೂ ಶಾಲೆಗೆ ಕಳಿಸಿ, ಕರೆದುಕೊಂಡು ಬರುವುದು ಅಮ್ಮನ ಕೆಲಸವಾಯಿತು. ಅದೊಂದು ದಿನ ಹಲ್ಲಿನಲ್ಲಿ ಪೆನ್ಸಿಲ್ ಕಚ್ಚಿ ಹಿಡಿದು ಚಿತ್ರ ಬಿಡಿಸುವುದನ್ನು ಅಮ್ಮ ಮಗಳಿಗೆ ಹೇಳಿಕೊಟ್ಟರು. ಮೊದಲಿಗೆ ಕಷ್ಟವೆನ್ನಿಸಿತು, ನಿಧಾನವಾಗಿ ಚಿತ್ರಕಲೆ ಸಿದ್ಧಿಸಿತು. ಹಾಳೆಗಳ ಮೇಲೆ ಚೆಂದದ ಚಿತ್ರಗಳು ಮೂಡತೊಡಗಿದವು. ಪಾಯಲ್ ಬದುಕಿನಲ್ಲಿ ಬಣ್ಣಗಳು ತುಂಬತೊಡಗಿದವು. ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಆಕೆ ರಚಿಸಿದ ಚಿತ್ರವೊಂದು ಎಲ್ಲರಿಗೂ ಬಹಳ ಇಷ್ಟವಾಯಿತು. ಆ ಸಾಧನೆ, ಒಡಿಶಾದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಗಮನಕ್ಕೂ ಬಂತು. ಇದೆಲ್ಲ ಪ್ರಸಿದ್ಧಿ, ಜಿಲ್ಲಾಡಳಿತದ ಅಧಿಕಾರಿಗಳು ಬಂದು ಪಾಯಲ್‌ರನ್ನು ಆಶ್ರಮಕ್ಕೆ ಕರೆದುಕೊಂಡು ಹೋಗಲು ದಾರಿಯಾಯಿತು.

> ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಅರ್ಪಿಸಿದ ಏಕಲವ್ಯ 'ಮಹಾಭಾರತ'ದ ಅಸಾಧಾರಣ ಬಿಲ್ಲಾಳು. ಸ್ವತಂತ್ರ ಭಾರತದ ಪಾಯಲ್ ಅವರದು ಏಕಲವ್ಯನನ್ನೂ ಮೀರಿಸಿದ ಸಾಧನೆ. ಕೈ–ಕಾಲುಗಳಿಲ್ಲದ ಈ ಯುವತಿ ಆರ್ಚರಿಯಲ್ಲಿ ಮಾಡಿರುವ ಸಾಧನೆ ವಿಶ್ವವನ್ನೇ ನಿಬ್ಬೆರಗುಗೊಳಿಸುವಂತಿದೆ. ಪಾಯಲ್ ಎನ್ನುವುದೀಗ ಬರಿಯ ಹೆಸರಲ್ಲ; ಪ್ರೇರಣೆಯ ಸಂಕೇತ.

'ಪಾಲಕರು ನನ್ನನ್ನು ಅನಾಥಾಶ್ರಮಕ್ಕೆ ಸೇರಿಸಿದರು ಎಂಬ ಸುದ್ದಿಗಳು ಬಿತ್ತರವಾಗುತ್ತಿವೆ. ಅದು ನಿಜವಲ್ಲ. ಅಮ್ಮ–ಅಪ್ಪ ನನ್ನನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದಾರೆ. ಜಿಲ್ಲಾಡಳಿತವೇ ನನ್ನನ್ನು ಗುರ್ತಿಸಿ, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಟ್ಟಿತು. ಅದಕ್ಕಾಗಿ ಆಶ್ರಮಕ್ಕೆ ಸೇರಬೇಕಾಯಿತು' ಎಂದು ಪಾಯಲ್ ಮಾಧ್ಯಮಗಳ ಅತಿರಂಜಿತ ವರದಿಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುತ್ತಾರೆ.

ಆಶ್ರಮದಲ್ಲಿ ಪಾಯಲ್‌ರ ಓದು ಮತ್ತು ಚಿತ್ರಕಲೆ ಮುಂದುವರಿಯಿತು. 2023ರಲ್ಲಿ ಪಾಯಲ್ ಅವರ ಚಟುವಟಿಕೆಗಳನ್ನು ಗಮನಿಸಿದ ಶೀತಲ್ ದೇವಿ ಅವರ ಆರ್ಚರಿ ಕೋಚ್ ಕುಲದೀಪ್ ವೇದ್ವಾನ್ ಅವರು ಜಿಲ್ಲಾಧಿಕಾರಿಯನ್ನು ಸಂಪರ್ಕಿಸಿದರು. ಪಾಯಲ್ ಅವರಿಗೂ ಆರ್ಚರಿ ಕಲಿಸುವುದಾಗಿ ಹೇಳಿದರು. ಕಾಶ್ಮೀರದಲ್ಲಿರುವ ತಮ್ಮ 'ಮಾತಾ ವೈಷ್ಣೋದೇವಿ ಆರ್ಚರಿ ತರಬೇತಿ ಅಕಾಡೆಮಿ'ಗೆ ಕಳಿಸಿಕೊಡುವಂತೆ ಮನವಿ ಮಾಡಿದರು. ಮೊದಲಿಗೆ ಹಿಂಜರಿದ ಅಧಿಕಾರಿಗಳು ಮತ್ತು ಪಾಲಕರ ಮನವೊಲಿಸುವಲ್ಲಿ ಕುಲದೀಪ್ ಯಶಸ್ವಿಯಾದರು.

ಪಾಯಲ್ ಮತ್ತು ಕುಲದೀಪ್ ಅವರಿಗೆ ನಿಜವಾದ ಸವಾಲು ಶುರುವಾಗಿದ್ದು ಇಲ್ಲಿಂದಲೇ. ಮೊಟಕಾದ ಮೊಣಕಾಲಿನಿಂದ ಬಿಲ್ಲನ್ನು ಹೆದೆಯೇರಿಸಿ ಬಾಣವನ್ನು ಭುಜ ಮತ್ತು ಗಲ್ಲದ ನಡುವೆ ಸಿಕ್ಕಿಸಿ ಗುರಿಯತ್ತ ಬಿಡುವುದು ಮೊದಲಿಗೆ ಸಾಕಷ್ಟು ಕಷ್ಟವಾಯಿತು. ಕೃತಕ ಕಾಲು ಜೋಡಿಸಿ ಆ ಮೂಲಕ ಬಿಲ್ಲು ಹಿಡಿಯುವ ಪ್ರಯತ್ನ ಮಾಡಿದರು. ಕಾಲು, ತೊಡೆ, ಸೊಂಟದ ಸ್ನಾಯುಗಳು ನೋವಿನಿಂದ ಕಿರುಗುಟ್ಟಿದವು. ಅಪಾರ ಸಂಕಟ ಅನುಭವಿಸಿದರು. 'ನನ್ನಿಂದ ಸಾಧ್ಯವಿಲ್ಲ' ಎಂದು ಅಧೀರರಾದರು ಪಾಯಲ್. ಆದರೆ, ಕುಲದೀಪ್ ಪಟ್ಟುಬಿಡಲಿಲ್ಲ. 'ನಾನು ಹೇಳಿದಷ್ಟು ನೀನು ಮಾಡು. ಬೇರೆ ಯಾವ ಚಿಂತೆಯನ್ನೂ ಮಾಡಬೇಡ. ಎಲ್ಲವೂ ಆಗುತ್ತದೆ' ಎಂದು ಧೈರ್ಯ ತುಂಬಿದರು. ಮೊಣಕಾಲಿಗೆ ಅಳವಡಿಸುವಂತಹ ಸಾಧನವೊಂದನ್ನು ಕುಲದೀಪ್ ಅವರೇ ಸಿದ್ಧಗೊಳಿಸಿದರು. ಅದರಿಂದಾಗಿ ಬಿಲ್ಲಿನ ಹಗ್ಗ ಎಳೆದು ಗ್ರಿಪ್ ಮಾಡಲು ಪಾಯಲ್‌ಗೆ ಅನುಕೂಲವಾಯಿತು. ಈ ಛಲಗಾತಿಗೆ 'ಹಿಂದೆ ಗುರು, ಮುಂದೆ ಗುರಿ' ಎರಡೂ ಲಭಿಸಿದವು.

2024ರಲ್ಲಿ ರಾಷ್ಟ್ರೀಯ ಟೂರ್ನಿಯಲ್ಲಿ ಶೀತಲ್ ದೇವಿ ಅವರನ್ನು ಹಿಂದಿಕ್ಕಿದ ಪಾಯಲ್ ಚಿನ್ನ ಗೆದ್ದರು. ನಂತರದಲ್ಲಿ, ಎರಡೂ ಕಾಲುಗಳನ್ನು ಬಳಸಿ ಬಾಣ ಪ್ರಯೋಗ ಮಾಡುವಂತಿಲ್ಲ ಎಂಬ ನಿಯಮವನ್ನು ವಿಶ್ವ ಆರ್ಚರಿ ಫೆಡರೇಷನ್ ಜಾರಿಗೊಳಿಸಿತು. ಅದರಿಂದಾಗಿ ಪಾಯಲ್ ಅವರು ಆರ್ಚರಿ ತ್ಯಜಿಸಬೇಕಾದ ಆತಂಕ ಮೂಡಿತ್ತು. ಆಗಲೂ ಗುರು ಬೆಂಬಲಕ್ಕೆ ನಿಂತರು. 'ಒಂದೇ ಕಾಲಿನಿಂದ ಬಿಲ್ಲು–ಬಾಣ ಪ್ರಯೋಗ ಕಲಿಸುವೆ. ನಿಯಮದಲ್ಲಿ ಒಂದೇ ಕಾಲು ಬಳಸಲು ಅವಕಾಶ ಇದೆ' ಎಂದರು. ಅದರಂತೆಯೇ ತರಬೇತಿ ನೀಡಿದರು. ಆ ತರಬೇತಿ ಈಗ ಫಲಿಸಿದೆ.

ಪಾಯಲ್ ಅವರ ಅಕ್ಕ ವರ್ಷಾ ಕೂಡ ಬಿಲ್ಲುಗಾರ್ತಿ. ಸಾಮಾನ್ಯ ವರ್ಗದ ಮಹಿಳೆಯರ ವಿಭಾಗದಲ್ಲಿ ಆರ್ಚರಿ ತರಬೇತಿ ಪಡೆಯುತ್ತಿದ್ದಾರೆ. ಬೆಳಗ್ಗೆ ತಂಗಿಯ ಹಲ್ಲುಜ್ಜುವುದರಿಂದ, ರಾತ್ರಿ ಮಲಗಿಸುವವರೆಗೂ ಪಾಯಲ್ ಅವರ ಎಲ್ಲ ದೇಖರೇಕಿ ಅಕ್ಕನದೇ. ಈ ಸೋದರಿಯರ ಬೆಂಬಲಕ್ಕೆ ಮಹಿಳಾ ಕೋಚ್ ಅಭಿಲಾಷಾ ಮತ್ತು ಸಿಬ್ಬಂದಿ ನಿಂತಿದ್ದಾರೆ.

ಪಾಯಲ್ ಅವರ ಸಾಧನೆಯಿಂದಾಗಿ ಈಗ ಆರ್ಥಿಕ ನೆರವು ಹರಿದುಬರುತ್ತಿದೆ. ಅದರಲ್ಲಿ ಅವರ ತರಬೇತಿ ಮತ್ತು ಜೀವನ ಸಾಗುತ್ತಿದೆ. ಮನೆಗೆ ಹೊರೆಯಾಗುತ್ತಾಳೆ ಎಂಬ ಆತಂಕ ಮೂಡಿಸಿದ್ದ ಹುಡುಗಿ ಈಗ ಕುಟುಂಬದ ಬೆಳಕಾಗಿದ್ದಾಳೆ.

ಪ್ಯಾರಾ ಆರ್ಚರಿಯಲ್ಲಿ ಶೀತಲ್ ಹಾಗೂ ಪಾಯಲ್ ಭಾರತದ ಕಣ್ಣುಗಳು. ಈ ಅಪೂರ್ವ ಜೋಡಿ ಮುಂದಿನ ಪ್ಯಾರಾಲಿಂಪಿಕ್ಸ್‌ನಲ್ಲಿ ಚಿನ್ನಕ್ಕೆ ಗುರಿಯಿಟ್ಟಿದೆ. 'ಬೇರು ಬಿಟ್ಟು ನಿಲ್ಲೋಕೆ ಬೇಕೊಂದು ನೆಲ; ಎಲ್ಲಾ ತಿದ್ದಿ ಬರೆಯೋಕೆ ಸಾಕೊಂದು ಛಲ' ಎಂಬ ಕವಿನುಡಿಯಂತೆ, ಸಾಧನೆಯ ಹಾದಿಯಲ್ಲಿ ಅವರು ಮುನ್ನುಗ್ಗುತ್ತಿದ್ದಾರೆ.

ಪಾಯಲ್ ಹಾಗೂ ಶೀತಲ್ ದೇವಿ ಅಂಗವಿಕಲರಾದರೂ, ತಮ್ಮ ಅಂಗವೈಕಲ್ಯವನ್ನು ಸಾಧನೆಯಿಂದ ಮೀರಿ ನಿಂತರು. ಈ ಇಬ್ಬರ ಯಶಸ್ಸಿನಲ್ಲಿ ಅವರ ಗುರು ಕುಲದೀಪ್ ಅವರ ಪರಿಶ್ರಮವೂ ಇದೆ. ದ್ರೋಣಾಚಾರ್ಯರ ಕಥೆಯ 'ಮಹಾಭಾರತ' ಮಹಾಕಾವ್ಯದ ದೇಶದಲ್ಲಿ, ದ್ರೋಣರ ಭಿನ್ನ ಆವೃತ್ತಿಯಂತೆ ಕುಲದೀಪ್ ಕಾಣಿಸುತ್ತಿದ್ದಾರೆ. ಒಬ್ಬ ಗುರು ಬೆರಳನ್ನು ದಕ್ಷಿಣೆ ಪಡೆದ. ಈ ಕಾಲದ ಗುರು, ಬೆರಳುಗಳಿರಲಿ, ಕೈಗಳೇ ಇಲ್ಲದವರಿಗೆ ಬಿಲ್ವಿದ್ಯೆಯನ್ನು ಧಾರೆಯೆರೆದರು. ಈ ಸಾಧನೆಯ ಕಥನ, ಮಹಾಭಾರತದ ಆಧುನಿಕ ಆವೃತ್ತಿಯಂತೆ ಕಾಣಿಸುವುದಿಲ್ಲವೇ? ಉತ್ತಮ ಗುರು ಹಾಗೂ ಗುರಿ ಎಲ್ಲರಿಗೂ ದೊರೆಯುವುದು ಅಪರೂಪ.



ವಾಚಕರ ವಾಣಿ

ಪ್ರಧಾನಿಯ ಸಂಕಟ ಭಾಷಣದ ಪ್ರಹಸನ

ಸಂವಿಧಾನ ತಿದ್ದುಪಡಿ ಮಸೂದೆಗೆ ಸಂಸತ್‌ನಲ್ಲಿ ಸೋಲಾದ ಬಳಿಕ ದೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿಯವರು ಮಹಿಳೆಯರ ಕ್ಷಮೆ ಕೋರಿದ್ದು ವಿಚಿತ್ರವೆನಿಸಿತು. ಬಹುಶಃ ಇತ್ತೀಚಿನ ದಿನಗಳಲ್ಲಿ ಒಂದು ಮಸೂದೆಯನ್ನು ಸಂಸತ್‌ನಲ್ಲಿ ಚರ್ಚೆಗೊಳಪಡಿಸಿದ್ದು ಇದೊಂದೇ ಇರಬೇಕು. ಮಧ್ಯಾಹ್ನ ಮಸೂದೆ ಮಂಡಿಸಿ, ಸಂಜೆಯೊಳಗೆ ಪಾಸ್ ಮಾಡಿಸಿ, ಮಧ್ಯರಾತ್ರಿ ರಾಷ್ಟ್ರಪತಿಯಿಂದ ಒಪ್ಪಿಗೆ ಪಡೆದ ಉದಾಹರಣೆ ಬೇಕಾದಷ್ಟಿವೆ. ಚರ್ಚೆಗೆ ಅವಕಾಶ ಸಿಕ್ಕಿದಾಗ ಮಸೂದೆಗೆ ಸೋಲಾಯಿತು; ಕೇಂದ್ರದ ನಿಜ ಉದ್ದೇಶವೂ ಬಯಲಾಯಿತು. 'ಮನರೇಗಾ' ಸ್ಥಗಿತದಿಂದಾಗಿ ಮಹಿಳೆಯರು ಮಕ್ಕಳನ್ನು ಕಟ್ಟಿಕೊಂಡು ಕೆಲಸಕ್ಕಾಗಿ ವಲಸೆ ಹೋಗುತ್ತಿದ್ದಾರೆ. ರಾತ್ರೋರಾತ್ರಿ ಪಾಸಾದ 'ವಿಬಿ–ಜಿ ರಾಮ್ ಜಿ' ಕಾನೂನಿನಿಂದ ತಮ್ಮೂರಿನ ಸುರಕ್ಷಿತ ವಾತಾವರಣದಲ್ಲಿ ಉದ್ಯೋಗ ಕಳೆದುಕೊಂಡ ಆ ಮಹಿಳೆಯರ ಕ್ಷಮೆಯನ್ನೂ ಪ್ರಧಾನಿ ಕೇಳಬೇಕಲ್ಲವೇ?

ಶಾರದಾ ಗೋಪಾಲ, ಧಾರವಾಡ

ಬಡ ಕಾರ್ಮಿಕರ ಜೀವಗಳಿಗೆ ಬೆಲೆ ಇಲ್ಲವೆ?

ತಮಿಳುನಾಡಿನ ಕಟ್ಟನಾರಪಟ್ಟಿ ಪ್ರದೇಶದ ಪಟಾಕಿ ಕಾರ್ಖಾನೆಯಲ್ಲಿನ ಸ್ಫೋಟಕ್ಕೆ 23ಕ್ಕೂ ಹೆಚ್ಚು ಕಾರ್ಮಿಕರು ಬಲಿಯಾಗಿದ್ದಾರೆ. ಈ ಸುದ್ದಿ ನಮಗೆ ಹೊಸತಲ್ಲ, ಪ್ರತಿವರ್ಷದ್ದು. ಬಹುತೇಕ ಪಟಾಕಿ ತಯಾರಿಕಾ ಕಾರ್ಖಾನೆಗಳು ತಮಿಳುನಾಡಿನಲ್ಲಿ ಇವೆ. ದೇಶದಲ್ಲಿ ಯಾವುದೇ ವಿದ್ಯಮಾನಗಳನ್ನು ಮೊಟ್ಟಮೊದಲು ಪ್ರತಿಭಟಿಸುವವರು ಈ ರಾಜ್ಯದವರೇ. ಪ್ರತಿವರ್ಷವೂ ಬಲಿಯಾಗುತ್ತಿರುವ ತಮ್ಮವರೇ ಆದ ಬಡವರಿಗಾಗಿ ಈ ಜನರೇಕೆ ಪ್ರತಿಭಟಿಸುತ್ತಿಲ್ಲ? ನಾವೂ ಏಕೆ ಪ್ರತಿಭಟಿಸಬಾರದು? ಬಡವರ, ದಲಿತರ, ಮಹಿಳೆಯರ ಮತ್ತು ಮಕ್ಕಳ ಜೀವಕ್ಕೆ ಬೆಲೆ ಇಲ್ಲವೆಂದೆ? ನಮ್ಮೆಲ್ಲರ ಈ ನಿರ್ಲಕ್ಷ್ಯವು ಕ್ರೂರ ಹಾಗೂ ಅಕ್ಷಮ್ಯವಾದುದು.

ಮಾಲತಿ ಪಟ್ಟಣಶೆಟ್ಟಿ, ಧಾರವಾಡ

ಕೇಂದ್ರ ಸಂಪುಟ: ಮೀಸಲು ಏಕಿಲ್ಲ?

ಸಂವಿಧಾನ ತಿದ್ದುಪಡಿ ಮಸೂದೆಗೆ ಸೋಲಾಗಲಿದೆ ಎಂಬ ಅರಿವಿದ್ದರೂ ಕೇಂದ್ರ ಸರ್ಕಾರವು ಅದನ್ನು ಸಂಸತ್‌ನಲ್ಲಿ ಮಂಡಿಸಿತು. ಈ ಸೋಲಿಗೆ ವಿರೋಧ ಪಕ್ಷದವರೇ ಕಾರಣವೆಂದು ದೂರುತ್ತಿದೆ. ನರೇಂದ್ರ ಮೋದಿ ಮುಂದಾಳತ್ವದ ಸಚಿವ ಸಂಪುಟದಲ್ಲಿ 71 ಸಚಿವರಿದ್ದಾರೆ. ಈ ಪೈಕಿ ಏಳು ಮಹಿಳೆಯರಿಗಷ್ಟೆ ಸಚಿವ ಸ್ಥಾನ ನೀಡಲಾಗಿದೆ. ಸಂಪುಟದಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮೂಲಕ ಬಿಜೆಪಿಯು, ವಿಪಕ್ಷಗಳಿಗೆ ಮಾದರಿಯಾಗಬೇಕಿದೆ. ಮತ್ತೊಂದೆಡೆ, ಶಬರಿಮಲೆಯ ಅಯ್ಯಪ್ಪಸ್ವಾಮಿ ದೇವಾಲಯಕ್ಕೆ ಮಹಿಳೆಯರು ಪ್ರವೇಶಿಸುವುದನ್ನು ತಾನು ಒಪ್ಪುವುದಿಲ್ಲವೆಂದು ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರ ಅರ್ಜಿ ಸಲ್ಲಿಸಿದೆ. ಈಗ ವಿಪಕ್ಷದವರ ಮೇಲೆ ವಿನಾಕಾರಣ ಬೊಬ್ಬೆ ಹಾಕುತ್ತಿರುವುದನ್ನು ನೋಡಿದರೆ ಅದರ ನಡೆಯು 'ತಾನು ಕಳ್ಳ, ಪರರ ನಂಬ' ಎಂಬಂತಿದೆ.

ಟಿ. ಉಮಾ ಶಂಕರ್, ಬೆಂಗಳೂರು

ಬಾನುಲಿ ಸುದ್ದಿ ವಿಭಾಗ ಸ್ಥಳಾಂತರ ಬೇಡ

ಧಾರವಾಡ ಆಕಾಶವಾಣಿಯ ಪ್ರಾದೇಶಿಕ ಸುದ್ದಿ ವಿಭಾಗವನ್ನು ಮೇ 15ರಿಂದ ಬೆಂಗಳೂರಿಗೆ ತಾತ್ಕಾಲಿಕವಾಗಿ ಸ್ಥಳಾಂತರಿಸಲು ದೆಹಲಿಯ ಪ್ರಸಾರ ಭಾರತಿ ನಿರ್ಧರಿಸಿದೆ. ಇದು ಉತ್ತರ ಕರ್ನಾಟಕದವರಿಗೆ ಆಘಾತ ತಂದಿದೆ. ಕಳೆದ 44 ವರ್ಷಗಳಿಂದ ಜನಪ್ರಿಯವಾಗಿರುವ ಬೆಳಗಿನ 7:05ರ ಪ್ರದೇಶ ಸಮಾಚಾರವು ಕಲ್ಯಾಣ ಹಾಗೂ ಕಿತ್ತೂರು ಕರ್ನಾಟಕ ಭಾಗದ ಜನನಾಡಿ ಆಗಿದೆ. ಆದಾಯದ ದೃಷ್ಟಿಯಿಂದಲೂ ಈ ವಿಭಾಗ ಉತ್ತಮ ಕೊಡುಗೆ ನೀಡುತ್ತಿದೆ. ಇದನ್ನು ಕಸಿದು ಬೆಂಗಳೂರಿಗೆ ಸ್ಥಳಾಂತರಿಸಿದರೆ ಪ್ರಾದೇಶಿಕ ಸೊಗಡು, ವಿಷಯ ವೈವಿಧ್ಯಕ್ಕೆ ಧಕ್ಕೆಯಾಗಲಿದೆ. ತಾತ್ಕಾಲಿಕವಾಗಿ ಸ್ಥಳಾಂತರಿಸುವ ನಿರ್ಧಾರದ ಹಿಂದೆ ಧಾರವಾಡ ಕೇಂದ್ರವನ್ನು ಮುಚ್ಚುವ ಹುನ್ನಾರದ ವಾಸನೆಯೂ ಬಡಿಯುತ್ತಿದೆ.

ರವೀಂದ್ರ ಆಕಳವಾಡಿ, ಉದಯ ಮ. ಯಂಡಿಗೇರಿ, ಧಾರವಾಡ

ಸುಭದ್ರ ಪ್ರಾದೇಶಿಕ ಪಕ್ಷ ಗಗನಕುಸುಮ

'ಬಿಜೆಪಿ ಜತೆ ಮೈತ್ರಿಯಷ್ಟೇ, ಸಿದ್ಧಾಂತದಲ್ಲಿ ರಾಜಿ ಇಲ್ಲ. ಜೆಡಿಎಸ್ ಜಾತ್ಯತೀತ ಪಕ್ಷವಾಗಿ ಉಳಿಯಲಿದೆ' ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ. ಈ ಮಾತು 'ಅಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ' ಎಂಬ ಗಾದೆಯನ್ನು ಹೋಲುತ್ತಿದೆಯಾದರೂ, ಮೈತ್ರಿಯಲ್ಲಿನ ಅಸಮಾಧಾನದ ಹೊಗೆ ಹೊರಸೂಸುವಂತಿದೆ. ಕರ್ನಾಟಕಕ್ಕೆ ತನ್ನದೇ ಆದ ಪ್ರಾದೇಶಿಕ ಪಕ್ಷ ಇಲ್ಲದಿರುವುದು ಕನ್ನಡಿಗರ ಅನಿಷ್ಟಗಳಿಗೆ ಕಾರಣ. ಜೆಡಿಎಸ್ ಆ ಕೊರತೆ ತುಂಬಬಹುದೆಂಬ ನಿರೀಕ್ಷೆ ಇತ್ತು. ಈಗಲಾದರೂ ಜೆಡಿಎಸ್ ತನ್ನ ಹೆಸರಿಗೆ ಅನ್ವರ್ಥ ಎನ್ನುವಂತೆ ಅಪವಿತ್ರ ಮೈತ್ರಿ ಕಳಚಿಕೊಂಡು ಜಾತ್ಯತೀತವೂ, ಸುಭದ್ರ ಪ್ರಾದೇಶಿಕ ಪಕ್ಷವೂ ಆಗಿ ಹೊರಹೊಮ್ಮುವುದೆಂದು ಕನ್ನಡಿಗರು ಎದುರುನೋಡಬಹುದೆ?


ಪು.ಸೂ. ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಭೂಮಿ–ಮೋಜಣಿ ತಂತ್ರಾಂಶ ದೋಷ

'11ಇ' ವಹಿವಾಟು ಪೂರ್ವ ನಕ್ಷೆಯಾಗಿದೆ. ಇದರಡಿ ವಿವಿಧ ವಹಿವಾಟು ನೋಂದಣಿಯಾದ ಬಳಿಕ ಸ್ವಯಂಚಾಲಿತವಾಗಿ ಮ್ಯೂಟೇಶನ್ ಮತ್ತು ಪಹಣಿಯಲ್ಲಿ ಖಾತೆ ಬದಲಾವಣೆಯಾಗುತ್ತದೆ. ಆದರೆ, ಹಕ್ಕು ಬದಲಾವಣೆಯ ಬಳಿಕವೂ ಪಹಣಿಯಲ್ಲಿ ಬಹುಮಾಲೀಕತ್ವ ಮುಂದುವರಿಯುತ್ತಿದೆ. ಕಾಲಮಿತಿಯೊಳಗೆ ಪಹಣಿ ಏನೋ ಕಾಲೋಚಿತಗೊಳ್ಳುತ್ತಿದೆ. ಆದರೆ, ಭೂಮಾಪನ ಇಲಾಖೆಯಲ್ಲಿ ಐಎಂಪಿಯಾಗಿ ಹೊಸ ಹಿಸ್ಸಾ ನಂಬರ್ ಸೃಜನೆ ಮತ್ತು ತಾಲ್ಲೂಕು ಭೂ ಮಾಪನ ಇಲಾಖೆಯ ಸಹಾಯಕರು ನಮೂನೆ 10ಕ್ಕೆ ಅನುಮೋದನೆ ನೀಡಿದರೂ ಅದು 'ಭೂಮಿ' ತಂತ್ರಾಂಶದಲ್ಲಿ ಸಂಯೋಜನೆಗೊಂಡು ಹೊಸ ಹಿಸ್ಸಾ ನಂಬರಿನೊಂದಿಗೆ ಪಹಣಿ ಸೃಜನೆಯಾಗುತ್ತಿಲ್ಲ. ಇದು 'ಭೂಮಿ' ಮತ್ತು ಮೋಜಣಿ ತಂತ್ರಾಂಶದ ತಾಂತ್ರಿಕ ಸಂಯೋಜನೆಯ ದೋಷವೆಂದು ಹೇಳಲಾಗುತ್ತಿದೆ. ಫೆಬ್ರುವರಿಯಿಂದ ಈ ಸಮಸ್ಯೆ ಎದುರಾಗಿದೆ. ಕಂದಾಯ ಸಚಿವರು ಇದನ್ನು ಬಗೆಹರಿಸಲು ಕ್ರಮವಹಿಸಬೇಕಿದೆ.

ಲಕ್ಷ್ಮೀಕಾಂತರಾಜು ಎಂ.ಜಿ., ಗುಬ್ಬಿ

ಚುರುಮುರಿ



ಜಲಸಂಧಿ

• ಡಿ.ಎಸ್. ಲಿಂಗರಾಜು

'**ಮೋದೀಜಿ,** ಟ್ರಂಪು ಸಾಮ್ರಾಟರು ಬರುತ್ತಿದ್ದಾರೆ' ಅಂದ್ರು ಅಮಾತ್ಯರು.

'ಹೌದೇ, ಸ್ವಾಗತಿಸೋಣ ಬನ್ನಿ' ಎಂದು ಮೋದಿ ಮಹಾರಾಜರು ಹೊರಟರು. ಟ್ರಂಪು ಸಾಮ್ರಾಟರು ಬರುವ ಮುನ್ನ ಅವರ ನಿಶಾನೆ, ಧ್ವಜ, ಪತಾಕೆ, ಛತ್ರಿ, ಚಾಮರ, ಲಾಂಛನಗಳು ಜರ್ಬಿನಿಂದ ಬಂದವು. ಸಾಮ್ರಾಟರ ಅಕ್ಕಪಕ್ಕದಲ್ಲಿ ಬರುತ್ತಿದ್ದ ಬೊಗಳುಭಟರು 'ಜಯ ಜಯ ಟ್ರಂಪೇಶ್ವರ' ಅಂತ ಬಹುಪರಾಕ್ ಹಾಕುತ್ತಿದ್ದರು.

'ಸಾಮ್ರಾಟರೇ ಹೇಗಿದ್ದೀರಿ? ತಮ್ಮ ಆಗಮನ ನಮಗೆ ಸಂತಸ ತಂದಿದೆ' ಎಂದು ಮೋದಿ ಕೈಕುಲುಕಿ ಸ್ವಾಗತಿಸಿದರು.

'ಹೌಡೀ ಮೋಡೀಜಿ. ನನಗೆ ಶಾಂತಿ ಬೇಕು. ಹೊರ್ಮುಜ್ ಜಲಸಂಧೀಲಿ ಇಕ್ಕಟ್ಟಾಗಿ ಸೆಕೇಲಿ ಬೇಯ್ತಾ ಇವ್ನಿ. ಸುಮ್ಮನೆ ಇರಾಣ ಅಂದ್ರೆ ಆಯ್ತಾನೇ ಇಲ್ಲ' ಸಾಮ್ರಾಟರು ಬೆವರು ಒರೆಸಿಕೊಂಡರು. ಸಾಮ್ರಾಟರ ಜೊತೆಗೆ ಬಂದಿದ್ದ ಅವರ ಇಂಪ್ಯಾಕ್ಟ್ ಪ್ಲೇಯರುಗಳು ಬಂದು ಬಂದು ಸಾಮ್ರಾಟರ ಕಿವಿ ಕಚ್ಚತಿದ್ರು. ಇದ ಕಂಡು ಮೋದಿ ಚಟಾಕಿ ಹಾರಿಸಿದರು.

'ಸಾಮ್ರಾಟರೇ ನಿಮ್ಮ ಇಂಪ್ಯಾಕ್ಟ್ ಪ್ಲೇಯರುಗಳ ಮಾತು ಕೇಳಿಕ್ಯಂದು ಕೊಲ್ಲಿಗೆ ಹೋಗಿ ಕೊಲ್ಲಿ ಮನೆ ಮೂರಾಬಟ್ಟೆ ಮಾಡಿ ಇರಾನಿ ಮೆಟರೆ ಅಮಿಕ್ಯಂದಿದ್ದೀರಿ. ನಿಮ್ಮ ಕೆತ್ತೆಬಜೆಯಿಂದ ದೇಸದೇಸಗಳ ಜನವೆಲ್ಲಾ ಗ್ಯಾಸ್ ಟ್ರಬಲ್ಲಿಂದ ನರಳ್ತಾವೆ' ಅಂತ ಮೋದಿ ಸಿಡಿದರು.

'ಮೋಡೀಜಿ, ರಷ್ಯಾದಿಂದ ನೀವು ಎಣ್ಣೆ ತಕ್ಕಬೈದು ಅಂತ ಪರ್ಮಿಶನ್ ಕೊಟ್ಟುದವಿ. ಇನ್ನೇನಾಗಬೇಕು?' ಟ್ರಂಪು ಸಾಮ್ರಾಟರು ಅಲವತ್ತುಕೊಂಡರು.

'ಅಲ್ಲಾ ಸಾಮ್ರಾಟರೇ, ರಷ್ಯಾದಿಂದ ಎಣ್ಣೆ ತಕ್ಕಳಿ ಅಂತ ಅನುಮತಿ ಕೊಡಕ್ಕೆ ತಾವು ಯಾರು? ನೀವು ಮಾತ್ರ ತರಾವರಿ ಅಟಂಬಾಬು, ಬತ್ತೀಸು ಆಯುಧ ಮಡಿಕಂದು ಹೇಳಿದಂಗೆ ಕೇಳದಿದ್ದರೆ ಟ್ಯಾಕ್ಸಾಕ್ತೀನಿ ಅಂತ ತೆರಿಗೆ ಭಯೋತ್ಪಾದನೆ ಮಾಡ್ತೀರ. ಈಗ ಸಂಧಿ ಬುಡಸಕ್ಕೋಗಿ ತಾವೇ ಸಂಧೀಲಿ ಸಿಗಾಕ್ಕಂಡಿದ್ದೀರಿ' ಎಂದು ಮೋದಿ ಬೇಜಾರು ಮಾಡಿಕ್ಯಂದರು.

'ನೋಡಿ ಮೋಡೀಜಿ, ನಮ್ಮದು ಯಾವಾಗಲೂ ಆದೇಶಸಂಧಿ. ಎಲ್ಲಾದ್ರೂ ಲೋಪವಾದ್ರೆ ಆಗಮಸಂಧಿ' ಅಂತ ಸಾಮ್ರಾಟರು ಸಂಧಿ ಬಿಡಿಸಿದರು.

ಸಂಗತ

ಕಟ್ಟಡ ನಿರ್ಮಾಣ: ಎಫ್‌ಎಆರ್ ಮಿತಿ ಎಂಬ ತಡೆ

ಬೆಂಗಳೂರಿನ ಬೆಳವಣಿಗೆಯ ಹಿನ್ನೆಲೆಯಲ್ಲಿ ಕಟ್ಟಡ ನಿರ್ಮಾಣ ನಿಯಮಗಳಲ್ಲಿ ಜಿಬಿಎ ಬದಲಾವಣೆ ತಂದಿದೆ. ಆ ಬದಲಾವಣೆಗಳು ಇನ್ನಷ್ಟು ಜನಸ್ನೇಹಿ ಆಗಬೇಕಿದೆ.

• ಆನಂದ್ ಜಿ.

ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ಮಾಡುತ್ತಿರುವ ಬದಲಾವಣೆಗಳು ಸ್ವಾಗತಾರ್ಹ. ಈ ಬದಲಾವಣೆಯ ಮೂಲ ಉದ್ದೇಶ, ಬೆಂಗಳೂರು ನಗರವು ಗಗನಮುಖಿ ಆಗಿಯೂ ಬೆಳೆಯಲು ಅವಕಾಶ ನೀಡಬೇಕೆನ್ನುವುದಾಗಿದೆ.

ಕಟ್ಟಡದ ಸುತ್ತಲೂ ಬಿಡಬೇಕಾದ ಖಾಲಿಜಾಗದ ಪ್ರಮಾಣ (ಸೆಟ್‌ಬ್ಯಾಕ್), ಕಟ್ಟಡದ ಎತ್ತರ, ಮನೆಗಳ ಸಂಖ್ಯೆ ಹಾಗೂ ಅಂತಸ್ತಿನ ವಿಸ್ತೀರ್ಣದ ಅನುಪಾತಕ್ಕೆ (ಎಫ್‌ಎಆರ್) ವಿಧಿಸಿರುವ ಮಿತಿಗಳು ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಿಬಿಎ ಮಾಡಿರುವ ಪ್ರಮುಖ ಬದಲಾವಣೆಗಳಲ್ಲಿ ಸೇರಿವೆ.

2024ರ ಡಿಸೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನಿಂದಾಗಿ ಕಟ್ಟಡಗಳಿಗೆ ಒಳಚರಂಡಿ, ಕುಡಿಯುವ ನೀರು ಹಾಗೂ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಕಟ್ಟಡಗಳು 'ಸಿಸಿ' (ನಿರ್ಮಾಣಾರಂಭ ಪ್ರಮಾಣಪತ್ರ) ಹಾಗೂ 'ಒಸಿ' (ಸ್ವಾಧೀನಾನುಭವ ಪತ್ರ) ಪಡೆಯುವುದು ಕಡ್ಡಾಯ ಎನ್ನುವ ನಿಯಮ ಕಟ್ಟುನಿಟ್ಟಾಗಿ ಜಾರಿಗೆ ಬಂದಿತು. ಈ ನಿಯಮ ಪಾಲನೆ ಅನುಸಾರ ಅಂದಾಜು 8 ಲಕ್ಷ ಕಟ್ಟಡಗಳಿಗೆ ಮೂಲಸೌಕರ್ಯ ನೀಡಲಾಗಿಲ್ಲ. ನೀರು, ವಿದ್ಯುತ್ ಮೊದಲಾದವುಗಳನ್ನು ಭಾರತದಲ್ಲಿ 'ಜೀವಿಸುವ ಹಕ್ಕು' ಎಂದು ಪರಿಗಣಿಸಲಾಗಿದೆ. ಈಗ ನಿಯಮಗಳ ಹೆಸರಿನಲ್ಲಿ ಮೂಲಸೌಕರ್ಯ ಕಲ್ಪಿಸುವ ಸಂಪರ್ಕಗಳ ನಿರಾಕರಣೆಯಿಂದಾಗಿ ಲಕ್ಷಾಂತರ ಮಂದಿಯನ್ನು ಅತಂತ್ರ ಸ್ಥಿತಿಗೆ ತಳ್ಳಿದಂತಾಗಿದೆ.

ಈ ಬಿಕ್ಕಟ್ಟನ್ನು ಬಗೆಹರಿಸಲು ಸರ್ಕಾರ, ಜಿಬಿಎ ಹಾಗೂ ನಗರ ಯೋಜನಾ ಇಲಾಖೆಗಳು ಹಲವು ಪರಿಹಾರ ಕ್ರಮಗಳನ್ನು ಕೈಗೊಂಡಿವೆ. ಅವುಗಳಲ್ಲಿ, 1,200 ಚ.ಅ.ವರೆಗಿನ (30 X 40 ಅಡಿ) ನಿವೇಶನಗಳಿಗೆ 'ಸಿಸಿ' ಮತ್ತು 'ಒಸಿ' ಅಗತ್ಯವಿಲ್ಲವೆಂಬ ತೀರ್ಮಾನ ಮುಖ್ಯವಾದುದು. ಕಡಿಮೆಗೊಳಿಸಲಾದ ಸೆಟ್‌ಬ್ಯಾಕ್, ಹೆಚ್ಚುವರಿ ಅಂತಸ್ತು ನಿರ್ಮಾಣಕ್ಕೆ ಅನುಮತಿ ಮೊದಲಾದವು ಪರಿಹಾರ ಕ್ರಮಗಳಲ್ಲಿ ಸೇರಿವೆ. ಇದರ ಜೊತೆಗೆ, ನಿರ್ಮಾಣ ವ್ಯತ್ಯಯದ ಪ್ರಮಾಣವನ್ನು ಶೇ 15ಕ್ಕೆ ಏರಿಸುವ ಪ್ರಸ್ತಾವ ಮೂಡಿಬಂದಿದ್ದು, ಅದು ಸಮಸ್ಯೆ ಬಗೆಹರಿಸಲು ಹೇಗೆ ಸೋಲುತ್ತಿದೆ ಎಂಬುದನ್ನು ನೋಡೋಣ.



40X60 ಅಡಿ ನಿವೇಶನದ ವಿಸ್ತೀರ್ಣ 2,400 ಚ.ಅ. ಆಗಿರುತ್ತದೆ. ಅದರಲ್ಲಿ ಪಾರ್ಕಿಂಗ್ ಅಂತಸ್ತಲ್ಲದೆ, ನಾಲ್ಕು ಮಹಡಿ, 6 ಮನೆ (6 ಅಡುಗೆಮನೆ) ಕಟ್ಟುವ ಅವಕಾಶವಿದೆ. ಹೊಸ ನಿಯಮದಂತೆ ಕಟ್ಟಡದ ಎತ್ತರವು, ಸ್ಟಿಲ್ಟ್ ಎತ್ತರ ಬಿಟ್ಟು 39.3 ಅಡಿ ದಾಟುವಂತಿಲ್ಲ. ಮಹಡಿಗಳ ಸಂಖ್ಯೆಯನ್ನು ಹೆಚ್ಚಿಸುವಂತಿಲ್ಲ. ಸುತ್ತಲೂ ಬಿಡಬೇಕಾದ ಖಾಲಿ ಜಾಗದ ವಿಸ್ತೀರ್ಣ 520 ಚ.ಅಡಿಗಳು (ಮುಂದೆ 3.3 ಅಡಿ, ಸುತ್ತಲೂ 2.6 ಅಡಿ). ಅಂದರೆ, ಮನೆ ಕಟ್ಟಲು ಉಳಿಯುವುದು 1,880 ಚ.ಅ. ಜಾಗ. ಆದರೆ, ಎಫ್‌ಎಆರ್ ಮಿತಿ 1.75 ಇದೆ. ಅಂದರೆ, ನಾಲ್ಕು ಅಂತಸ್ತು ಸೇರಿ (2,400 x 1.75) 4,200 ಚ.ಅ. ವಿಸ್ತೀರ್ಣ. ಪ್ರತಿ ಅಂತಸ್ತಿನ ವಿಸ್ತೀರ್ಣ 1,050 ಚ.ಅ. ಮಾತ್ರ. ಪ್ರತಿ ಅಂತಸ್ತಿನ ಲಿಫ್ಟ್ ಹಾಗೂ ಮೆಟ್ಟಿಲುಗಳ ವಿಸ್ತೀರ್ಣ 200 ಚ.ಅ. ಆಗುತ್ತದೆ. ಸೆಟ್‌ಬ್ಯಾಕ್, ಎತ್ತರ, ಅಡುಗೆಮನೆಗಳ ಸಂಖ್ಯೆ ಹಾಗೂ ಅಂತಸ್ತುಗಳ ಸಂಖ್ಯೆ ಎಲ್ಲವೂ ಮಿತಿಯೊಳಗೇ ಇದ್ದರೂ ಪ್ರತಿ ಅಂತಸ್ತಿನಲ್ಲಿ 830 ಚ.ಅ.ಗಳಷ್ಟು ಆಕಾಶಕ್ಕೆ ತೆರೆದುಕೊಂಡ ಖಾಲಿ ಜಾಗ ಬಿಡಲೇಬೇಕು.

ಕಟ್ಟಡದಲ್ಲಿನ ಜನದಟ್ಟಣೆ ತಡೆಯುವ ಉದ್ದೇಶಕ್ಕಾಗಿ ಎಫ್‌ಎಆರ್ ಮಿತಿಯ ನಿಯಮ ಇದೆ. ಯಾವುದೋ ಲೆಕ್ಕಾಚಾರದಲ್ಲಿ, ನಿರ್ದಿಷ್ಟ ವಿಸ್ತೀರ್ಣದ ಮನೆಯಲ್ಲಿ ಇಷ್ಟು ಮಂದಿ ವಾಸಿಸುತ್ತಾರೆ ಎಂದು ತೀರ್ಮಾನ ಮಾಡಲಾಗಿದ್ದು, ಅದರಂತೆ ಎಫ್‌ಎಆರ್ ಮಿತಿ ಗೊತ್ತುಮಾಡಲಾಗಿದೆ.

ವಾಸ್ತವದಲ್ಲಿ, ಎಫ್‌ಎಆರ್‌ಗೆ ವಿಧಿಸಿರುವ ಮಿತಿಯಿಂದ ತಲಾವಾರು ವಾಸಸ್ಥಳದ ವಿಸ್ತೀರ್ಣವು ಕಡಿಮೆಯಾಗುತ್ತಿದೆ. ಒಂದು ಕಟ್ಟಡದಲ್ಲಿನ ಜನದಟ್ಟಣೆ ಅಲ್ಲಿ ಎಷ್ಟು ಜನರು ಇದ್ದಾರೆಂಬುದೇ ಆಗಿದ್ದರೂ, ಅದನ್ನು ಅಳೆಯುವ ಸೂಕ್ತ ಸಾಧನವೆಂದರೆ, ಅಲ್ಲಿ ಎಷ್ಟು ಕುಟುಂಬಗಳು ವಾಸಿಸುತ್ತಿವೆ ಎನ್ನುವುದೇ ಆಗಿದೆ.

ಒಮ್ಮೆ ಸೆಟ್‌ಬ್ಯಾಕ್, ಅಡುಗೆಮನೆಗಳ ಸಂಖ್ಯೆ, ಅಂತಸ್ತುಗಳ ಸಂಖ್ಯೆ, ಎತ್ತರದ ಮಿತಿಯನ್ನು ಗೊತ್ತುಪಡಿಸಿದ ಮೇಲೆ ಎಫ್‌ಎಆರ್ ಮಾನದಂಡವನ್ನು ಅನ್ವಯಿಸಿಬಿಟ್ಟರೆ, ಕಟ್ಟಡ ಕಟ್ಟುವವರಿಗೆ ಯಾವ ಬಗೆಯ ಅನುಕೂಲವೂ ಆಗದು.

ಇತ್ತೀಚಿನ ಮತ್ತೊಂದು ಜನೋಪಕಾರಿ ನಿಲುವು ಎಂದರೆ, ಕಟ್ಟಡ ನಿರ್ಮಾಣ ವ್ಯತ್ಯಯದ ಪ್ರಮಾಣಕ್ಕೆ ಇದುವರೆಗೆ ಇದ್ದ ಶೇ 5ರ ಮಿತಿಯನ್ನು ಶೇ 15ರವರೆಗೆ ಏರಿಸುವ ಪ್ರಸ್ತಾವ. ಇದಕ್ಕೆ ಸಾರ್ವಜನಿಕರಿಂದ ಸಲಹೆಗಳನ್ನು ಕೇಳಲಾಗಿದೆ. ಈ ರಿಯಾಯಿತಿ ಜಾರಿಗೆ ಬಂದರೂ ಎಫ್‌ಎಆರ್ ಮಿತಿಯನ್ನು ಸಡಿಲಿಸದಿದ್ದರೆ ಜನರಿಗೆ ಅನುಕೂಲವಾಗುವುದಿಲ್ಲ.

ವಾಣಿಜ್ಯ ಉದ್ದೇಶವಿಲ್ಲದ 40X60 ವಿಸ್ತೀರ್ಣದವರೆಗಿನ ನಿವೇಶನಗಳವರೆಗೆ ಎಫ್‌ಎಆರ್ ಮಾನದಂಡವನ್ನು ಸರ್ಕಾರ ಕೈಬಿಡುವುದು ಸೂಕ್ತ. ಇದರಿಂದಾಗಿ ಸ್ವಂತ ಮನೆಯ ಕನಸು ಕಾಣುತ್ತ, ಕಠಿಣ ಶ್ರಮದಿಂದ ಹಗಲಿರುಳು ದುಡಿದ ದುಡಿಮೆಯನ್ನು ಬಳಸಿಕೊಂಡು ನ್ಯಾಯಯುತವಾಗಿ ಮನೆ ಕಟ್ಟಿಕೊಳ್ಳುವ ಎಲ್ಲ ಬಡ, ಮಧ್ಯಮ ವರ್ಗದವರಿಗೆ ನಿಜವಾದ ಅನುಕೂಲವಾಗುತ್ತದೆ.

ಜಿಬಿಎ ತಂದಿರುವ ನಿಯಮಗಳು ರಾಜಧಾನಿಯ ಬೆಳವಣಿಗೆಗೆ ಪೂರಕವಾಗಿದ್ದರೂ, ಅವು ನಾಗರಿಕಸ್ನೇಹಿ ಆಗಿರದೆ ಇದ್ದಲ್ಲಿ ಗೊಂದಲಗಳನ್ನು, ಜನಸಾಮಾನ್ಯರಿಗೆ ತೊಂದರೆಯನ್ನು ಸೃಷ್ಟಿಸುತ್ತವೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇಂಧನ, ಅನಿಲ ಮತ್ತು ಸರಕು ಸಾಗಣೆಯಲ್ಲಿ ಹಲವು ಜಲಮಾರ್ಗಗಳು ನಿರ್ಣಾಯಕ

ಜಲಸಂಧಿ: ಜಾಗತಿಕ ವ್ಯಾಪಾರದ ಕೊಂಡಿ



ಪ್ರಜಾವಾಣಿ ವಾರ್ತೆ

ಪಶ್ಚಿಮ ಏಷ್ಯಾದಲ್ಲಿ ಅಮೆರಿಕ–ಇಸ್ರೇಲ್ ಹಾಗೂ ಇರಾನ್ ನಡುವಿನ ಸಂಘರ್ಷದಲ್ಲಿ ಸದ್ಯ ಹೊರ್ಮುಜ್ ಜಲಸಂಧಿ ಬಿಕ್ಕಟ್ಟಿನ ಮೂಲವಾಗಿದೆ. ಜಾಗತಿಕ ವ್ಯಾಪಾರದ ಪ್ರಮುಖ ಮಾರ್ಗವಾಗಿರುವ ಹೊರ್ಮುಜ್ ಜಲಸಂಧಿ ಭಾರತ ಹಾಗೂ ಪೂರ್ವ ಏಷ್ಯಾದ ಹಲವು ರಾಷ್ಟ್ರಗಳಿಗೆ ತೈಲ, ಅನಿಲ ಹಾಗೂ ಇನ್ನಿತರ ಸರಕು ಸಾಗಣೆ ಮಾಡುವ ಪ್ರಮುಖ ದಾರಿ. ಹೊರ್ಮುಜ್‌ನಲ್ಲಿ ಹಡಗುಗಳ ಸಂಚಾರಕ್ಕೆ ಅವಕಾಶ ನೀಡುವ ವಿಚಾರವಾಗಿ ಅಮೆರಿಕ ಮತ್ತು ಇರಾನ್ ನಡುವೆ ಈಗ ಘರ್ಷಣೆ ನಡೆಯುತ್ತಿದೆ.

ಎರಡು ಭೂಭಾಗಗಳ ನಡುವೆ ಇರುವ ಜಲಸಂಧಿಗಳು ನೈಸರ್ಗಿಕ ಜಲಮಾರ್ಗಗಳು. ವ್ಯಾಪಾರ, ರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಇವು ಜಾಗತಿಕ ಮಟ್ಟದಲ್ಲಿ ನಿರ್ಣಾಯಕ ಪಾತ್ರವಹಿಸುತ್ತವೆ. ಸಾಮಾನ್ಯವಾಗಿ ಈ ಜಲಮಾರ್ಗಗಳ ಮೇಲೆ ಅವುಗಳಿಗೆ ಹೊಂದಿಕೊಂಡಿರುವ ದೇಶಗಳು ನಿಯಂತ್ರಣ ಸಾಧಿಸುತ್ತಿರುತ್ತವೆ. ಜಲಸಂಧಿಗಳಲ್ಲಿ ಸರಕು ಸಾಗಣೆಗೆ ಅಡ್ಡಿ ಉಂಟಾದರೆ, ಅದು ಜಾಗತಿಕ ವ್ಯಾಪಾರ, ಮಾರುಕಟ್ಟೆ, ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತದೆ.

ಸರಕು ಸಾಗಣೆಗೆ ಅನುಕೂಲವಾಗುವಂತೆ ಕೆಲವು ಕಡೆಗಳಲ್ಲಿ ಮಾನವ ನಿರ್ಮಿತ ಜಲಮಾರ್ಗಗಳೂ ಇವೆ. ಇವುಗಳನ್ನು ಸಾಮಾನ್ಯವಾಗಿ ಕಾಲುವೆ ಎಂದು ಕರೆಯಲಾಗುತ್ತದೆ.

ಅಂತಹ ಕೆಲವು ಜಲಸಂಧಿಗಳು ಮತ್ತು ಕಾಲುವೆಗಳ ಪರಿಚಯ ಇಲ್ಲಿದೆ.

1. ಮಲಕ್ಕಾ



ಜಾಗತಿಕ ವ್ಯಾಪಾರ ಮತ್ತು ಸರಕು ಸಾಗಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿರುವ ಈ ಜಲಸಂಧಿಯು ಹಿಂದೂ ಮಹಾಸಾಗರ ಮತ್ತು ಪೆಸಿಫಿಕ್ ಮಹಾಸಾಗರವನ್ನು ಪರಸ್ಪರ ಸಂಪರ್ಕಿಸುತ್ತದೆ. ಮಲೇಷ್ಯಾ ಮತ್ತು ಸುಮಾತ್ರಾ ನಡುವೆ ಈ ನೈಸರ್ಗಿಕ ಜಲಮಾರ್ಗ ಇದೆ. ಜಾಗತಿಕ ವ್ಯಾಪಾರದ ಶೇ 25ರಷ್ಟು ಸರಕು ಈ ಮಾರ್ಗದ ಮೂಲಕ ಸಾಕುತ್ತದೆ. ಸಾಗರದ ಮೂಲಕ ಜಾಗತಿಕವಾಗಿ ಸಾಗಣೆ ಮಾಡಲಾಗುವ ಸರಕಿನಲ್ಲಿ ಶೇ 60ರಷ್ಟು ಈ ಜಲಸಂಧಿ ಮೂಲಕ ಸಾಗುತ್ತದೆ. ಪಶ್ಚಿಮ ಏಷ್ಯಾ ಸೇರಿದಂತೆ ವಿವಿಧ ರಾಷ್ಟ್ರಗಳಿಂದ ಚೀನಾಕ್ಕೆ ಸರಕು ಸಾಗಿಸುವ ಪ್ರಮುಖ ಮಾರ್ಗವೂ ಇದುವೇ. ಅದು ಖರೀದಿಸುವ ಶೇ 80ರಷ್ಟು ತೈಲ ಸಾಗುವುದು ಇದೇ ಮಾರ್ಗದಲ್ಲಿ.

2. ಸಿಂಗಪುರ




ಮಲಕ್ಕಾ ಜಲಸಂಧಿಗೆ ಹೊಂದಿಕೊಂಡಿರುವಂತಹ ಈ ಜಲಮಾರ್ಗವು ಜಾಗತಿಕ ಸರಕು ವ್ಯಾಪಾರದಲ್ಲಿ ನಿರ್ಣಾಯಕ ಪಾತ್ರವಹಿಸುತ್ತದೆ. ಮೂರನೇ ಒಂದರಷ್ಟು ಸರಕು ಈ ಮಾರ್ಗದಲ್ಲಿ ಸಾಗುತ್ತದೆ. ಏಷ್ಯಾದ ಈಶಾನ್ಯ ಭಾಗದ ರಾಷ್ಟ್ರಗಳಿಗೆ ಸರಕು (ಶೇ 80ರಷ್ಟು) ಸಾಗಿಸುವ ಪ್ರಮುಖ ಮಾರ್ಗ ಇದು. ಪ್ರತಿದಿನ 2,000ದಷ್ಟು ಹಡಗುಗಳು ಈ ಜಲಸಂಧಿಯನ್ನು ಬಳಸುತ್ತವೆ.

3. ಸುಂಡಾ




ಜಾವಾ ಮತ್ತು ಸುಮಾತ್ರಾ ದ್ವೀಪ ಸಮೂಹಗಳ ನಡುವೆ ಇರುವ ಜಲಮಾರ್ಗ. ಇದು ಹಿಂದೂ ಮಹಾಸಾಗರವನ್ನು ಜಾವಾ ಸಮುದ್ರ, ದಕ್ಷಿಣ ಚೀನಾ ಸಮುದ್ರ ಮತ್ತು ಪೆಸಿಫಿಕ್ ಸಾಗರವನ್ನು ಸಂಪರ್ಕಿಸುತ್ತದೆ. ತೈಲ ಸೇರಿದಂತೆ ಇತರ ಸರಕುಗಳ ಸಾಗಣೆಗೆ ಈ ಮಾರ್ಗವು ಮಲಕ್ಕಾ ಜಲಸಂಧಿ ಮಾರ್ಗಕ್ಕೆ ಪರ್ಯಾಯವಾಗಿದೆ. ಅಲ್ಲಿ ಹೋಗದ ಹಡಗುಗಳು ಇಲ್ಲಿ ಸಾಗುತ್ತವೆ.

4. ಪಾಕ್



ಹಿಂದೂ ಮಹಾಸಾಗರದಲ್ಲಿ ಭಾರತ ಮತ್ತು ಶ್ರೀಲಂಕಾ ನಡುವೆ ಇರುವ ಈ ಜಲಸಂಧಿ, ಪ್ರಾದೇಶಿಕ ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಭಾರತ–ಶ್ರೀಲಂಕಾದ ನಡುವಿನ ಸರಕು ವ್ಯಾಪಾರ ನಡೆಯುವುದು ಇದೇ ಮಾರ್ಗದದಲ್ಲಿ. ಇದರ ಹೊರತಾಗಿ ಪ್ರವಾಸೋದ್ಯಮ, ಮೀನುಗಾರಿಕೆ ಸೇರಿದಂತೆ ವಿವಿಧ ವಲಯಗಳ ಅಭಿವೃದ್ಧಿಗೂ ಈ ಜಲಮಾರ್ಗ ಕೊಡುಗೆ ನೀಡುತ್ತಿದೆ

5. ಮೊಜಾಂಬಿಕ್



ಹಿಂದೂ ಮಹಾಸಾಗರದಲ್ಲಿನ ಜಲಮಾರ್ಗವಾಗಿದ್ದು, ಮಡಗಾಸ್ಕರ್ ಮತ್ತು ಮೊಜಾಂಬಿಕ್ ನಡುವೆ ಇದೆ. ಪೂರ್ವ ಆಫ್ರಿಕಾಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗ. ದಕ್ಷಿಣ ಆಫ್ರಿಕಾ ರಾಷ್ಟ್ರಗಳ ಪ್ರಮುಖ ವ್ಯಾಪಾರ ಮಾರ್ಗವಾಗಿದ್ದು, ಶೇ 50ರಷ್ಟು ಸರಕುಗಳು ಇಲ್ಲಿ ಸಾಗಣೆಯಾಗುತ್ತವೆ.


6. ಪನಾಮಾ ಕಾಲುವೆ




ಪೆಸಿಫಿಕ್ ಮಹಾಸಾಗರ ಮತ್ತು ಅಟ್ಲಾಂಟಿಕ್ ಸಾಗರವನ್ನು ಸಂಪರ್ಕಿಸುವ ಇದು ಮನುಷ್ಯನಿರ್ಮಿತ ಜಲಮಾರ್ಗವಾಗಿದೆ. ಪನಾಮಾಲ್ಲಿರುವ ಇದು ಜಗತ್ತಿನ ಎಂಜಿನಿಯರಿಂಗ್ ಅದ್ಭುತಗಳಲ್ಲಿ ಒಂದು. ಇದು ವಿಶಿಷ್ಟವಾದ 'ಲಾಕ್ ವ್ಯವಸ್ಥೆ'ಯನ್ನು ಹೊಂದಿದೆ. 1914ರಲ್ಲಿ ಕಾಲುವೆ ಹಡಗು ಸಂಚಾರಕ್ಕೆ ಮುಕ್ತವಾಯಿತು. ಅಮೆರಿಕದ ಹಡಗುಗಳೇ ಶೇ 40ರಷ್ಟು ಇಲ್ಲಿ ಸಂಚರಿಸುತ್ತವೆ. ಅಮೆರಿಕದಿಂದ ಏಷ್ಯಾಕ್ಕೆ ರಫ್ತಾಗುವ ಎಲ್‌ಪಿಜಿ ಪೈಕಿ ಶೇ 95ರಷ್ಟು ಪನಾಮಾ ಕಾಲುವೆಯ ಮೂಲಕವೇ ಸಾಗಣೆಯಾಗುತ್ತದೆ. ದಿನಕ್ಕೆ 20 ಲಕ್ಷದಿಂದ 30 ಲಕ್ಷ ಬ್ಯಾರಲ್ ಇಂಧನವು ಈ ಮಾರ್ಗದ ಮೂಲಕ ಸಾಗಣೆಯಾಗುತ್ತದೆ.

7. ಬಾಸ್ಪೊರಸ್

ಜಗತ್ತಿನ ಅತ್ಯಂತ ಕಿರಿದಾದ ನೈಸರ್ಗಿಕ ಜಲಮಾರ್ಗ ಇದು. ಕಪ್ಪು ಸಮುದ್ರ ಮತ್ತು ಮಾರ್ಮರಾ ಸಮುದ್ರವನ್ನು ಬೆಸೆಯುವ ಈ ಜಲಸಂಧಿ ಟರ್ಕಿ ವ್ಯಾಪ್ತಿಯಲ್ಲಿದೆ. ಏಷ್ಯಾ ಮತ್ತು ಯುರೋಪ್ ಖಂಡಗಳನ್ನು ಇದು ಪ್ರತ್ಯೇಕಿಸುತ್ತದೆ. ಸರಕು ಮತ್ತು ತೈಲ ಸಾಗಣೆ ಮಾಡುವ ಪ್ರಮುಖ ಮಾರ್ಗಗಳಲ್ಲಿ ಒಂದು. ಪ್ರತಿ ದಿನ 30 ಲಕ್ಷ ಬ್ಯಾರಲ್‌ಗಳಷ್ಟು ತೈಲವನ್ನು ಈ ಮಾರ್ಗದಲ್ಲಿ ಸಾಗಿಸಲಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಆಹಾರ ಧಾನ್ಯದ ಸಾಗಣೆಯೂ ನಡೆಯುತ್ತದೆ.



8. ಸೂಯೆಜ್ ಕಾಲುವೆ



ಈಜಿಪ್ಟಿನಲ್ಲಿರುವ ಇದು ಕೂಡ ಮನುಷ್ಯನಿರ್ಮಿತ ಜಲಮಾರ್ಗವಾಗಿದೆ, ಮೆಡಿಟರೇನಿಯನ್ ಸಮುದ್ರ ಮತ್ತು ಕೆಂಪು ಸಮುದ್ರವನ್ನು ಸಂಪರ್ಕಿಸುವ ಇದು, ಏಷ್ಯಾದ ರಾಷ್ಟ್ರಗಳನ್ನು ಯುರೋಪ್‌ನೊಂದಿಗೆ ಬೆಸೆಯುತ್ತದೆ; ಆಫ್ರಿಕಾವನ್ನು ಸುತ್ತಿಕೊಂಡು ಬರುವ ಅಗತ್ಯವಿಲ್ಲದಂತೆ ಮಾಡುತ್ತದೆ. 1869ರಲ್ಲಿ ಆರಂಭವಾದ ಇದು ಜಗತ್ತಿನ ಅತಿಮುಖ್ಯ ಜಲಮಾರ್ಗವಾಗಿದ್ದು, ಪ್ರಮುಖ ವ್ಯಾಪಾರ ಮಾರ್ಗವಾಗಿದೆ. 2021ರಲ್ಲಿ ಈ ಕಾಲುವೆಯಲ್ಲಿ ದೊಡ್ಡ ಹಡಗೊಂದು ಸಿಲುಕಿಕೊಂಡಿತ್ತು. ಆರು ದಿನಗಳವರೆಗೆ ಹಡಗುಗಳು ಸಂಚರಿಸಲು ಸಾಧ್ಯವಾಗಿರಲಿಲ್ಲ. ಈ ಜಲಮಾರ್ಗದ ಮೂಲಕ ದಿನಕ್ಕೆ 50 ಲಕ್ಷ ಬ್ಯಾರಲ್‌ಗಳಷ್ಟು ಇಂಧನ ಸಾಗಣೆಯಾಗುತ್ತಿದ್ದು, ಅಂದಾಜು 56 ಹಡಗುಗಳು ಸಾಗುತ್ತವೆ.

9. ಬಾಬ್ ಅಲ್ ಮಂಡೆಬ್



ಯೆಮನ್ ಮತ್ತು ಜಿಬೂಟಿ ನಡುವೆ ಇರುವ ಈ ಜಲಸಂಧಿಯು ಕೆಂಪುಸಮುದ್ರ ಮತ್ತು ಆಡೆನ್ ಕೊಲ್ಲಿಯನ್ನು ಜೋಡಿಸುತ್ತದೆ. ಹಿಂದೂ ಮಹಾಸಾಗರದಿಂದ ಕೆಂಪು ಸಮುದ್ರಕ್ಕೆ ಪ್ರವೇಶಿಸಲು ಇರುವ ಏಕೈಕ ಮಾರ್ಗವಾಗಿದ್ದು, ಇದು ಸೂಯೆಜ್ ಕಾಲುವೆಯನ್ನು ಸಂಪರ್ಕಿಸುತ್ತದೆ. ಏಷ್ಯಾ ಮತ್ತು ಯುರೋಪ್ ನಡುವಿನ ವ್ಯಾಪಾರಕ್ಕೆ ಸೇತುವೆಯಾಗಿರುವ ಈ ಜಲಸಂಧಿಯ ಮೂಲಕ ಜಗತ್ತಿನ ಶೇ 12ರಷ್ಟು ಇಂಧನ ಸಾಗಣೆ ನಡೆಯುತ್ತದೆ. ಪ್ರತಿದಿನ 40 ಲಕ್ಷ ಬ್ಯಾರಲ್‌ಗಳಷ್ಟು ಇಂಧನ ಈ ಜಲಸಂಧಿ ಮೂಲಕ ಸಾಗಣೆಯಾಗುತ್ತದೆ.

10. ಜಿಬ್ರಾಲ್ಟರ್



ಅಟ್ಲಾಂಟಿಕ್ ಸಾಗರ ಮತ್ತು ಮೆಡಿಟರೇನಿಯನ್ ಸಮುದ್ರದ ನಡುವೆ ಸಂಪರ್ಕ ಕಲ್ಪಿಸುವ ಜಲಸಂಧಿ ಮೊರೊಕ್ಕೊ ಮತ್ತು ಸ್ಪೇನ್ ನಡುವೆ ಇದೆ. 13 ಕಿ.ಮೀನಷ್ಟು ಅಗಲದ ಈ ಜಲ ಮಾರ್ಗ ಆಫ್ರಿಕಾ ಮತ್ತು ಯೂರೋಪ್ ಖಂಡವನ್ನು ಪ್ರತ್ಯೇಕಿಸುತ್ತದೆ. ಯುರೋಪ್, ಏಷ್ಯಾ ಮತ್ತು ಆಫ್ರಿಕಾ ಖಂಡಗಳಿಗೆ ಸರಕು ಸಾಗಣೆ ಮಾರ್ಗವಾಗಿ ಅಲ್ಲದೇ, ಸೇನಾ ಕಾರ್ಯತಂತ್ರದ ದೃಷ್ಟಿಯಿಂದಲೂ ಈ ಜಲಸಂಧಿಗೆ ಮಹತ್ವ ಇದೆ.

11. ಬೇರಿಂಗ್




ಏಷ್ಯಾ ಮತ್ತು ಉತ್ತರ ಅಮೆರಿಕಾ ಖಂಡಗಳನ್ನು ಪ್ರತ್ಯೇಕಿಸುವ ಜಲಮಾರ್ಗ ಇದು. ಹಿಮ ಆರ್ಕ್ಟಿಕ್ ಮತ್ತು ಪೆಸಿಫಿಕ್ ಸಾಗರಗಳನ್ನು ಇದು ಬೆಸೆಯುತ್ತದೆ. ಅಲಾಸ್ಕ ಮತ್ತು ರಷ್ಯಾದ ಮಧ್ಯೆ ಈ ಜಲಸಂಧಿ ಇದೆ. ಯುರೋಪ್ ಮತ್ತು ಪೆಸಿಫಿಕ್ ರಾಷ್ಟ್ರಗಳ ಮಾರುಕಟ್ಟೆಗಳನ್ನು ಬೆಸೆಯುವ ಕೊಂಡಿಯೂ ಹೌದು. ಆದರೆ, ಈ ಭಾಗದಲ್ಲಿ ಹಿಮ ಹೆಚ್ಚಿರುವುದರಿಂದ ಈ ಮಾರ್ಗದಲ್ಲಿ ಹಡಗುಗಳ ಮೂಲಕ ಸದ್ಯ ಸೀಮಿತ ಪ್ರಮಾಣದ ಸರಕು ಸಾಗಣೆ ನಡೆಯುತ್ತಿದೆ.

12. ಮೆಜಾಲ್ಲೆನ್



ಅಟ್ಲಾಂಟಿಕ್ ಮತ್ತು ಪೆಸಿಫಿಕ್ ಸಾಗರಗಳನ್ನು ಸಂಪರ್ಕಿಸುವ ಈ ಜಲ ಮಾರ್ಗವು ಚಿಲಿಯ ದಕ್ಷಿಣ ಭಾಗದಲ್ಲಿದೆ. ಒಂದೇ ದೇಶದ ಭೂಭಾಗದ ನಡುವೆ ಇರುವ ಈ ಜಲಸಂಧಿಯು ಸರಕು ಸಾಗಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಸರಕು ತುಂಬಿದ 650ಕ್ಕೂ ಹೆಚ್ಚು ಹಡಗುಗಳು ಪ್ರತಿ ದಿನ ಈ ಮಾರ್ಗದಲ್ಲಿ ಸಂಚರಿಸುತ್ತವೆ.

13. ಡ್ಯಾನಿಶ್



ಬಾಲ್ಟಿಕ್ ಮತ್ತು ಉತ್ತರ ಸಮುದ್ರಗಳನ್ನು ಸಂಪರ್ಕಿಸುವ ಈ ಜಲಸಂಧಿ ಯುರೋಪಿನ ಇಂಧನ ಭದ್ರತೆಗೆ ಅತ್ಯಂತ ಮುಖ್ಯವಾಗಿದೆ. ವಾರ್ಷಿಕವಾಗಿ 70 ಸಾವಿರಕ್ಕೂ ಹೆಚ್ಚು ಹಡಗುಗಳು ಈ ಮಾರ್ಗದಲ್ಲಿ ಸಾಗುತ್ತವೆ. ರಷ್ಯಾದಿಂದ ಯುರೋಪ್ ರಾಷ್ಟ್ರಗಳಿಗೆ ಈ ಮಾರ್ಗದ ಮೂಲಕವೇ ತೈಲ ಪೂರೈಕೆಯಾಗುತ್ತದೆ. ನ್ಯಾಟೊದ ಕಾರ್ಯತಂತ್ರದ ದೃಷ್ಟಿಯಲ್ಲೂ ಇದಕ್ಕೆ ಮಹತ್ವವಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಹೊರ್ಮುಜ್ ಜಲಸಂಧಿಯಲ್ಲಿ ಭಾರತದ ಹಡುಗು ಸಿಲುಕಿಕೊಂಡಿದೆ ಎಂದು ವರದಿಯಾಗಿದೆ. 'ಭಾರತವು ಮೊದಲು ಇದರ ಹಿಂದೆ ಇರಾನ್ ಇದೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲಿದೆ. ಅದು ಖಚಿತವಾದರೆ, ಪಾಕಿಸ್ತಾನಕ್ಕಿಂತಲೂ ಕಠೋರವಾದ ಕ್ರಮವನ್ನು ಇರಾನ್ ಎದುರಿಸಲಿದೆ. ಭಾರತದ ವಿರುದ್ಧ ಆಕ್ರಮಣಶೀಲ ವರ್ತನೆ ತೋರಿದರೆ ಇರಾನ್ ಕೂಡ ಕ್ರಮ ಎದುರಿಸಬೇಕಾಗುತ್ತದೆ' ಎಂದು ರಣಧೀರ್ ಜೈಸ್ವಾಲ್ ಅವರು ಎಚ್ಚರಿಕೆ ನೀಡಿದ್ದಾರೆ ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ನಿರ್ದಿಷ್ಟ ಪದದ ಮೂಲಕ ಹುಡುಕಾಟ ನಡೆಸಿದಾಗ, ರಣಧೀರ್ ಜೈಸ್ವಾಲ್ ಅವರು ಈ ರೀತಿ ಹೇಳಿದ್ದಾರೆ ಎನ್ನುವುದಕ್ಕೆ ಯಾವುದೇ ನಂಬಲರ್ಹ ವರದಿಗಳು ಲಭ್ಯವಾಗಲಿಲ್ಲ. ಈ ಹುಡುಕಾಟವು ಪಿಟಿಐ 2026ರ ಮಾರ್ಚ್ 11ರಂದು ಪ್ರಕಟಿಸಿರುವ ವಿಡಿಯೊಕ್ಕೆ ಸಂಪರ್ಕ ಕಲ್ಪಿಸಿತು. ಅದು ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವನ್ನೇ ಹೋಲುತ್ತಿದೆ. ಆದರೆ, ಈ ವಿಡಿಯೊದಲ್ಲಿ ರಣಧೀರ್ ಜೈಸ್ವಾಲ್ ಅವರು ಇರಾನ್‌ಗೆ ಎಚ್ಚರಿಕೆ ನೀಡುವಂಥ ಯಾವುದೇ ಮಾತು ಆಡಿಲ್ಲ. ರಿಸೆಂಬಲ್ ಎಐ ಮತ್ತು ಹಿಯಾ ಎಐ ಪತ್ತೆ ಸಾಧನಗಳ ಮೂಲಕ ವಿಡಿಯೊ ಅನ್ನು ಪರೀಕ್ಷಿಸಿದಾಗ, ವಿಡಿಯೊ ಅನ್ನು ಎಐ ನೆರವಿನಿಂದ ಮಾರ್ಪಡಿಸಲಾಗಿದೆ ಎನ್ನುವುದು ತಿಳಿಯಿತು. ವಿದೇಶಾಂಗ ವ್ಯವಹಾರಗಳ ಸಚಿವಾಲಯವು ವಿಡಿಯೊ ಬಗ್ಗೆ ಸ್ಪಷ್ಟೀಕರಣ ನೀಡಿದ್ದು, ಇದು ಡೀಪ್‌ಫೇಕ್ ವಿಡಿಯೊ ಎಂದು ಹೇಳಿದೆ ಎಂಬುದಾಗಿ ಫ್ಯಾಕ್ಟ್‌ಲಿ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಸಾವಧಾನದ ಬದುಕು

ನುಡಿ ಬೆಳಗು



ದೀಪಾ ಹಿರೇಗುತ್ತಿ

ಪಶ್ಚಿಮ ಘಟ್ಟಗಳ ನಟ್ಟ ನಡುವಿನಲ್ಲಿ ತೊರೆಯೊಂದು ಹರಿಯುತ್ತಿತ್ತು. ಆ ತೊರೆಗೋ ಆದಷ್ಟು ಬೇಗ ಸಮುದ್ರ ಸೇರುವ ಆಸೆ. ಹಾಗಾಗಿ ಅದು ಅತೀ ವೇಗವಾಗಿ ಸಾಗುತ್ತಿತ್ತು. ಅದೇ ಉತ್ಸಾಹದಲ್ಲಿ ಬಂಡೆಗಳ ಮೇಲಿಂದ ರಭಸವಾಗಿ ಹಾರುತ್ತ ಗಡಿಬಿಡಿಯಿಂದ ಇಳಿಯುತ್ತಿತ್ತು. ಹಾಗೆ ಬೆಟ್ಟದಿಂದ ಗರ್ಜಿಸುತ್ತ ಇಳಿದು ಸಾಗುವಾಗ ಅದಕ್ಕೆ ಒಂದು ನದಿಯ ಭೇಟಿಯಾಯಿತು. ಆ ನದಿಯೋ ನಿಧಾನವಾಗಿ ಬೆಟ್ಟದಿಂದಿಳಿದು ಕಣಿವೆಯಲ್ಲಿ ಮೌನವಾಗಿ ಹರಿಯುತ್ತಿತ್ತು.

'ನೀನ್ಯಾಕಿಷ್ಟು ನಿಧಾನವಾಗಿ ಹರಿಯುತ್ತಿದ್ದೀಯಾ?' ಎಂದು ಕೇಳಿತು ತೊರೆ ನದಿಯ ಹತ್ತಿರ. 'ನಿನಗೆ, ನಿನ್ನ ಗುರಿ ಬೇಗ ಸೇರಬೇಕೆಂಬ ಆಸೆ ಇಲ್ಲವೇ?' ಎಂದೂ ಕೇಳಿತದು. ಆಗ ನದಿ, 'ನಾನು ನಿಂತಿಲ್ಲವಲ್ಲ, ಚಲಿಸುತ್ತಿದ್ದೇನೆ, ಆದರೆ ನನಗೆ ಧಾವಂತವಿಲ್ಲ ಅಷ್ಟೇ' ಅಂದಿತು. ಸಾಮಾನ್ಯವಾಗಿ ತೊರೆ ನದಿಯೊಂದಿಗೆ ಸೇರಿಕೊಂಡು ಮುನ್ನಡೆಯಬೇಕಿತ್ತು. ಆದರೆ ನದಿಯ ನಿಧಾನಗತಿಯನ್ನು ನೋಡಿ ತೊರೆ ನಕ್ಕು ತನ್ನದೇ ಆದ ದಾರಿಯಲ್ಲಿ ಇನ್ನಷ್ಟು ವೇಗವಾಗಿ ಸಾಗಿತು. ಸಣ್ಣ ಪುಟ್ಟ ಕಲ್ಲುಗಳನ್ನು ಬುಡಸಮೇತ ಕಿತ್ತು, ಬಂಡೆಗಳಿಗೆ ಢಿಕ್ಕಿ ಹೊಡೆಯುತ್ತಾ, ಆದಷ್ಟು ವೇಗವಾಗಿ ಸಾಗುತ್ತಿತ್ತು. ಹಾಗೆ ಸಾಗುತ್ತ ಸಾಗುತ್ತ ದಣಿಯಿತು. ಮಣ್ಣನ್ನು ರಭಸವಾಗಿ ಕೊಚ್ಚಿಕೊಂಡು ಹೋಗಿದ್ದರಿಂದ ತೊರೆ ಕೆಂಪಾಯಿತು. ಅನತಿ ದೂರದಲ್ಲಿ ನದಿ ನಿಧಾನವಾಗಿ ಸಾಗುತ್ತಲೇ ಇತ್ತು. ಅಡೆತಡೆಗಳಿದ್ದರೆ ಅವನ್ನು ಸುತ್ತಿಕೊಂಡು, ಹೊಲಗದ್ದೆಗಳಿಗೆ ನೀರನ್ನೊದಗಿಸುತ್ತ, ಹಗಲಿನ ಆಕಾಶವನ್ನು ಪ್ರತಿಫಲಿಸಿ ಹೊಳೆಯುತ್ತ ಸಾಗುತ್ತಿತ್ತು. ಆ ನದಿಯ ದಂಡೆಯಲ್ಲಿ ಮನೆಗಳಾದವು, ಪಕ್ಷಿಗಳು ಸನಿಹದ ಮರಗಳಲ್ಲಿ ಗೂಡು ಕಟ್ಟಿದವು. ನದಿ ಸಾಗಿದ ದಾರಿಯುದ್ದಕ್ಕೂ ಬದುಕು ನಳನಳಿಸುತ್ತಿತ್ತು.

ಹೀಗೇ ಒಂದು ದಿನ ವೇಗವಾಗಿ ಹರಿದು ಸೋತ ತೊರೆ ನದಿಯೊಂದಿಗೆ ಸೇರಿಕೊಂಡಿತು. 'ನನಗೆ ಒಂದು ಅರ್ಥವಾಗುತ್ತಿಲ್ಲ. ಸಮುದ್ರ ಸೇರಲೆಂದು ನಾನೆಷ್ಟು ವೇಗವಾಗಿ, ಹುರುಪಿನಿಂದ ಸಾಗಿದೆ. ಆದರೂ ಬಹಳ ಸುಸ್ತಾಗಿ ಹೋಗಿದ್ದೇನೆ. ಅಸ್ಪಷ್ಟವಾಗಿ ಯೋಚಿಸುತ್ತಿದ್ದೇನೆ. ಆದರೆ ನೀನು ನಿಧಾನಕ್ಕೆ ಹರಿದರೂ ಸ್ಪಷ್ಟವಾಗಿದ್ದೀಯಾ, ಆಳವಾಗಿದ್ದೀಯಾ, ಮುಂದೆ ಹೋಗುತ್ತಲೂ ಇದ್ದೀಯಾ ಹೇಗೆ?' ಎಂದು ಕೇಳಿತು.

ಆಗ ನದಿ, 'ಬದುಕೆಂದರೆ ವೇಗವಾಗಿ ಓಡಿ ಮುಗಿಸಬೇಕಾದ ಪಂದ್ಯವಲ್ಲ. ನಿಧಾನವಾಗಿ ಸಾಗಿದಾಗ ನೀನು ಜಗತ್ತನ್ನು ಸ್ಪಷ್ಟವಾಗಿ ನೋಡುತ್ತೀಯ, ಆಳವಾಗಿ ಹರಿಯುತ್ತೀಯ, ಇತರರಿಗೆ ಸಹಾಯವನ್ನೂ ಮಾಡುತ್ತೀಯ. ಒಂದಲ್ಲ ಒಂದು ದಿನ ಸಮುದ್ರ ಸೇರುವುದಂತೂ ನಿಜ. ಅಲ್ಲವೇ' ಎಂದು ಉತ್ತರಿಸಿತು.

ತೊರೆ ಈಗ ನದಿಯ ಭಾಗವಾಗಿತ್ತಲ್ಲ. ಆ ಪ್ರಶಾಂತ ಹರಿಯುವಿಕೆ ತೊರೆಗೆ ಹೊಸ ಚೇತನ ನೀಡಿದಂತಾಯಿತು. ನದಿಯೊಂದಿಗೆ ಸೇರಿ ತೊರೆಯೂ ಸಾವಧಾನದಿಂದ ಸಮುದ್ರದೆಡೆಗೆ ಸಾಗಿತು.

ಈ ಕಥೆಯಲ್ಲಿರುವ ತೊರೆಯಂತೆ ಇವತ್ತಿನ ಯುವಜನಾಂಗ ತಕ್ಷಣದ ಯಶಸ್ಸು, ಶ್ರೀಮಂತಿಕೆ ಮತ್ತು ಜನಪ್ರಿಯತೆಗೆ ಹಾತೊರೆಯುತ್ತಿದೆ. ನಲವತ್ತು ವರ್ಷದೊಳಗೆ ನಿವೃತ್ತರಾಗಿಬಿಡಬೇಕು, ಪ್ರತಿದಿನವನ್ನೂ ಅನುಭವಿಸಬೇಕೆಂಬ ಯೋಚನಾ ಲಹರಿಯ ಬಲೆಗೆ ಬಿದ್ದು ದುಡುಕುತ್ತಿದೆ. ಅತ್ಯಂತ ಚಿಕ್ಕ ವಯಸ್ಸಿನಲ್ಲಿ ತಮ್ಮದೇ ನಿರೀಕ್ಷೆಯ ಭಾರ ಹೊರಲಾಗದೇ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದೆ. ಸಾಮಾಜಿಕ ಜಾಲತಾಣಗಳ ದಾಸರಾಗಿ ಇತರರೊಂದಿಗೆ ಹೋಲಿಕೆ ಮಾಡಿಕೊಂಡು ಆಡಲಾಗದೇ ಅನುಭವಿಸಲಾಗದೇ ನರಳುತ್ತಿದೆ.

ಹಾಗಂತ ಸಾಧನೆ ಮಾಡಲು ಕಷ್ಟಪಡುವುದು ಬೇಡವೇ ಎಂದರೆ ಖಂಡಿತ ಬೇಕು. ತರಾತುರಿಗೆ ಬಿದ್ದು ಹಿಂದೆ ಮುಂದೆ ನೋಡದೇ ಓಡಿ ಸೋಲುವ ಬದಲು ಸಾವಧಾನಚಿತ್ತದಿಂದ ಯೋಚಿಸಿ ದೃಢ ಹೆಜ್ಜೆಗಳನ್ನಿಡುತ್ತ ಮುನ್ನಡೆಯಬೇಕು. ಕಾರಣ ಬದುಕು ಪಂದ್ಯವಲ್ಲ, ಪಯಣ.

ಪದಬಂಧ 6380

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಕನ್ನಡಿಗರ ಸೆನ್ಸಸ್! (5)
4.ಕುಲದವರಿಗೆ ಕಾಣಿಸಿದ ಗುಂಪು (3)
5.ಸೈನ್ಯವಿರುವ ಜಾಗ (3)
6.ವನದ ಕೊನೆಗೆ ಮಾಡಿದ ಯಜ್ಞ (3)
8.ಇದು ಶ್ರೇಷ್ಠವಾದುದು (3)
9.ನೋಡುಗ ಇಲ್ಲಿದ್ದಾನೆ (3)
11.ದೇಗುಲದ ಗೋಪುರದ ತುದಿ (3)
12.ಮಣ ಭಾರ ಹೊತ್ತಿರುವ ನಲ್ಲ (3)
13.ಕುಶನ ಅವಳಿ ಸಹೋದರ ತಂದಿರುವ ಉಪ್ಪು (3)
15.ಕಮಲದ ಹತ್ತಿರ ಆನೆಯ ಮರಿ ಬಂದಿದೆಯಲ್ಲಾ! (3)
17.ದಾಸನು ಶೇಖರಿಸಿಟ್ಟ ಸಾಮಾನು (3)
18.ಯಾತ್ರಾಸ್ಥಳದಲ್ಲಿ ತಂಗಿರುವ ಮನೆ (5)

ಮೇಲಿಂದ ಕೆಳಕ್ಕೆ

1.ಜಟಿಲತೆಯಿಂದ ಶೇಖರಿಸಿರುವ ನೀರು (2)
2.ಗಡಕ್ಕನೆ ಬಂದೆರಗಿದ ಗಂಡು ಬೆಕ್ಕು (3)
3.ತಿರುಮಲದಲ್ಲಿ ಖರೀದಿಸಿದ ಎಳ್ಳು (2)
6.ಕೈಚಳಕವನ್ನು ಇಲ್ಲಿ ನೋಡಬಹುದು (5)
7.ಹಳೆಯದನ್ನು ಪುನಃ ಹೊಸದು ಮಾಡುವಿಕೆ (5)
8.ಪ್ರತಿಮೆಯ ಬಳಿಯಿರುವ ಚಿಹ್ನೆ (3)
10.ಕಣದಲ್ಲಿ ನೆರವೇರಿದ ಮದುವೆ (3)
14.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
16.ಭವನದಲ್ಲಿರುವ ಸಂಸಾರ ಕಾಣುತ್ತಿದೆಯೇ? (2)
17.ಉದಾಹರಣೆ ನೀಡುವಾಗ ಆಗಿರುವ ತೃಷೆ (2)



6379ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪ್ರಲೋಭನೆ 2.ಪರಂಪರೆ
4.ಚಕ್ರವಾಕ 7.ಜನಮನ
8.ಪಣ 9.ವಲ್ಲಭ
10.ರಟ್ಟೆ 11.ಭರವಸೆ
13.ತಲೆಗಾಪು 15.ಪೀಕದಾನಿ
16.ಅವಗುಣ

ಮೇಲಿಂದ ಕೆಳಕ್ಕೆ:

1.ಪ್ರಪಂಚ 3.ಪರಮ
5.ಕ್ರಮೇಣ 6.ಕತ್ತಿವರಸೆ
7.ಜಡಭರತ 10.ರಚಾಗಾ
12.ರಕ್ಷಕ 14.ಪುರಾಣ

ಸುಡೊಕು 6763

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				5		2		8
5		4	1		8		3	
	8			7			5	
	6		9	3		1		2
2		5						
	3			8	2	5		6
			5		6		2	
3		2						5
	5			2		4		1

6762 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

21 ಏಪ್ರಿಲ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಪಂಚಮಿ ಗಂ. 25-20 ನಕ್ಷತ್ರ: ಮೃಗಶಿರ ಗಂ. 23-29 ಯೋಗ: ಶೋಭನ ಗಂ. 12-13 ಕರಣ : ಬವ ಗಂ. 14-25 ಮೇಷ ಮಾಸದ 08 ನೇ ದಿನ. ಮಳೆ ನಕ್ಷತ್ರ : ಅಶ್ವಿನಿ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-18 ಸೂರ್ಯಾಸ್ತ : 06-41, ಮುಸ್ಲಿಂ ದಿನಾಂಕ : 2 ಜುಲ್ಕಾದಾ , ದಿನ ವಿಶೇಷ : ಶ್ರೀ ಶಂಕರಾಚಾರ್ಯ ಜಯಂತಿ, ಅದೃಷ್ಟ ಸಂಖ್ಯೆ : 8, 3

ಮೇಷ: ಸಹೋದರರಲ್ಲಿ ಅನರ್ಥಗಳು ನಡೆಯುವ ಸಂಭವವಿದೆ. ಅದರ ಪರಿಣಾಮ ಭಿನ್ನಾಭಿಪ್ರಾಯ ಮೂಡುವುದು. ಹೊಸ ವಾಹನ ಖರೀದಿಸುವ ಅವಶ್ಯಕತೆ ಹೆಚ್ಚಾಗಲಿದೆ.

ವೃಷಭ: ಹಿರಿಯರಿಂದ ಪಡೆದ ಸಲಹೆಯು ಜೀವನಕ್ಕೆ ಹೊಸ ಬುನಾದಿಯಾಗಲಿದೆ. ಗುರಿಯನ್ನು ತಲುಪಲು ನೆರವಾಗುವುದು. ಧನಾಗಮನ ಹೆಚ್ಚಿದ್ದರೂ ಸಂಪಾದನೆಯ ಬಹುಪಾಲು ವೆಚ್ಚವಾಗಲಿದೆ.

ಮಿಥುನ: ಉದ್ಯೋಗದಲ್ಲಿ ನಿಧಾನಗತಿಯ ಕೆಲಸ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮನೆಯವರೊಂದಿಗೆ ಸುಖ ಭೋಜನ ಮಾಡುವ ಅವಕಾಶ ಸಿಗಲಿದೆ. ತಂದೆ ಮಕ್ಕಳ ಸಂಬಂಧ ಗಾಢವಾಗಿರುವುದು.

ಕರ್ಕಾಟಕ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿಯಲಿವೆ. ನೆಮ್ಮದಿ ಸಿಗಲಿದೆ. ಮೂರ್ಖತನದಿಂದಾಗಿ ಬಂಧು-ಬಾಂಧವರು ದೂರವಾಗುವ ಸಂಭವವಿದೆ. ತೆಂಗಿನಕಾಯಿ ವ್ಯಾಪಾರಿಗಳಿಗೆ ಲಾಭ ಸಿಗಲಿದೆ.

ಸಿಂಹ: ಕಾರ್ಯಗಳಿಗೆ ಅಡ್ಡಿ ಉಂಟಾದಲ್ಲಿ ಸರಿಯಾಗಿ ವಿಮರ್ಶಕರಲ್ಲಿ ವಿಮರ್ಶಿಸಿ ಮುಂದುವರಿಯಿರಿ. ಹೊಸ ಜಾಗದಲ್ಲಿ ಅಥವಾ ಹೊರರಾಜ್ಯವೊಂದರಲ್ಲಿ ಕೆಲಸ ನಿರ್ವಹಿಸಬೇಕಾಗುವುದು. ತಂದೆಯಲ್ಲಿಟ್ಟ ಬೇಡಿಕೆಗಳು ಈಡೇರಲಿವೆ.

ಕನ್ಯಾ: ತಾಂತ್ರಿಕ ವೃತ್ತಿಯವರಿಗೆ ಕಾರ್ಯರಂಗದಲ್ಲಿ ಮತ್ತು ಕಾರ್ಯಸ್ಥಳದಲ್ಲಿ ಹಿತ ಎನಿಸುವ ಘಟನೆ ನಡೆಯಲಿದೆ. ಮಹಿಳಾ ಉದ್ಯೋಗಿಗಳಿಗೆ ಬಡ್ತಿ ದೊರೆಯಲಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯ.

ತುಲಾ: ತೆಗೆದುಕೊಳ್ಳುವ ನಿರ್ಧಾರ ನಿಮ್ಮ ಕುಟುಂಬಕ್ಕೆ ಮಾತ್ರವಲ್ಲದೆ, ನಿಮ್ಮ ಸುತ್ತಲಿನ ಬೇರೆ ಜನರ ಜೀವನಕ್ಕೆ ಕೂಡ ಮಾರ್ಗದರ್ಶಿಯಾಗಲಿದೆ. ಪ್ರಭಾವಿ ವ್ಯಕ್ತಿಗಳ ನಿಕಟ ಸಂಪರ್ಕವು ಕಾರ್ಯಾನುಕೂಲ ಮಾಡಿಕೊಡುವುದು.

ವೃಶ್ಚಿಕ: ಆರಂಭ ಸ್ವಲ್ಪ ಗೊಂದಲಮಯವಾದರೂ, ತಪ್ಪಿದ ಪ್ರಯಾಣದಿಂದ ವಿರಾಮಕ್ಕೆ ಅವಕಾಶವಿರುವುದು. ಸಮಯ ಕಳೆದಂತೆ ಅನಗತ್ಯ ಚಿಂತೆ, ಭಯಗಳು ದೂರಾಗಲಿವೆ.


ಧನು: ಹತ್ತಾರು ವಿಷಯಗಳಲ್ಲಿ ಗಮನ ಹರಿಸುವುದಕ್ಕಿಂತ ನಿರ್ದಿಷ್ಟವಾದ ಒಂದು ಗುರಿಯ ಕಡೆಗೆ ತಲುಪುವ ಪ್ರಯತ್ನ ಮಾಡಿ. ಪಾಲುದಾರಿಕೆ ವ್ಯವಹಾರದವರಿಗೆ ಬಂಡವಾಳದ ಅವಶ್ಯಕತೆ ಇಂದು ಬರುವುದು.

ಮಕರ: ವೃತ್ತಿ ಬದುಕಿನಲ್ಲಿ ಜವಾಬ್ದಾರಿ ಕಡಿಮೆಯಾದ ಕಾರಣ ನಿಂದನೆಗೆ ಒಳಗಾಗುವ ಸನ್ನಿವೇಶ ಎದುರಾಗಬಹುದು. ಕಾರ್ಯಾಗಾರದಲ್ಲಿ ಗುಂಪಿನ ಮುಂದಾಳತ್ವದ ಜವಾಬ್ದಾರಿ ವಹಿಸಿಕೊಳ್ಳಬೇಕಾಗುವುದು.

ಕುಂಭ: ಸಂಬಂಧವಿರದ ಕೆಲಸಕ್ಕಾಗಿ ತಿರುಗಾಟವಾದರೂ ಹೊಸ ಜನರ ಪರಿಚಯ, ಹೊಸ ಅನುಭವ ನೆಮ್ಮದಿಯನ್ನು ತರುತ್ತದೆ. ಮನಃಕ್ಲೇಶವು ಸಾಮರಸ್ಯದಿಂದ ದೂರಾಗುತ್ತದೆ.

ಮೀನ: ಕೌಟುಂಬಿಕ ವಿಚಾರದಲ್ಲಿ ಇನ್ನೊಬ್ಬರ ಮಾತನ್ನು ಕೇಳಿ ಪರಾಮರ್ಶಿಸದೇ ವಿವೇಚನೆಯನ್ನು ಕಳೆದುಕೊಳ್ಳಬೇಡಿ. ವಿದ್ಯಾಭ್ಯಾಸದಲ್ಲಿ ಹಿನ್ನಡೆ ತೋರಿಬಂದು ವಿದ್ಯಾರ್ಥಿಗಳಿಗೆ ನಿರಾಸೆ ಹಾಗೂ ಕೋಪ ಕಾಡಲಿದೆ.

ಗುಂಡಣ್ಣ



ಬೆಳ್ಳಿ ದರ ₹4,300 ಏರಿಕೆ




ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರಗಳ ಏರಿಕೆಯಾಗಿದೆ. ಬೆಳ್ಳಿ ದರವು ಕೆ.ಜಿಗೆ ₹4,300 ಏರಿಕೆಯಾಗಿ, ₹2,57,300ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹800 ಏರಿಕೆಯಾಗಿ, ₹1.57 ಲಕ್ಷವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಆಭರಣ ತಯಾರಕರಿಂದ ಚಿನ್ನ ಮತ್ತು ಬೆಳ್ಳಿ ಖರೀದಿ ಹೆಚ್ಚಳವಾಗಿದೆ. ಇದು ಈ ಲೋಹಗಳ ದರ ಏರಿಕೆಗೆ ಕಾರಣ ಎಂದು ತಿಳಿಸಿದೆ.

ಸೆನ್ಸೆಕ್ಸ್ ಏರಿಕೆ: ಸೋಮವಾರ ವಹಿವಾಟಿನಲ್ಲಿ ಸೆನ್ಸೆಕ್ಸ್ 26 ಮತ್ತು ನಿಫ್ಟಿ 11 ಅಂಶ ಏರಿಕೆಯಾಗಿದೆ.

ಬ್ರೆಂಟ್ ಕಚ್ಚಾ ತೈಲ ದರವು ಶೇ 5.3ರಷ್ಟು ಏರಿಕೆಯಾಗಿ, ಪ್ರತೀ ಬ್ಯಾರಲ್ ಬೆಲೆ 95.20 ಡಾಲರ್ ಆಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,353
ಇಂದಿನ ಅಂತ್ಯ:	24,364
ದಿನದ ಗರಿಷ್ಠ:	24,480
	11

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100ಕ್ಕೆ	₹570
12ಕ್ಕೆ	₹78
ಮೈಸೂರು: 100ಕ್ಕೆ	₹580

ಎನ್.ಆರ್.ಪುರ ರಬ್ಬರ್ (ಪ್ರ.ಕೆಜಿ)	
ಆರ್‌ಎಸ್‌ಎಸ್-4	₹228
ಆರ್‌ಎಸ್‌ಎಸ್-5	₹222.50
ಗುಡ್ ಲಾಟ್	₹200

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಪ್ರ.ಕೆಜಿ)	₹307-692
ದ್ವಿತಳಿ (ಪ್ರ.ಕೆಜಿ)	₹336-805

ಮುದ್ದಮನೆ ಕಾಫಿ (50 ಕೆಜಿ)	
ಎಪಿ	₹23000
ಎಸಿ	₹13850
ಆರ್‌ಪಿ	₹18000
ಆರ್‌ಸಿ	₹9650

ಮುಂಬೈ ಖಾದ್ಯ ತೈಲ (ಹತ್ತು ಕೆಜಿಗೆ)	
ಶೇಂಗಾ (ಕಚ್ಚಾ)	₹1670 (1700)
ಸೋಯಾ (ಕಚ್ಚಾ)	₹1500 (1540)
ಸೂರ್ಯಕಾಂತಿ (ಕಚ್ಚಾ)	₹1665 (1675)
ಪಾಮೋಲಿನ್	₹1425 (1440)

ಯುದ್ಧ: ದೇಶದ ಆರ್ಥಿಕತೆಗೆ ಅಪಾಯ

ಚಾಲ್ತಿ ಖಾತೆ ಕೊರತೆ ಹೆಚ್ಚಳದ ಆತಂಕ; ನೀತಿ ಆಯೋಗದ ವರದಿಯಲ್ಲಿ ಉಲ್ಲೇಖ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಭೌಗೋಳಿಕ ರಾಜಕೀಯ ಅಸ್ಥಿರತೆಯು ಭಾರತದ ವ್ಯಾಪಾರ ಹಾಗೂ ಸಮಗ್ರ ಆರ್ಥಿಕ ಸ್ಥಿರತೆಯ ಮೇಲೆ ದುಷ್ಪರಿಣಾಮ ಬೀರಲಿದೆ. ಇದು ಚಾಲ್ತಿ ಖಾತೆ ಕೊರತೆಯನ್ನು ಹೆಚ್ಚಿಸುವ ಮೂಲಕ ರೂಪಾಯಿಯ ವಿನಿಮಯ ದರದ ಮೇಲೆ ಪರಿಣಾಮ ಬೀರಬಹುದು ಎಂದು ನೀತಿ ಆಯೋಗ ಸೋಮವಾರ ಹೇಳಿದೆ.

ಈ ಸಂಘರ್ಷವು ಭಾರತ-ಕೊಲ್ಲಿ ಸಹಕಾರ ಮಂಡಳಿಯ (ಜಿಸಿಸಿ) ಮುಕ್ತ ವ್ಯಾಪಾರ ಒಪ್ಪಂದದ ಪ್ರಕ್ರಿಯೆಯನ್ನು ನಿಧಾನಗೊಳಿಸಿದ್ದು, ವ್ಯಾಪಾರ ವೈವಿಧ್ಯ ಮತ್ತು ಮಾರುಕಟ್ಟೆ ಪ್ರವೇಶದ ಮೇಲೆ ಪರಿಣಾಮ ಬೀರಿದೆ ಎಂದು ಆಯೋಗ ತನ್ನ 'ವ್ಯಾಪಾರ ನಿಗಾ: ಅಕ್ಟೋಬರ್-ಡಿಸೆಂಬರ್ (3ನೇ ತ್ರೈಮಾಸಿಕ) ಹಣಕಾಸು ವರ್ಷ 2025-26' ವರದಿಯಲ್ಲಿ ತಿಳಿಸಿದೆ.



ವರದಿಯನ್ನು ಬಿಡುಗಡೆ ಮಾಡಿದ ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೇರಿ, 'ಮುಕ್ತ ವ್ಯಾಪಾರ ಒಪ್ಪಂದಗಳು ಏಕಮುಖ ಸಂಚಾರದ ರಸ್ತೆಗಳಂತಲ್ಲ. ಅವು ಹಾಗೆ ಇರಬಾರದು ಕೂಡ. ಈ ಒಪ್ಪಂದಗಳನ್ನು ನಾವು ಹೇಗೆ ಮಾರುಕಟ್ಟೆ ಪ್ರವೇಶದ ಸಾಧನವನ್ನಾಗಿ ನೋಡುತ್ತಿದ್ದೇವೋ, ಇತರ ದೇಶಗಳು ಸಹ ಇವುಗಳನ್ನು ತಮ್ಮ ಮಾರುಕಟ್ಟೆ ಪ್ರವೇಶದ ಸಾಧನವನ್ನಾಗಿ ನೋಡುತ್ತವೆ' ಎಂದು ತಿಳಿಸಿದ್ದಾರೆ.

'ಭಾರತದ ರತ್ನ ಹಾಗೂ ಆಭರಣ ವಲಯವನ್ನು ಮಧ್ಯಮ ಮೌಲ್ಯದಿಂದ ಉನ್ನತ ಮೌಲ್ಯದ ರಫ್ತಿಗೆ ಹೆಚ್ಚಿಸಬೇಕು. ಆಭರಣಗಳ ತಯಾರಿಕೆ ಕೇಂದ್ರಗಳಲ್ಲಿ ಹೊಸ ತಂತ್ರಜ್ಞಾನ ಮತ್ತು ಸಂಶೋಧನೆಗೆ ಉತ್ತೇಜನ ನೀಡಬೇಕು. ವಿನ್ಯಾಸಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಬೇಕು. ಭೌಗೋಳಿಕ ವಿಶಿಷ್ಟ ಮಾನ್ಯತೆ (ಜಿ.ಐ) ಪಡೆದ ವಿಶಿಷ್ಟ ಪ್ರಾದೇಶಿಕ ಆಭರಣಗಳನ್ನು ಪ್ರಚಾರ ಮಾಡಬೇಕು. ಹಗುರ, ಫ್ಯಾಷನ್ ಆಭರಣಗಳು ಮತ್ತು ಪುರುಷರ ಆಭರಣಗಳ ತಯಾರಿಕೆ ಮೂಲಕ ಈ ವಲಯವನ್ನು ವಿಸ್ತರಿಸಬೇಕು' ಎಂದು ವರದಿ ಹೇಳಿದೆ.

'ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ಲಾಭದ ಪ್ರಮಾಣವನ್ನು ಹೆಚ್ಚಿಸಲು ಕಚ್ಚಾ ವಸ್ತುಗಳ ಪೂರೈಕೆಯನ್ನು ಸುಧಾರಿಸಬೇಕು. ಎಂಎಸ್‌ಎಂಇಗಳಿಗೆ ನಗದು ಲಭ್ಯತೆಯನ್ನು ಸುಲಭಗೊಳಿಸಲು ಮತ್ತು ಅವುಗಳ ಬೆಳವಣಿಗೆಗೆ ಪೂರಕವಾಗುವಂತೆ ಸಾಲ ಸೌಲಭ್ಯ, ಸಾಲದ ಖಾತರಿ, ಬಡ್ಡಿ ರಿಯಾಯಿತಿ ನೀಡಬೇಕು' ಎಂದೂ ಶಿಫಾರಸು ಮಾಡಿದೆ.

ಸರಕು, ಸೇವಾ ವ್ಯಾಪಾರ ಶೇ 5.3ರಷ್ಟು ಏರಿಕೆ

2025ರ ಏಪ್ರಿಲ್- ಡಿಸೆಂಬರ್ ಅವಧಿಯಲ್ಲಿ ಭಾರತದ ಒಟ್ಟು ಸರಕು ಮತ್ತು ಸೇವಾ ವ್ಯಾಪಾರವು ಸ್ಥಿರವಾಗಿ ಬೆಳೆಯುತ್ತಿದೆ. ವರ್ಷದಿಂದ ವರ್ಷಕ್ಕೆ ಸುಮಾರು ಶೇಕಡ 5.3ರಷ್ಟು ಏರಿಕೆಯಾಗುತ್ತಿದ್ದು, 1.37 ಟ್ರಿಲಿಯನ್ ಡಾಲರ್‌ಗೆ (ಸುಮಾರು ₹127 ಲಕ್ಷ ಕೋಟಿ) ತಲುಪಿದೆ.

ವರದಿಯ ಪ್ರಕಾರ, ರತ್ನ ಮತ್ತು ಆಭರಣಗಳ ವಲಯದಲ್ಲಿ (ಜಿಇಜೆ71), ವಿಶೇಷವಾಗಿ ಸಂಸ್ಕರಿಸಿದ ವಜ್ರಗಳ ವಿಭಾಗದಲ್ಲಿ ಭಾರತವು ಜಾಗತಿಕ ಮಟ್ಟದ ಪ್ರಮುಖ ರಾಷ್ಟ್ರವಾಗಿ ಮುಂದುವರಿದಿದೆ. ಭಾರತದ ರತ್ನ ಮತ್ತು ಆಭರಣಗಳ ವ್ಯಾಪಾರವು (ಕಚ್ಚಾ ಚಿನ್ನವೂ ಸೇರಿದಂತೆ) ಕೆಲವು ನಿರ್ದಿಷ್ಟ ದೇಶಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ರಫ್ತಿನಲ್ಲಿ ಅಮೆರಿಕ, ಯುಎಇ ಮತ್ತು ಹಾಂಗ್‌ಕಾಂಗ್ ಶೇ 73ರಷ್ಟು ಪಾಲನ್ನು ಹೊಂದಿದೆ ಎಂದು ನೀತಿ ಆಯೋಗದ ವರದಿ ತಿಳಿಸಿದೆ.

ಮೂಲಸೌಕರ್ಯ ವಲಯದ ಪ್ರಗತಿ ಇಳಿಕೆ

ನವದೆಹಲಿ (ಪಿಟಿಐ): ದೇಶದ ಎಂಟು ಪ್ರಮುಖ ಮೂಲಸೌಕರ್ಯ ವಲಯಗಳ ಬೆಳವಣಿಗೆ ಮಾರ್ಚ್ ತಿಂಗಳಿನಲ್ಲಿ (-) ಶೇ 0.4ಕ್ಕೆ ಇಳಿಕೆ ಆಗಿದೆ ಎಂದು ಕೇಂದ್ರ ಸರ್ಕಾರದ ಅಂಕಿಅಂಶಗಳು ತಿಳಿಸಿವೆ. ಇದು ಐದು ತಿಂಗಳ ಕನಿಷ್ಠ ಮಟ್ಟ.

ಕಲ್ಲಿದ್ದಲು, ಕಚ್ಚಾ ತೈಲ, ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದನೆಯಲ್ಲಿ ಇಳಿಕೆ ಆಗಿದೆ. ಇದೇ ಬೆಳವಣಿಗೆ ಇಳಿಕೆಗೆ ಕಾರಣ ಎಂದು ತಿಳಿಸಿದೆ. ನೈಸರ್ಗಿಕ ಅನಿಲ ಉತ್ಪಾದನೆಯು ಬೆಳವಣಿಗೆ ದಾಖಲಿಸಿದೆ. ಫೆಬ್ರುವರಿಯಲ್ಲಿ ಈ ವಲಯಗಳ ಬೆಳವಣಿಗೆ ದರ ಶೇ 2.8ರಷ್ಟಾಗಿತ್ತು.

2024–25ರ ಪೂರ್ಣ ಆರ್ಥಿಕ ವರ್ಷದಲ್ಲಿ ಈ ವಲಯಗಳ ಬೆಳವಣಿಗೆ ದರ ಶೇ 4.5ರಷ್ಟಿತ್ತು. ಅದು 2025–26ರಲ್ಲಿ ಶೇ 2.6ಕ್ಕೆ ಇಳಿದಿದೆ. ಇದು ಕಳೆದ 5 ಆರ್ಥಿಕ ವರ್ಷದ ಕನಿಷ್ಠ ಮಟ್ಟವಾಗಿದೆ.

ಪ್ಯಾಲೆಸ್ಟೀನ್‌ನಲ್ಲಿ ಶಾಂತಿಗೆ ಒತ್ತು

ಬ್ರಸೆಲ್ಸ್, (ಬೆಲ್ಜಿಯಂ) (ಎಪಿ): ವೆಸ್ಟ್‌ಬ್ಯಾಂಕ್ ಹಾಗೂ ಗಾಜಾದಲ್ಲಿ ಶಾಂತಿ ಹಾಗೂ ಭದ್ರತೆ ಸ್ಥಾಪಿಸುವ ನಿಟ್ಟಿನಲ್ಲಿ ಪ್ಯಾಲೆಸ್ಟೀನ್‌ನ ಪ್ರಧಾನಿ ಮೊಹಮ್ಮದ್ ಮುಸ್ತಫಾ ಜೊತೆಗೆ ಚರ್ಚೆ ನಡೆಸಲು ಬ್ರಸೆಲ್ಸ್‌ನಲ್ಲಿ ನಡೆಯುತ್ತಿರುವ 9ನೇ ಅಂತರ ರಾಷ್ಟ್ರೀಯ ಶೃಂಗಸಭೆಗೆ 60 ದೇಶಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟಿವೆ. ಇರಾನ್ ಹಾಗೂ ಲೆಬನಾನ್‌ನ ಮೇಲೆ ನಡೆಯುತ್ತಿರುವ ದಾಳಿಯ ಕುರಿತು ಜಾಗತಿಕವಾಗಿ ಗಮನಸೆಳೆಯುವ ನಿಟ್ಟಿನಲ್ಲಿ ಈ ಸಭೆಯು ಮಹತ್ವ ಪಡೆದುಕೊಂಡಿದೆ.

'ಗಾಜಾದಲ್ಲಿ ನಡೆಯುತ್ತಿರುವ ದೊಡ್ಡ ಪ್ರಮಾಣದ ಹಾನಿಯು ಎರಡೂ ರಾಷ್ಟ್ರಗಳ ಪರಿಹಾರ ಸಿದ್ಧಾಂತದ ನಿರೀಕ್ಷೆಯನ್ನು ಮಸುಕಾಗಿಸಿದೆ' ಎಂದು ಬೆಲ್ಜಿಯಂನ ವಿದೇಶಾಂಗ ಸಚಿವ ಮ್ಯಾಕ್ಸೈಮ್ ಪ್ರೆವೊಟ್ ತಿಳಿಸಿದ್ದಾರೆ.

ರಾಜ್ಯಗಳ ಬಂಡವಾಳ ವೆಚ್ಚ ಇಳಿಕೆ?

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯಗಳ ಬಂಡವಾಳ ವೆಚ್ಚದ ಬೆಳವಣಿಗೆಯು ಶೇ 8ರಿಂದ ಶೇ 10ರಷ್ಟು ಇಳಿಕೆ ಆಗಬಹುದು ಎಂದು ಕೇರ್‌ಎಡ್ಜ್ ರೇಟಿಂಗ್ಸ್ ವರದಿ ಅಂದಾಜಿಸಿದೆ.



ರಾಜ್ಯಗಳ ವೆಚ್ಚ ಹೆಚ್ಚಳವಾಗುತ್ತಿದೆ. ಆದರೆ, ವರಮಾನದಲ್ಲಿನ ಬೆಳವಣಿಗೆ ಕಡಿಮೆ ಆಗುತ್ತಿದೆ. ಇದು ಪ್ರಗತಿ ನಿಧಾನವಾಗಲು ಒಂದು ಕಾರಣವಾಗಿದೆ ಎಂದು ತಿಳಿಸಿದೆ.

ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ದರ ಏರಿಕೆಯಾಗಲಿದ್ದು, ವರಮಾನ ಮತ್ತು ವೆಚ್ಚದ ಮೇಲೆ ಒತ್ತಡ ಬೀಳುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಕೇಂದ್ರದಿಂದ ರಾಜ್ಯಗಳಿಗೆ ಬರುವ ಅನುದಾನ ಕಡಿಮೆ ಆಗುವುದರಿಂದ 2025-26 ಮತ್ತು 2026-27ರ ಆರ್ಥಿಕ ವರ್ಷದಲ್ಲಿ ರಾಜ್ಯಗಳ ವರಮಾನ ಬೆಳವಣಿಗೆ ಮಧ್ಯಮ ಮಟ್ಟದಲ್ಲಿ ಉಳಿಯುವ ನಿರೀಕ್ಷೆಯಿದೆ ಎಂದು ಸಂಸ್ಥೆಯ ಸಹಾಯಕ ನಿರ್ದೇಶಕ ಪ್ರಸನ್ನ ಕೃಷ್ಣನ್ ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಒಟ್ಟಾರೆ ವರಮಾನದ ಮೇಲೆ ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಬಿಕ್ಕಟ್ಟಿನಂತಹ ಅಂಶಗಳು ಪರಿಣಾಮ ಬೀರಲಿವೆ ಎಂದು ಹೇಳಿದ್ದಾರೆ.

ವಿತ್ತೀಯ ಕೊರತೆಯು 2024-25ರಲ್ಲಿ ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ (ಜಿಎಸ್‌ಡಿಪಿ) ಶೇ 0.8ರಷ್ಟಿತ್ತು. ಇದು 2026-27ರಲ್ಲಿ ಶೇ 1.2ಕ್ಕೆ ಹೆಚ್ಚಳವಾಗಬಹುದು. ರಾಜ್ಯಗಳು ಸಮಾಜ ಕಲ್ಯಾಣ ಕಾರ್ಯಗಳಿಗೆ ಬಂಡವಾಳ ಉಳಿಸಿಕೊಳ್ಳುವ ಅಗತ್ಯವಿದ್ದು, ಹಣಕಾಸಿನ ಶಿಸ್ತನ್ನು ಕಾಪಾಡಿಕೊಳ್ಳಬೇಕಿದೆ ಎಂದು ಹೇಳಿದ್ದಾರೆ.

ಬಿಒಎಂ ಲಾಭ ಶೇ 35ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಅಂತ್ಯಗೊಂಡ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ನಿವ್ವಳ ಲಾಭದಲ್ಲಿ ಶೇ 35ರಷ್ಟು ಹೆಚ್ಚಳವಾಗಿದೆ.

2024-25ರ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹1,493 ಕೋಟಿ ಲಾಭ ಗಳಿಸಿತ್ತು. ಅದು ಈ ಬಾರಿ ₹2,014 ಕೋಟಿಗೆ ಹೆಚ್ಚಳವಾಗಿದೆ. ಒಟ್ಟು ವರಮಾನ ₹7,711 ಕೋಟಿಯಿಂದ ₹8,693 ಕೋಟಿಗೆ ಏರಿಕೆಯಾಗಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಸೋಮವಾರ ತಿಳಿಸಿದೆ. ಬಡ್ಡಿ ವರಮಾನ ₹7,755 ಕೋಟಿಯಷ್ಟಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 1.74ರಿಂದ ಶೇ 1.45ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.18ರಿಂದ ಶೇ 0.13 ಆಗಿದೆ. ಬ್ಯಾಂಕ್‌ನ ಬಂಡವಾಳ ಮೀಸಲು ಅನುಪಾತ (ಸಿಎಆರ್) ಶೇ 18.36ಕ್ಕೆ ಇಳಿದಿದೆ ಎಂದು ತಿಳಿಸಿದೆ.

ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಯುದ್ಧ; ರಫ್ತು ಸಂಪೂರ್ಣ ಸ್ಥಗಿತ

ಕುಸಿದ ಗುಲಾಬಿ ಈರುಳ್ಳಿ ಧಾರಣೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಯುದ್ಧದಿಂದ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಉಂಟಾಗಿರುವ ಅಸ್ಥಿರತೆಯು, ಜಿಲ್ಲೆಯಲ್ಲಿ ಗುಲಾಬಿ ಈರುಳ್ಳಿ ರಫ್ತು ವಹಿವಾಟಿನ ಮೇಲೆ ನೇರ ಪರಿಣಾಮ ಬೀರಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂದಾಜು ಐದು ಸಾವಿರ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಈ ಗುಲಾಬಿ ಈರುಳ್ಳಿಯನ್ನು ಸ್ಥಳೀಯ ಬಳಕೆಗಿಂತಲೂ ರಫ್ತು ಉದ್ದೇಶಕ್ಕಾಗಿಯೇ ಬೆಳೆಯಲಾಗುತ್ತದೆ. ಬೆಂಗಳೂರು ಸುತ್ತಮುತ್ತ ಗುಲಾಬಿ ಈರುಳ್ಳಿ ಹೆಚ್ಚು ಬೆಳೆಯುವ ಕಾರಣ 'ಬೆಂಗಳೂರು ಗುಲಾಬಿ ಈರುಳ್ಳಿ' ಹೆಸರಿನಲ್ಲಿ ಇದು ಭೌಗೋಳಿಕ ಮಾನ್ಯತೆಯನ್ನು ಪಡೆದಿದೆ.

ಚಿಕ್ಕಬಳ್ಳಾಪುರ ಗುಲಾಬಿ ಈರುಳ್ಳಿ ಮಲೇಷ್ಯಾ, ಬಾಂಗ್ಲಾದೇಶ ಬಿಟ್ಟರೆ ಪಶ್ಚಿಮ ಏಷ್ಯಾ ದೇಶಗಳಿಗೆ ರಫ್ತಾಗುತ್ತದೆ. ಯುದ್ಧದಿಂದಾಗಿ ರಫ್ತು ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

ಸ್ಥಳೀಯ ಮಾರುಕಟ್ಟೆಯಲ್ಲಿ ₹100ರಿಂದ ₹150ಕ್ಕೆ ಮಾರಾಟವಾಗುತ್ತಿದ್ದ ಒಂದು ಕೆ.ಜಿ ಈರುಳ್ಳಿ ಬೆಲೆ, ಈಗ ₹8ರಿಂದ ₹10ಕ್ಕೆ ಕುಸಿದಿದೆ. 50 ಕೆ.ಜಿಯ ಮೂಟೆ ಗುಲಾಬಿ ಈರುಳ್ಳಿಯನ್ನು ₹300ರಿಂದ ₹400ಕ್ಕೂ ಖರೀದಿ ಮಾಡುವವರೂ ಇಲ್ಲದಂತಾಗಿದೆ. ಈ ಹಿಂದೆ ಮೂಟೆ ದರ ₹6 ಸಾವಿರದಿಂದ ₹8 ಸಾವಿರದವರೆಗೂ ಇತ್ತು.

ಔಷಧ ಗುಣಗಳಿಂದಾಗಿ ಗುಲಾಬಿ ಈರುಳ್ಳಿಗೆ ವಿದೇಶದಲ್ಲಿ ಭಾರಿ ಬೇಡಿಕೆ ಇದೆ. ಸ್ಥಳೀಯ ಮಾರುಕಟ್ಟೆಯಲ್ಲಿ ಗುಲಾಬಿ ಈರುಳ್ಳಿಯನ್ನು ಕೇಳುವವರು ಇಲ್ಲದಂತಾಗಿದೆ. ಮನೆಗೆ ಬಳಸುವುದಕ್ಕಿಂತ ಹೆಚ್ಚಾಗಿ ಹೋಟೆಲ್, ಮದುವೆ, ಶುಭ ಕಾರ್ಯಗಳ ಅಡುಗೆಯಲ್ಲಿ ಈ ಈರುಳ್ಳಿ ಬಳಕೆ ಹೆಚ್ಚು. ಅಡುಗೆ ಅನಿಲ ಕೊರತೆಯಿಂದ ಹೋಟೆಲ್ ಬಾಗಿಲು ಮುಚ್ಚಿರುವುದರಿಂದ ಸ್ಥಳೀಯ ಮಾರುಕಟ್ಟೆಯಲ್ಲೂ ಬೇಡಿಕೆ ಕಳೆದುಕೊಂಡಿದೆ.

> ಎರಡು ಎಕರೆಯಲ್ಲಿ ಗುಲಾಬಿ ಈರುಳ್ಳಿ ಬೆಳೆದಿರುವೆ. 300 ಮೂಟೆಗಳಾಗಿವೆ. ಒಂದು ಮೂಟೆ ಈರುಳ್ಳಿ ಬೆಳೆಯಲು ನಮಗೆ ₹500ರಿಂದ ₹600 ವೆಚ್ಚವಾಗುತ್ತದೆ. ಬೇಡಿಕೆ ಇಲ್ಲದೇ ಬೆಳೆ ತೋಟದಲ್ಲಿಯೇ ಉಳಿದಿದೆ
> **ಲಕ್ಷ್ಮಣ,** ರೈತ, ಶಿಡ್ಲಘಟ್ಟ

> ಗುಲಾಬಿ ಈರುಳ್ಳಿಯನ್ನು ಕೇಳುವವರೇ ಇಲ್ಲ. ವಿದೇಶಗಳಿಗೆ ರಫ್ತು ಆಗುತ್ತಿಲ್ಲ. ಬೇಡಿಕೆ ಇಲ್ಲದ ಕಾರಣ ಬೆಲೆ ಕುಸಿದಿದೆ. ಬಹಳ ದಿನ ದಾಸ್ತಾನು ಮಾಡಲೂ ಆಗಲ್ಲ
> **ಮುರಳಿ,** ರೈತ, ಚೇಳೂರು

ಈ ಭಾಗದಲ್ಲಿ ಈರುಳ್ಳಿ ನಿರ್ಜಲೀಕರಣ ಮತ್ತು ಸಂಸ್ಕರಣಾ ಘಟಕಗಳು ಇಲ್ಲದ ಕಾರಣ ರೈತರು ದಾಸ್ತಾನು ಮಾಡಲು ಸಾಧ್ಯವಿಲ್ಲ. ಬೆಳೆದ ಬೆಳೆಯನ್ನು ಜಮೀನಿನಲ್ಲೇ ಬಿಡುವ ಸ್ಥಿತಿಯನ್ನು ರೈತರು ಎದುರಿಸುತ್ತಿದ್ದಾರೆ.

ಗುಲಾಬಿ ಈರುಳ್ಳಿ ಸ್ಥಳೀಯ ಮಾರುಕಟ್ಟೆಗಿಂತ ವಿದೇಶಿ ಮಾರುಕಟ್ಟೆಯನ್ನು ಹೆಚ್ಚಾಗಿ ಅವಲಂಬಿಸಿದೆ. ಸರ್ಕಾರ ಇದನ್ನು ಮೂರು ಅಥವಾ ನಾಲ್ಕು ತಿಂಗಳು ಸಂರಕ್ಷಿಸಿಡಲು ಸೂಕ್ತ ವ್ಯವಸ್ಥೆ ಮಾಡಿಕೊಡಬೇಕು. ಕನಿಷ್ಠ ದರವನ್ನು ನಿಗದಿಪಡಿಸಬೇಕು ಎಂದು ಶಿಡ್ಲಘಟ್ಟ ತಾಲ್ಲೂಕಿನ ಬಶೆಟ್ಟಹಳ್ಳಿ ಗಂಗಾಭವಾನಿ ಎಫ್.ಪಿ.ಒ ಅಧ್ಯಕ್ಷ ವಿಜಯಭಾವರೆಡ್ಡಿ ಆಗ್ರಹಿಸಿದ್ದಾರೆ.



ಶಿಡ್ಲಘಟ್ಟ ತಾಲ್ಲೂಕಿನ ನಲ್ಲೋಜನಹಳ್ಳಿಯಲ್ಲಿ ಗುಲಾಬಿ ಈರುಳ್ಳಿ ದಾಸ್ತಾನು ಮಾಡಲಾಗಿದೆ

ನೆರವಿಗೆ ಕೇಂದ್ರಕ್ಕೆ ಮೊರೆ

ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳ ರೈತರು 'ಬೆಂಗಳೂರು ಗುಲಾಬಿ ಈರುಳ್ಳಿ' ಬೆಳೆಯುತ್ತಿದ್ದಾರೆ. ಯುದ್ಧದ ಪರಿಣಾಮ ಈ ರಫ್ತು ಆಧಾರಿತ ಬೆಳೆಯ ಮಾರುಕಟ್ಟೆ ಕುಸಿದಿದೆ. ಆದ್ದರಿಂದ ಕೇಂದ್ರ ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಎಂದು ಸಂಸದ ಡಾ.ಕೆ.ಸುಧಾಕರ್, ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಮತ್ತು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪತ್ರ ಬರೆದಿದ್ದಾರೆ.

ಮಾರಾಟವಾಗದೇ ಈರುಳ್ಳಿ ರಾಶಿಗಳು ಕೊಳೆಯುವ ಭೀತಿ ಇದೆ. ತಕ್ಷಣ ಮಾರುಕಟ್ಟೆ ಮಧ್ಯಸ್ಥಿಕೆ ಯೋಜನೆ ಅಥವಾ ನೇರ ಖರೀದಿ ಪ್ರಕ್ರಿಯೆ ಆರಂಭಿಸಬೇಕು ಎಂದು ಕೋರಿದ್ದಾರೆ.

ಈ ಭಾಗದಲ್ಲಿ ಈರುಳ್ಳಿ ನಿರ್ಜಲೀಕರಣ ಮತ್ತು ಉಪ್ಪಿನಕಾಯಿ ತಯಾರಿಕಾ ಘಟಕಗಳಂತಹ ಸಂಸ್ಕರಣಾ ಘಟಕ, ಮೂಲಸೌಕರ್ಯ ಅಭಿವೃದ್ಧಿಪಡಿಸಬೇಕು. ಇದರಿಂದ ರೈತರು ಕೇವಲ ಹಸಿ ಈರುಳ್ಳಿಯ ರಫ್ತಿನ ಮೇಲೆ ಅವಲಂಬಿತರಾಗುವುದು ತಪ್ಪುತ್ತದೆ. ಕೇಂದ್ರ ಸರ್ಕಾರ ಕೂಡಲೇ ಸ್ಪಂದಿಸಿ ಬೆಳೆಗಾರರ ರಕ್ಷಣೆಗೆ ಧಾವಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

₹15,296 ಕೋಟಿ ಅಂಚೆ ಇಲಾಖೆಗೆ ವರಮಾನ

ನವದೆಹಲಿ (ಪಿಟಿಐ): 2025-26ರ ಪೂರ್ಣ ಆರ್ಥಿಕ ವರ್ಷದಲ್ಲಿ ಅಂಚೆ ಇಲಾಖೆಯು ₹15,296 ಕೋಟಿ ವರಮಾನ ಗಳಿಸಿದೆ ಎಂದು ಕೇಂದ್ರ ದೂರಸಂಪರ್ಕ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸೋಮವಾರ ತಿಳಿಸಿದ್ದಾರೆ.

2024-25ರ ಆರ್ಥಿಕ ವರ್ಷದಲ್ಲಿ ₹13,218 ಕೋಟಿ ವರಮಾನ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ವರಮಾನದಲ್ಲಿ ಶೇ 16ರಷ್ಟು ಹೆಚ್ಚಳವಾಗಿದೆ ಎಂದು ಹೇಳಿದ್ದಾರೆ. ಒಟ್ಟು ವೆಚ್ಚವು ₹26,559 ಕೋಟಿಯಾಗಿದೆ. ವರಮಾನ ಮತ್ತು ವೆಚ್ಚದ ನಡುವಿನ ಅಂತರವು ₹11 ಸಾವಿರ ಕೋಟಿಗೂ ಹೆಚ್ಚಿದೆ. 2024-25ರಲ್ಲಿ ಇದು ₹12,500 ಕೋಟಿಯಷ್ಟಿತ್ತು.

ಅಂಚೆ ಕಚೇರಿ ಉಳಿತಾಯ ಯೋಜನೆಗಳಿಂದ ₹7,756 ಕೋಟಿ ಸಂಗ್ರಹವಾಗಿದೆ.

ಇದು ಅಂಚೆ ಇಲಾಖೆಯು ಅತಿ ಹೆಚ್ಚು ವರಮಾನ ಗಳಿಸಿದ ಆರ್ಥಿಕ ವರ್ಷವಾಗಿದೆ. ಇಲಾಖೆಯು ನೀಡುವ ಸೇವೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹೊಸ ಗ್ರಾಹಕರ ಸೇರ್ಪಡೆಯಲ್ಲಿ ಏರಿಕೆಯಾಗುತ್ತಿದೆ. ಮುಂದಿನ ಆರ್ಥಿಕ ವರ್ಷದಲ್ಲೂ ಇಲಾಖೆಯು ಹೆಚ್ಚಿನ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ ಎಂದು ತಿಳಿಸಿದ್ದಾರೆ.

ಮಾತುಕತೆಗೆ ಇರಾನ್ ಹಿಂದೇಟು

ಒಂದನೇ ಪುಟದಿಂದ....

ಪಾಕಿಸ್ತಾನದ ಗೃಹ ಸಚಿವ ಮೊಹ್ಸಿನ್ ನಖ್ವಿ ಅವರು ಸೋಮವಾರ ಪಾಕಿಸ್ತಾನದಲ್ಲಿರುವ ಅಮೆರಿಕದ ರಾಜತಾಂತ್ರಿಕ ಅಧಿಕಾರಿ ನತಾಲಿ ಬೇಕರ್ ಅವರನ್ನು ಭೇಟಿಯಾಗಿ, ಭದ್ರತಾ ವ್ಯವಸ್ಥೆ ಸೇರಿದಂತೆ ಮಾತುಕತೆಗೆ ನಡೆಸಿರುವ ಸಿದ್ಧತೆಯ ಬಗ್ಗೆ ವಿವರಿಸಿದ್ದಾರೆ. ಇರಾನ್ ರಾಯಭಾರ ಕಚೇರಿಯ ಅಧಿಕಾರಿಗಳನ್ನೂ ಅವರು ಭೇಟಿಯಾಗಿದ್ದಾರೆ.

'ಪಾಕ್ ಉಪಪ್ರಧಾನಿ ಇಶಾಕ್ ಡಾರ್ ಅವರು ಇರಾನ್ ವಿದೇಶಾಂಗ ಸಚಿವರಿಗೆ ಸೋಮವಾರ ಕರೆ ಮಾಡಿದ್ದು, ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆ ಕಾಪಾಡಲು ಹಾಗೂ ಎಲ್ಲ ಸಮಸ್ಯೆಗಳನ್ನು ಪರಿಹರಿಸಲು ಮಾತುಕತೆಯ ಪ್ರಾಮುಖ್ಯವನ್ನು ಒತ್ತಿ ಹೇಳಿದ್ದಾರೆ' ಎಂದು ಸಚಿವಾಲಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಜಪಾನ್: 7.5 ತೀವ್ರತೆಯ ಭೂಕಂಪ

ಟೊಕಿಯೊ (ಎಪಿ): ಉತ್ತರ ಜಪಾನಿನ ಕರಾವಳಿಯಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, ಪ್ರದೇಶದಲ್ಲಿ ಸುನಾಮಿ ಅಪ್ಪಳಿಸುವ ಅಪಾಯವಿದೆ ಎಂದು ದೇಶದ ಹವಾಮಾನ ಸಂಸ್ಥೆ ಎಚ್ಚರಿಕೆ ನೀಡಿದೆ.

ಉತ್ತರ ಜಪಾನ್‌ನ ಸ್ಯಾನ್ರಿಕು ಕರಾವಳಿಯಲ್ಲಿ ಸಂಜೆ 4:53ರ ಸುಮಾರಿಗೆ ಸಮುದ್ರ ಮಟ್ಟದಿಂದ ಸುಮಾರು 10 ಕಿ.ಮೀ. ಆಳದಲ್ಲಿ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 7.5 ರಷ್ಟು ತೀವ್ರತೆ ದಾಖಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಇವಾಟೆ ಪ್ರಾಂತ್ಯದ ಕುಜಿ ಬಂದರಿನಲ್ಲಿ ಸುಮಾರು 2.6 ಅಡಿ ಎತ್ತರದ ಸುನಾಮಿ ಪತ್ತೆಯಾಗಿದ್ದು, ಪ್ರಾಂತ್ಯದ ಮತ್ತೊಂದು ಬಂದರಿನಲ್ಲಿ 1.3 ಅಡಿ ಎತ್ತರದ ಸಣ್ಣ ಸುನಾಮಿ ಎದ್ದಿದೆ ಎಂದು ಸಂಸ್ಥೆ ತಿಳಿಸಿದೆ.

ಪ್ರದೇಶದ ನಿವಾಸಿಗಳು ತಕ್ಷಣವೇ ಕರಾವಳಿ ಅಥವಾ ನದಿ ತೀರದಿಂದ ದೂರವಿದ್ದು, ಎತ್ತರದ ಪ್ರದೇಶದಲ್ಲಿ ಆಶ್ರಯ ಪಡೆಯುವಂತೆ ಸಂಸ್ಥೆ ಕೇಳಿಕೊಂಡಿದೆ. ಜೊತೆಗೆ, ಸುಮಾರು ಒಂದು ವಾರದವರೆಗೆ ಸಂಭವನಿಯ ಭೂಕಂಪದ ಬಗ್ಗೆಯೂ ಜನರಿಗೆ ಎಚ್ಚರಿಕೆ ನೀಡಿದೆ.

ಫೈಸಲ್ ಜೊತೆಗೆ ಡೊಭಾಲ್ ಮಾತುಕತೆ

ರಿಯಾದ್, ಸೌದಿ ಅರೇಬಿಯಾ (ಪಿಟಿಐ): ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಸೌದಿ ಅರೇಬಿಯಾದ ಹಿರಿಯ ನಾಯಕರನ್ನು ಭೇಟಿಯಾಗಿ ದ್ವಿಪಕ್ಷೀಯ ಸಂಬಂಧ, ಪ್ರಾದೇಶಿಕ ಸ್ಥಿತಿಗತಿ ಹಾಗೂ ಪರಸ್ಪರ ಹಿತಾಸಕ್ತಿಯ ವಿಚಾರಗಳ ಕುರಿತಂತೆ ಮಾತುಕತೆ ನಡೆಸಿದರು.

ಭಾನುವಾರ ರಾತ್ರಿ ರಿಯಾದ್‌ಗೆ ಬಂದಿಳಿದ ಡೊಭಾಲ್ ಅವರನ್ನು ವಿಮಾನ ನಿಲ್ದಾಣದಲ್ಲಿ ಭಾರತದ ರಾಯಭಾರಿ ಸುಹೇಲ್ ಖಾನ್, ಸೌದಿ ಅರೇಬಿಯಾ ರಾಜಕೀಯ ವ್ಯವಹಾರಗಳ ಉಪ ಸಚಿವ ಸೌದ್ ಅಲ್ ಸತಿ ಬರಮಾಡಿಕೊಂಡರು.

ಡೊಭಾಲ್ ಅವರು ಸೌದಿಯ ವಿದೇಶಾಂಗ ಸಚಿವ ಫೈಸಲ್ ಬಿನ್ ಫರ್ಹಾನ್, ಇಂಧನ ಸಚಿವ ಅಬ್ದುಲ್ ಅಜೀಜ್ ಬಿನ್ ಸಲ್ಮಾನ್ ಹಾಗೂ ರಾಷ್ಟ್ರೀಯ ಭದ್ರತಾ ಸಲಹೆಗಾರ ಮಸೇದ್ ಅಲ್ ಐಬಾನ್ ಜೊತೆಗೆ ಸೋಮವಾರ ಸಭೆ ನಡೆಸಿದರು.

'ದ್ವಿಪಕ್ಷೀಯ ಸಂಬಂಧ ವೃದ್ಧಿ, ಪ್ರಾದೇಶಿಕ ಸ್ಥಿತಿಗತಿ ಹಾಗೂ ಪರಸ್ಪರ ಹಿತಾಸಕ್ತಿಯ ವಿಚಾರಗಳ ಕುರಿತಂತೆ ಸಭೆ ನಡೆಸಿದರು' ಎಂದು ಸೌದಿ ಅರೇಬಿಯಾದಲ್ಲಿರುವ ಭಾರತದ ರಾಯಭಾರ ಕಚೇರಿಯಯು 'ಎಕ್ಸ್'ನಲ್ಲಿ ತಿಳಿಸಿದೆ.



ಸೌದಿ ಅರೇಬಿಯಾದ ರಿಯಾದ್ ನಗರದಲ್ಲಿ ಸೋಮವಾರ ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಸೌದಿ ಅರೇಬಿಯಾದ ವಿದೇಶಾಂಗ ಸಚಿವ ಫೈಸಲ್ ಬಿನ್ ಫರ್ಹಾನ್ ಜೊತೆಗೆ ಸಭೆ ನಡೆಸಿದರು —ಪಿಟಿಐ ಚಿತ್ರ

ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಅಮೆರಿಕ ಹಾಗೂ ಇರಾನ್ ನಡುವೆ ಈ ವಾರ ಮತ್ತೊಂದು ಸುತ್ತಿನ ಮಾತುಕತೆ ನಡೆಯಲಿದ್ದು, ಈ ಮಧ್ಯದಲ್ಲೇ ಡೊಭಾಲ್ ಅವರ ಭೇಟಿಯು ಮಹತ್ವ ಪಡೆದುಕೊಂಡಿದೆ.

ಮೋದಿ ಉದ್ಘಾಟಿಸಬೇಕಿದ್ದ ಘಟಕಕ್ಕೆ ಬೆಂಕಿ

ಜೈಪುರ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಂದ ಮಂಗಳವಾರ ಉದ್ಘಾಟನೆಗೊಳ್ಳಬೇಕಿದ್ದ ರಾಜಸ್ಥಾನದ ಪೆಟ್ರೋಲಿಯಂ ಉತ್ಪನ್ನಗಳ ಸಂಸ್ಕರಣಾ ಘಟಕವೊಂದರಲ್ಲಿ ಸೋಮವಾರ ಬೆಂಕಿ ಅವಘಡ ಸಂಭವಿಸಿದೆ.

'ಉದ್ಘಾಟನೆಗೆ ಒಂದು ದಿನ ಮುನ್ನ ಈ ಅವಘಡ ಸಂಭವಿಸಿರುವ ಕಾರಣ ಮಂಗಳವಾರ ಆಯೋಜನೆಗೊಂಡಿದ್ದ ಕಾರ್ಯಕ್ರಮವನ್ನು ಮುಂದೂಡಲಾಗಿದೆ' ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.

ಹಾನಿಯ ಬಗ್ಗೆ ಯಾವುದೇ ವರದಿಯಾಗಿಲ್ಲ. ಘಟನೆಯ ಕುರಿತು ತನಿಖೆಗೆ ಆದೇಶಿಸಲಾಗಿದೆ.

ಭಾರತದ ಮೊದಲು ಹಸಿರು ಸಂಯೋಜಿತ ಸಂಸ್ಕರಣಾ ಘಟಕ ಮತ್ತು ಪೆಟ್ರೋಕೆಮಿಕಲ್ ಕಾಂಪ್ಲೆಕ್ಸ್ ಇದಾಗಿದ್ದು, ₹74,450 ಕೋಟಿಗೂ ಅಧಿಕ ವೆಚ್ಚದಲ್ಲಿ ನಿರ್ಮಾಣವಾಗಿದೆ.

ಕಚ್ಚಾ ತೈಲ ಸಂಸ್ಕರಣಾ ಘಟಕದಲ್ಲಿ ಬೆಂಕಿ ಹತ್ತಿಕೊಂಡ ಪರಿಣಾಮ ಅವಘಡ ಸಂಭವಿಸಿದೆ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ.

ಈ ಘಟನೆ ಸರ್ಕಾರದ ಸುರಕ್ಷತಾ ವೈಫಲ್ಯಕ್ಕೆ ಸಾಕ್ಷಿ ಎಂದು ವಿಪಕ್ಷಗಳು ಟೀಕಿಸಿವೆ.



ಸಂಸ್ಕರಣಾ ಘಟಕಕ್ಕೆ ಬೆಂಕಿ ಹತ್ತಿಕೊಂಡ ಪರಿಣಾಮ ಹೊಗೆ ಆವರಿಸಿತ್ತು —ಪಿಟಿಐ ಚಿತ್ರ

ಫಲಾನುಭವಿಗಳ ಭೇಟಿ ಮಾಡಿದ ಉಪ ರಾಷ್ಟ್ರಪತಿ

ಕೊಲಂಬೊ (ಪಿಟಿಐ): ಭಾರತೀಯ ವಸತಿ ಯೋಜನೆಯಡಿ ನಿರ್ಮಾಣಗೊಂಡ ಮನೆಗಳನ್ನು ಪಡೆದ ತಮಿಳು ಮೂಲದ ಫಲಾನುಭವಿಗಳನ್ನು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಸೋಮವಾರ ಭೇಟಿಯಾದರು.

ರಾಧಾಕೃಷ್ಣನ್ ಅವರು ಎರಡು ದಿನ ಶ್ರೀಲಂಕಾಕ್ಕೆ ಭೇಟಿ ನೀಡಿದ್ದು, ಅಲ್ಲಿನ ನುವಾರಾ ಎಲಿಯಾ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು.

'ಶ್ರೀಲಂಕಾದ ತಮಿಳು ಜನರಿಗಾಗಿ ಭಾರತ ಸರ್ಕಾರವು ಈವರೆಗೆ 50,000 ಮನೆಗಳನ್ನು ನಿರ್ಮಿಸಿದೆ. ಯೋಜನೆಯ ನಾಲ್ಕನೇ ಹಂತದಲ್ಲಿ 10,000 ಮನೆಗಳನ್ನು ಹಸ್ತಾಂತರಿಸಲಾಗುವುದು' ಎಂದು ರಾಧಾಕೃಷ್ಣನ್ ಅವರು ಸಾಮಾಜಿಕ ಮಾಧ್ಯಮದಲ್ಲಿ ಬರೆದುಕೊಂಡಿದ್ದಾರೆ.

ಹಲವು ಒಪ್ಪಂದಗಳಿಗೆ ಸಹಿ: ರಾಧಾಕೃಷ್ಣನ್ ಅವರು ದ್ವೀಪ ರಾಷ್ಟ್ರ ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ಡಿಸ್ಸಾನಾಯಕೆ ಅವರೊಂದಿಗೆ ಸಮಾಲೋಚನೆ ನಡೆಸಿ, ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸುವ ನಿಟ್ಟಿನಲ್ಲಿ ಹಲವು ಒಪ್ಪಂದಗಳಿಗೆ ಸಹಿ ಮಾಡಿದರು.

ಶ್ರೀಲಂಕಾದಲ್ಲಿ ಅನುಷ್ಠಾನಗೊಂಡಿರುವ ಭಾರತದ ಯೋಜನೆಗಳ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು.

10 ಸಾವಿರಕ್ಕೂ ಅಕ್ರಮ ಸಿಮ್ ಖರೀದಿ ವಂಚನೆ

ಪ್ರಮುಖ ಆರೋಪಿ ಬಂಧನ

ನವದೆಹಲಿ (ಪಿಟಿಐ): ಸೈಬರ್ ಅಪರಾಧಗಳಲ್ಲಿ ಬಳಸಲು 10,000ಕ್ಕೂ ಹೆಚ್ಚು ಸಿಮ್ ಕಾರ್ಡ್‌ಗಳನ್ನು ಅಕ್ರಮವಾಗಿ ಪಡೆದುಕೊಂಡಿದ್ದ ಗುವಾಹಟಿಯ ಪ್ರಮುಖ ಸಂಚುಕೋರನನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

'ಆರೋಪಿ ಉಬೈದ್ ಉಲ್ಲಾಹ್‌ನನ್ನು ಭಾನುವಾರ ಬಂಧಿಸಲಾಗಿದೆ. ಆರೋಪಿಯು ಗುವಾಹಟಿಯಲ್ಲಿ ಅಕ್ರಮವಾಗಿ ನೀಡಲಾದ ಸಿಮ್ ಕಾರ್ಡ್‌ಗಳನ್ನು ಸಂಗ್ರಹಿಸುವವನಾಗಿದ್ದು, 2025ರ ಆಗಸ್ಟ್ ತಲೆಮರೆಸಿಕೊಂಡಿದ್ದನು' ಎಂದು ಸಿಬಿಐ ವಕ್ತಾರರು ಹೇಳಿದ್ದಾರೆ.

'ಆರೋಪಿಯು ಅಕ್ರಮವಾಗಿ ನೀಡಲಾದ ಸುಮಾರು 10,000 ಸಿಮ್ ಕಾರ್ಡ್‌ಗಳನ್ನು ಪಡೆಯಲು ಹಲವು ಬ್ಯಾಂಕ್ ಖಾತೆಗಳ ಮೂಲಕ ಸುಮಾರು ₹67 ಲಕ್ಷಗಳನ್ನು ಪಾಯಿಂಟ್ ಆಫ್ ಸೇಲ್ (ಪಿಒಎಸ್) ಏಜೆಂಟ್‌ಗಳಿಗೆ ವರ್ಗಾಯಿಸಿದ್ದಾನೆ ಎಂಬುದು ತನಿಖೆಯಿಂದ ತಿಳಿದುಬಂದಿದೆ' ಎಂದು ಅವರು ತಿಳಿಸಿದ್ದಾರೆ.

'ಈ ಸಿಮ್ ಕಾರ್ಡ್‌ಗಳನ್ನು ಸ್ವೀಕರಿಸಲು ಬಳಸಲಾದ ಕೊರಿಯರ್ ವಹಿವಾಟುಗಳ ಬಗ್ಗೆಯೂ ಪುರಾವೆಗಳು ದೊರಕಿವೆ' ಎಂದು ಅವರು ಹೇಳಿದ್ದಾರೆ. ಕಾರ್ಯಾಚರಣೆಯಲ್ಲಿರುವ 'ಆಪರೇಷನ್ ಚಕ್ರ-ವಿ' ಭಾಗವಾಗಿ ಈ ಬಂಧನ ನಡೆದಿದ್ದು, ಈ ಮೂಲಕ ಸಿಬಿಐ ಭಾರತದಾದ್ಯಂತ ಸೈಬರ್ ಅಪರಾಧದ ವಿರುದ್ಧ ಕಠಿಣ ಕ್ರಮ ತೀವ್ರಗೊಳಿಸಿದೆ.

8 ರಾಜ್ಯಗಳಲ್ಲಿ ಶೋಧ, 10 ಬಂಧನ

ಕಳೆದ ವರ್ಷ ಪಿಒಎಸ್ ಏಜೆಂಟ್‌ಗಳು ಅಕ್ರಮವಾಗಿ ಸಿಮ್ ಕಾರ್ಡ್‌ಗಳನ್ನು ನೀಡುತ್ತಿದ್ದರು. ಇದರ ಮೂಲಕ ಡಿಜಿಟಲ್ ಅರೆಸ್ಟ್ ಹೆಸರಿನಲ್ಲಿ ಸುಲಿಗೆ, ಸಾಲ ವಂಚನೆಗಳು ಮತ್ತು ಹೂಡಿಕೆ ವಂಚನೆಗಳಂತಹ ಅಪರಾಧಗಳಲ್ಲಿ ತೊಡಗಿರುವ ಸೈಬರ್ ಅಪರಾಧಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದರು ಎಂಬ ಆರೋಪದ ಮೇಲೆ ಸಿಬಿಐ ಪ್ರಕರಣ ದಾಖಲಿಸಿತ್ತು. 'ತನಿಖೆಯ ವೇಳೆ, 8 ರಾಜ್ಯಗಳ ಸುಮಾರು 45 ಸ್ಥಳಗಳಲ್ಲಿ ಶೋಧ ನಡೆಸಲಾಯಿತು. ನಕಲಿ ಅಥವಾ ಅಕ್ರಮವಾಗಿ ಪಡೆದ ಸಿಮ್ ಕಾರ್ಡ್‌ಗಳ ವಿತರಣೆಯಲ್ಲಿ ಭಾಗಿಯಾಗಿದ್ದ 10 ಪಿಒಎಸ್ ಏಜೆಂಟ್‌ಗಳನ್ನು ಬಂಧಿಸಲಾಯಿತು' ಸಿಬಿಐ ವಕ್ತಾರರು ತಿಳಿಸಿದ್ದಾರೆ.

ತನ್ನ ಕಂದಮ್ಮಗಳೂ ಸೇರಿ 8 ಮಕ್ಕಳನ್ನು ಕೊಂದ

ಶ್ರೀವ್‌ಪೋರ್ಟ್, ಅಮೆರಿಕ (ಎಎಫ್‌ಪಿ): ಕೌಟುಂಬಿಕ ಕಾರಣದಿಂದ ವ್ಯಕ್ತಿಯೊಬ್ಬ ತನ್ನ ಏಳು ಮಕ್ಕಳು ಸೇರಿದಂತೆ ಎಂಟು ಮಕ್ಕಳನ್ನು ಗುಂಡಿಕ್ಕಿ ಹತ್ಯೆ ಮಾಡಿದ ಪ್ರಕರಣ ಅಮೆರಿಕದ ದಕ್ಷಿಣ ಭಾಗದ ಲೂಸಿಯಾನದಲ್ಲಿ ನಡೆದಿದೆ.

ದಾಳಿಯಲ್ಲಿ ಇಬ್ಬರು ಮಹಿಳೆಯರಿಗೂ ತೀವ್ರವಾದ ಗಾಯಗಳಾಗಿವೆ. ಇದರಲ್ಲಿ ಮೃತ ಮಕ್ಕಳ ತಾಯಿಯೂ ಸೇರಿದ್ದಾರೆ.

'ಮೃತರಲ್ಲಿ ಮೂವರು ಗಂಡು, ಐದು ಹೆಣ್ಣುಮಕ್ಕಳಿದ್ದು, ಮೂರರಿಂದ 11 ವರ್ಷದವರಾಗಿದ್ದಾರೆ' ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಏಳು ಮಂದಿ ಮಕ್ಕಳು ಒಡಹುಟ್ಟಿದವರಾಗಿದ್ದು, ಮತ್ತೊಂದು ಮಗು ಸೋದರ ಸಂಬಂಧಿಯಾಗಿದೆ.

'ದಾಳಿಯ ಬಳಿಕ ದಾಳಿಕೋರ ಸ್ಥಳದಿಂದ ಪರಾರಿಯಾಗಲು ಯತ್ನಿಸಿದನು. ತಕ್ಷಣವೇ ಬೆನ್ನತ್ತಿದ ಪೊಲೀಸರು ಆತನ ಬೆನ್ನುಹತ್ತಿ ಗುಂಡಿನ ದಾಳಿ ನಡೆಸಿ ಹತ್ಯೆ ಮಾಡಿದ್ದಾರೆ. ದಾಳಿಕೋರರನ್ನು ಶಮರ್ ಎಲ್ಕಿನ್ಸ್ (31) ಎಂದು ಗುರುತಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 20-04-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1680 (1710)
ಒಂದು ವಾರದ ಡೆಲಿವರಿ	1675 (1705)
ಪಾಮ್ ವಾರದ ಡೆಲಿವರಿ	1423 (1438)
ಸೂರ್ಯಕಾಂತಿ ಎಣ್ಣೆ ಕಚ್ಚಾ	1565 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,52,100 (1,52,000)
ಬೆಳ್ಳಿ ಕೆ.ಜಿಗೆ	2,52,500 (2,54,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ



ಐತಿಹಾಸಿಕ ಕಥೆಯಲ್ಲಿ ಪ್ರೇಮ್

'ನೆನಪಿರಲಿ', 'ಪ್ರೇಮಂ ಪೂಜ್ಯಂ' ಸಿನಿಮಾ ಖ್ಯಾತಿಯ ಪ್ರೇಮ್ ಫೀಲ್‌ಗುಡ್ ಸಿನಿಮಾಗಳಲ್ಲಿ ಹೆಚ್ಚಾಗಿ ಕಾಣಿಸಿಕೊಂಡವರು. ನಮ್ಮ ನೆಲದ ಕಥೆಯನ್ನು ಹೇಳುವ ಸಿನಿಮಾಗಳ ಕೊರತೆ ಇದೆ ಎನ್ನುವ ಮಾತು ಕೇಳಿಬರುತ್ತಿರುವ ಸಂದರ್ಭದಲ್ಲೇ ಐತಿಹಾಸಿಕ ಕಥೆಯುಳ್ಳ ಸಿನಿಮಾವೊಂದರಲ್ಲಿ ಪ್ರೇಮ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

2023ರಲ್ಲಿ ತೆರೆಕಂಡ 'ಜಲಪಾತ' ಸಿನಿಮಾ ನಿರ್ಮಿಸಿದ ಶ್ರೀ ಬ್ಯಾನರ್‌ನ ಅಡಿಯಲ್ಲಿ, ಅದೇ ತಂಡ ಚಿತ್ರಿಸುತ್ತಿರುವ ಹೊಸ ಸಿನಿಮಾ ಇದಾಗಿದೆ. 'ಈ ಸಿನಿಮಾದಲ್ಲೂ ಪರಿಸರದ ಕುರಿತಾದ ವಿಷಯಗಳಿದ್ದು, ಐತಿಹಾಸಿಕ ಹಿನ್ನೆಲೆಯ ಕಥೆಯೂ ಒಳಗೊಂಡಿದೆ. ಸಿನಿಮಾವು ಮಾಸ್ ಶೈಲಿಯಲ್ಲಿರುವುದು ವಿಶೇಷವಾಗಿದೆ. ಇತಿಹಾಸ ಮತ್ತು ವರ್ತಮಾನಕ್ಕೆ ಕೊಂಡಿ ಬೆಸೆಯುತ್ತಾ ವಿಭಿನ್ನವಾಗಿ ಸಾಗುವ ಈ ಚಿತ್ರವು ಜಾಣಗೆರೆ ವೆಂಕಟರಾಮಯ್ಯ ಅವರ ಕಾದಂಬರಿಯನ್ನು ಆಧರಿಸಿದೆ' ಎಂದಿದೆ ಚಿತ್ರತಂಡ.

ಇತ್ತೀಚೆಗೆ ಪ್ರೇಮ್ ಅವರ ಜನ್ಮದಿನದಂದು ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಹರಿತವಾದ ನೋಟ, ಕೈಯಲ್ಲಿ ಹೊಳೆವ ಮುದ್ರೆಯುಂಗುರದೊಂದಿಗೆ ಪಾತ್ರವನ್ನು ಪರಿಚಯಿಸಲಾಗಿದೆ. ಪ್ರೇಮ್ ಅವರು ಈ ಪಾತ್ರದ ಮೂಲಕ ಹೊಸದೊಂದು ಅವತಾರದಲ್ಲಿ ಪ್ರೇಕ್ಷಕರ ಮುಂದೆ ಬರಲಿದ್ದಾರೆ. ಶೃಂಗೇರಿಯ ರಂಗಕರ್ಮಿ, ಯಕ್ಷಗಾನ, ಕಿರುತೆರೆ, ಹಿರಿತೆರೆಯ ಅನುಭವವುಳ್ಳ ರಮೇಶ್ ಬೇಗಾರ್ ಬರವಣಿಗೆ ಜೊತೆಗೆ ಈ ಸಿನಿಮಾ ನಿರ್ದೇಶಿಸಿದ್ದಾರೆ. 'ಜಲಪಾತ' ಸಿನಿಮಾವನ್ನು ಇವರೇ ನಿರ್ದೇಶಿಸಿದ್ದರು.

ಈಗಾಗಲೇ ಈ ಸಿನಿಮಾದಲ್ಲಿನ ಪ್ರೇಮ್ ಅವರ ಭಾಗದ ಚಿತ್ರೀಕರಣ ಪೂರ್ಣಗೊಂಡಿದೆ. ಈ ಚಿತ್ರದ ಪೂರ್ತಿವಿವರ ಮತ್ತು ಶೀರ್ಷಿಕೆಯನ್ನು ಒಂದು ಟೀಸರ್ ಮೂಲಕ ಹಂಚಿಕೊಳ್ಳಲಾಗುವುದು ಎಂದು ರಮೇಶ್ ಬೇಗಾರ್ ತಿಳಿಸಿದ್ದಾರೆ. ❖

'ಚೆಂಕೋಲ್'ಗೆ ಪ್ರಜ್ವಲ್ ಸಾಥ್


ಆರ್ಯನ್ ಸಂತೋಷ್

'ಡಿಯರ್ ಸತ್ಯ' ಹಾಗೂ 'ನೂರು ಜನ್ಮಕು' ಸಿನಿಮಾಗಳ ಖ್ಯಾತಿಯ ಆರ್ಯನ್ ಸಂತೋಷ್ ನಿರ್ದೇಶನಕ್ಕಿಳಿದಿದ್ದಾರೆ. ಅವರ ಚೊಚ್ಚಲ ನಿರ್ದೇಶನದ ಸಿನಿಮಾದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು.

ನಿರ್ದೇಶನದ ಜೊತೆಗೆ ಆರ್ಯನ್ ಸಂತೋಷ್ ಅವರೇ ಚಿತ್ರದಲ್ಲಿ ನಾಯಕರಾಗಿ ನಟಿಸಿದ್ದು, ಸಿನಿಮಾದ ಟೀಸರ್ ಅನ್ನು ನಟ ಪ್ರಜ್ವಲ್ ದೇವರಾಜ್ ರಿಲೀಸ್ ಮಾಡಿದರು.

'ಸ್ನೇಹಿತರ ಜೊತೆ ಕೇರಳದ ವಯನಾಡ್‌ನ ಕಾಡಿಗೆ ಹೋದಾಗ ಹೊಳೆದ ಕಥೆ ಇದು. ಅಲ್ಲೊಂದು ಶಿವಲಿಂಗ ನೋಡಿ ಈ ಕಥೆ ಸಿದ್ಧಪಡಿಸಿದೆ. ನಾನೇ ಈ ಚಿತ್ರವನ್ನು ನಿರ್ದೇಶಿಸಿ ನಟಿಸಿದ್ದೇನೆ. ಮನಸ್ವಿ ಮನು, ಶರಣ್ಯ, ಅಕ್ಷಿತಾ ಬೋಪಯ್ಯ ಹಾಗೂ ಪೂಜಾ ಶೆಟ್ಟಿ ಚಿತ್ರದಲ್ಲಿ ಅಭಿನಯಿಸಿದ್ದಾರೆ. 'ಚೆಂಕೋಲ್' ಎಂದರೆ ರಾಜದಂಡ. ಸಿನಿಮಾ ಎರಡು ಭಾಗಗಳಲ್ಲಿ ತೆರೆಕಾಣಲಿದೆ. ಮೊದಲ ಭಾಗದಲ್ಲಿ ನಾಯಕ 'ಚೆಂಕೋಲ್' ಬೆಟ್ಟಕ್ಕೆ ಹೋಗುವ ಪಯಣವಿದೆ. ಎರಡನೇ ಭಾಗದಲ್ಲಿ ಅಗಸ್ತ್ಯ ರಾಜನ ಕಥೆಯನ್ನು ಹೇಳಲಾಗಿದೆ. 1500 ವರ್ಷದ ಹಿಂದಿನ ಕಥೆಯನ್ನು ಈ ಸಿನಿಮಾದಲ್ಲಿ ಹೇಳಲಾಗಿದೆ. ಕೇರಳ, ಚಿಕ್ಕಮಗಳೂರು, ಬೆಂಗಳೂರು, ತಮಿಳುನಾಡು ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದೆ. ಈ ಸಿನಿಮಾ ಫ್ಯಾಂಟಸಿ ಡ್ರಾಮಾ ಕಥಾಹಂದರ ಹೊಂದಿದೆ' ಎನ್ನುತ್ತಾರೆ ಆರ್ಯನ್ ಸಂತೋಷ್.


ವಿಂಟರ್ ಬ್ರಿಜ್ ಸ್ಟುಡಿಯೋಸ್ ಮತ್ತು ಪಿಕ್ಸಲ್ ಒರಿಜಿನಲ್ಸ್ ನಿರ್ಮಿಸಿರುವ ಈ ಚಿತ್ರದಲ್ಲಿ ಮಾನಸ್ವಿ ಮತ್ತು ಶರಣ್ಯ ನಾಯಕಿಯಾಗಿ ನಟಿಸಿದ್ದಾರೆ. ಅರುಣಾ ಬಾಲರಾಜ್, ಸುಂದರ್ ವೀಣಾ, ಅರವಿಂದ್ ರಾವ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ವಿಪಿನ್ ಡಿ ರಾಜ್ ಛಾಯಾಚಿತ್ರಗ್ರಹಣ, ಉಮೇಶ್ ಸಂಕಲನ, ಮಣಿಕಾಂತ್ ಕದ್ರಿ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ಹಾಡುಗಳಿಗೆ ಆಲ್ ಓಕೆ, ಜೋ ಕೋಸ್ಟಾ ಮತ್ತು ಗೌತಮ್ ದಾಸ್ ಸಂಗೀತ ನೀಡಿದ್ದು, ಪ್ರಮೋದ್ ಮರವಂತೆ ಸಾಹಿತ್ಯ ಬರೆದಿದ್ದಾರೆ. ಈ ಸಿನಿಮಾದ ಮೊದಲ ಭಾಗದ ಚಿತ್ರೀಕರಣ ಪೂರ್ಣಗೊಂಡಿದ್ದು, ಬಿಡುಗಡೆಗೆ ಸಿದ್ಧವಿದೆ. ❖

ಮೇಕಪ್‌ಗೇ ಮೂರ್ನಾಲ್ಕು ಗಂಟೆ!


ಅಲ್ಲು ಅರ್ಜುನ್

ತೆಲುಗು ನಟ ಅಲ್ಲು ಅರ್ಜುನ್, ಅಟ್ಲಿ ನಿರ್ದೇಶನದ ಹೊಸ ಸಿನಿಮಾದಲ್ಲಿ 'ರಾಕಾ' ಆಗಿ ತೆರೆ ಮೇಲೆ ಬರಲಿದ್ದಾರೆ. ಅರ್ಧ ಮೃಗ, ಅರ್ಧ ಮನುಷ್ಯನ ಅವತಾರದಲ್ಲಿ ಅವರಿಲ್ಲಿ ಕಾಣಿಸಿಕೊಂಡಿದ್ದು ಈ ಲುಕ್‌ಗಾಗಿ ಅಲ್ಲು ಪ್ರತಿ ದಿನ ಮೂರ್ನಾಲ್ಕು ಗಂಟೆ ವ್ಯಯಿಸಿದ್ದಾರೆ ಎಂದಿದೆ ಚಿತ್ರತಂಡ.

ಸೈಂಟಿಫಿಕ್ ಫಿಕ್ಷನ್ ಆ್ಯಕ್ಷನ್ ಜಾನರ್‌ನ ಈ ಪ್ಯಾನ್ ಇಂಡಿಯಾ ಸಿನಿಮಾವನ್ನು ಸನ್ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿದೆ. ಸಿನಿಮಾದಲ್ಲಿ ಅಲ್ಲು ಅರ್ಜುನ್ ನಾಲ್ಕು ಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಳ್ಳಲಿದ್ದು, ಎರಡು ಸಮಾನಾಂತರ ಜಗತ್ತಿನಲ್ಲಿ ನಡೆಯುವ ಕಥೆ ಹೊಂದಿದೆ ಎನ್ನಲಾಗಿದೆ. ಸಿನಿಮಾದಲ್ಲಿ ಅಲ್ಲು ಅರ್ಜುನ್‌ಗೆ ನಾಯಕಿಯಾಗಿ ದೀಪಿಕಾ ಪಡುಕೋಣೆ ನಟಿಸುತ್ತಿದ್ದಾರೆ. ದೊಡ್ಡ ಬಜೆಟ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಸಿನಿಮಾದಲ್ಲಿ ಪೌರಾಣಿಕ ಸ್ಪರ್ಶವಿದ್ದು, ಅದ್ದೂರಿಯಾದ ಆ್ಯಕ್ಷನ್ ದೃಶ್ಯಗಳಿವೆ. ❖



'ಎಐ'ನಲ್ಲಿ ಮೂಡಿದ ರಾಣಿ ಚೆನ್ನಮ್ಮ

ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಂಡು ಸಂಪೂರ್ಣವಾದ ಸಿನಿಮಾಗಳ ನಿರ್ಮಾಣ ಇತ್ತೀಚೆಗೆ ಹೆಚ್ಚಾಗಿದೆ. ಈ ತಂತ್ರಜ್ಞಾನ ಬಳಸಿಕೊಂಡು 'ರಾಣಿ ಚೆನ್ನಮ್ಮ' ಎನ್ನುವ ಸಿನಿಮಾವನ್ನು ನಿರ್ಮಾಣ ಮಾಡಲಾಗಿದೆ. ಈಚೆಗೆ ಚಿತ್ರದ ಟೀಸರ್ ಬಿಡುಗಡೆಯಾಗಿದೆ.

ಚಿತ್ರವನ್ನು ಲತಾ ಜೈಪ್ರಕಾಶ್ ನಿರ್ಮಾಣ ಮಾಡಿದ್ದು, ಶ್ವೇತಾ ಶೆಟ್ಟಿ ನಿರ್ದೇಶಿಸಿದ್ದಾರೆ. ರಾಣಿ ಚೆನ್ನಮ್ಮನ ಜೀವನಗಾಥೆಯನ್ನು, ಆ ಕಾಲದ ಇತಿಹಾಸವನ್ನು ಆಧುನಿಕ ತಂತ್ರಜ್ಞಾನದ ಮೂಲಕ ಮರುಸೃಷ್ಟಿಗೊಳಿಸುವ ಪ್ರಯತ್ನ ಇದಾಗಿದೆ ಎಂದಿದೆ ಚಿತ್ರತಂಡ. 'ಕಿತ್ತೂರಿನ ಗತ್ತು...ದೇಶಕ್ಕೆ ಗೊತ್ತು' ಎಂಬ ಅಡಿಬರಹ ಈ ಚಿತ್ರಕ್ಕಿದೆ. ಈ ಚಿತ್ರದ ವೈಶಿಷ್ಟ್ಯವೆಂದರೆ, ಚಿತ್ರದಲ್ಲಿನ ದೃಶ್ಯ ವಿನ್ಯಾಸ, ಪಾತ್ರ, ಯುದ್ಧದ ಸನ್ನಿವೇಶಗಳು ಸೇರಿದಂತೆ ಬಹುಪಾಲು ದೃಶ್ಯಗಳನ್ನು ಎಐ ತಂತ್ರಜ್ಞಾನದಿಂದ ರೂಪಿಸಲಾಗಿದೆ. ಸಂಭಾಷಣೆಯನ್ನು ಡಬ್ಬಿಂಗ್ ಮಾಡಲಾಗಿದೆ. ಕನ್ನಡ ಸಿನಿಮಾದಲ್ಲಿ ಇದು ಹೊಸ ಪ್ರಯೋಗವಾಗಿದೆ ಎಂದಿದೆ ಚಿತ್ರತಂಡ. ಸಂಜೀವ್ ರೆಡ್ಡಿ ಸಂಕಲನ, ಶ್ರೀಹರಿ ಸಂಗೀತ ಚಿತ್ರಕ್ಕಿದೆ. ಹಾಡುಗಳನ್ನು ಶಿವನಂಜೆಗೌಡ ಮತ್ತು ವಿ.ನಾಗೇಂದ್ರ ಪ್ರಸಾದ್ ರಚಿಸಿದ್ದಾರೆ. ❖

'ಟ್ರಂಪ್ ಆಜ್ಞೆಯಂತೆ ಮೋದಿ ಇಸ್ರೇಲ್‌ಗೆ'

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ


ರಾಹುಲ್ ಗಾಂಧಿ

ತೂತುಕುಡಿ (ಪಿಟಿಐ): 'ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಜ್ಞೆಯಂತೆ ಇರಾನ್ ಯುದ್ಧ ಆರಂಭಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಭೇಟಿ ನೀಡಿದ್ದರು' ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೋಮವಾರ ಆರೋಪಿಸಿದ್ದಾರೆ.

ಇಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಬಿಜೆಪಿಯನ್ನು ಗುರಿಯಾಗಿಸಿಕೊಂಡು ಮಾತನಾಡಿದ ರಾಹುಲ್ ಗಾಂಧಿ ಅವರು, 'ಟ್ರಂಪ್ ಹೇಳಿದಂತೆ ಮೋದಿ ಕೇಳುತ್ತಾರೆ' ಎಂದು ಪುನರುಚ್ಚರಿಸಿದರು.

'ಇರಾನ್ ಯುದ್ಧ ಆರಂಭಕ್ಕೂ ಮೊದಲು, ಮೋದಿ ಅವರಿಗೆ ಇದ್ದಕ್ಕಿದ್ದಂತೆ ಇಸ್ರೇಲ್‌ಗೆ ಹೋಗುವಂತೆ ಸೂಚಿಸಲಾಯಿತು. ಅದರಂತೆ ನಮ್ಮ ಪ್ರಧಾನಿ ನಡೆದುಕೊಂಡರು. ಇದಕ್ಕೆ ಮುಖ್ಯ ಕಾರಣ ಏನೆಂದರೆ ಎಪ್‌ಸ್ಟೈನ್ ಫೈಲ್ಸ್ ಹಾಗೂ ಅದಾನಿ' ಎಂದು ವಾಗ್ದಾಳಿ ನಡೆಸಿದರು.

ಬಿಜೆಪಿಗೆ ಶರಣಾದ ಎಐಎಡಿಎಂಕೆ ನಾಯಕತ್ವ: ಕನ್ಯಾಕುಮಾರಿಯಲ್ಲಿ ನಡೆದ ಮತ್ತೊಂದು ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ರಾಹುಲ್ ಗಾಂಧಿ, 'ಭ್ರಷ್ಟಾಚಾರದ ಸುಳಿಯಲ್ಲಿ ಸಿಲುಕಿರುವ ಎಐಎಡಿಎಂಕೆ ನಾಯಕತ್ವವು ಬಿಜೆಪಿಗೆ ಶರಣಾಗಿದೆ' ಎಂದು ಆರೋಪಿಸಿದರು.

'ಬಿಜೆಪಿಯು ತಮಿಳುನಾಡು ಪ್ರವೇಶಿಸಲು ಎಐಎಡಿಎಂಕೆಯು ವಾಹನವಾಗಿದೆ. ದ್ರಾವಿಡ ಸಿದ್ಧಾಂತವನ್ನು ದ್ವೇಷಿಸುವ ಆರ್‌ಎಸ್‌ಎಸ್ ಕೂಡ ತಮಿಳುನಾಡನ್ನು ಆಳಲು ಯೋಜಿಸಿದೆ' ಎಂದು ದೂರಿದ್ದಾರೆ.

'ಪ್ರತಿ ರಾಜ್ಯವು ತನ್ನದೇ ಆದ ಧ್ವನಿ ಹಾಗೂ ಪ್ರಾತಿನಿಧ್ಯವನ್ನು ಹೊಂದಿರಬೇಕು' ಎಂದು ಪ್ರತಿಪಾದಿಸಿದ ರಾಹುಲ್ ಗಾಂಧಿ, 'ಆಯಾ ರಾಜ್ಯದ ಜನರೇ ಅಲ್ಲಿನ ಆಡಳಿತದ ಚುಕ್ಕಾಣಿ ಹಿಡಿಯಬೇಕು. ಒಂದು ಭಾಷೆ, ಸಂಸ್ಕೃತಿ, ಇತಿಹಾಸವು ಇದನ್ನೇ ಬಯಸುತ್ತದೆ. ಆದರೆ ಬಿಜೆಪಿ ಈ ರೀತಿ ಯೋಚಿಸುವುದೇ ಇಲ್ಲ' ಎಂದು ವಾಗ್ದಾಳಿ ನಡೆಸಿದರು.

ತಮಿಳು ಭಾಷೆ, ಸಂಸ್ಕೃತಿ, ಇತಿಹಾಸವನ್ನು ರಕ್ಷಿಸಲು ಡಿಎಂಕೆ ಹಾಗೂ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವು ಬದ್ಧವಾಗಿದೆ ಎಂದು ರಾಹುಲ್ ಗಾಂಧಿ ಅವರು ಹೇಳಿದರು.

ಭಾರತಕ್ಕೆ ಐತಿಹಾಸಿಕ ಹಿನ್ನಡೆ: ಕಾಂಗ್ರೆಸ್ ಕಟು ಟೀಕೆ

ಅಮೆರಿಕ–ಇರಾನ್ ಶಾಂತಿ ಮಾತುಕತೆಯಲ್ಲಿ ಪಾಕಿಸ್ತಾನದ ಪಾತ್ರದ ಬಗ್ಗೆ ಮೋದಿ ಸರ್ಕಾರವನ್ನು ಕಾಂಗ್ರೆಸ್ ಕಟುವಾಗಿ ಟೀಕಿಸಿದೆ.

ಪಾಕಿಸ್ತಾನದ ಸೇನಾ ಮುಖ್ಯಸ್ಥ, ಫೀಲ್ಡ್ ಮಾರ್ಷಲ್ ಆಸಿಮ್ ಮುನೀರ್ ಅವರು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಅಚ್ಚುಮೆಚ್ಚಿನ ವ್ಯಕ್ತಿ ಆಗಿರುವುದು ಭಾರತಕ್ಕೆ ಐತಿಹಾಸಿಕ ಹಿನ್ನಡೆ ಆದಂತಾಗಿದೆ ಎಂದಿದೆ.

ಭಾರತದ ವಿದೇಶಾಂಗ ನೀತಿ ನಿರೂಪಿಸುವಲ್ಲಿ ಮೋದಿ ಸರ್ಕಾರವು ಅಸಮರ್ಥವಾಗಿದೆ ಎಂದು ದೂರಿದೆ.

'ದಲ್ಲಾಳಿ ದೇಶವು ಅಮೆರಿಕ–ಇರಾನ್ ಶಾಂತಿ ಮಾತುಕತೆಯ ಎರಡನೇ ಸುತ್ತಿಗೆ ಆತಿಥ್ಯ ವಹಿಸುತ್ತಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ವಿದೇಶಾಂಗ ಸಚಿವ ಎಸ್. ಜೈಶಂಕರ್ ನೀಡಿದ್ದ ಹೇಳಿಕೆ ಉಲ್ಲೇಖಿಸಿ ಲೇವಡಿ ಮಾಡಿದ್ದಾರೆ.

'ಗುಲಾಮ ಮೈತ್ರಿಯನ್ನು ಸೋಲಿಸಿ'

'ಗುಲಾಮ ಮೈತ್ರಿಯನ್ನು ಸೋಲಿಸಿ' ಎಂದು ತಮಿಳುನಾಡು ಡಿಸಿಎಂ ಉದಯನಿಧಿ ಸ್ಟಾಲಿನ್ ಅವರು ಮತದಾರರಿಗೆ ಮನವಿ ಮಾಡಿದ್ದಾರೆ.

ತಿರುವೊಟ್ಟಿಯೂರಿನಲ್ಲಿ ಸಿಪಿಐ ಅಭ್ಯರ್ಥಿ ಪರ ಮತ ಯಾಚಿಸಿದ ಅವರು, 'ಕೇಂದ್ರದ ಬಿಜೆಪಿ ಸರ್ಕಾರವು ತಮಿಳುನಾಡಿಗೆ ಮಾಡಿದ ದ್ರೋಹಕ್ಕೆ ಮತದಾರರು ಇದೀಗ ಪ್ರತಿಕ್ರಿಯೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ತಮಿಳುನಾಡಿನಲ್ಲಿ ಡಿಎಂಕೆ ಮೈತ್ರಿಕೂಟದ ಅಭ್ಯರ್ಥಿಗಳ ಪರ ಮತಯಾಚಿಸಿದರು.

ಮುಖ್ಯಮಂತ್ರಿ ಸ್ಟಾಲಿನ್ ಅವರು ಜನರ ಜೀವನಮಟ್ಟ ಸುಧಾರಿಸಲು ಹಲವು ಪರಿಣಾಮಕಾರಿ ಯೋಜನೆ ಅನುಷ್ಠಾನಗೊಳಿಸಿದ್ದಾರೆ ಎಂದು ಸಾಮಾಜಿಕ ಮಾಧ್ಯಮದಲ್ಲೂ ಸಂದೇಶವೊಂದನ್ನು ಪೋಸ್ಟ್ ಮಾಡಿದ್ದಾರೆ.

ಕಂದಕಕ್ಕೆ ಬಸ್: 21 ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯಲ್ಲಿ ಸೋಮವಾರ ಬೆಟ್ಟದ ಮೇಲಿನ ಮಾರ್ಗದಲ್ಲಿ ಸಾಗುತ್ತಿದ್ದ ಬಸ್ ಉರುಳಿ ಬಿದ್ದು 21 ಮಂದಿ ಮೃತಪಟ್ಟು, 29 ಮಂದಿ ಗಾಯಗೊಂಡಿದ್ದಾರೆ.

ಆಟೊ ರಿಕ್ಷಾಕ್ಕೆ ಡಿಕ್ಕಿ ಹೊಡೆದ ನಂತರ ಬಸ್ ಕೆಳಗಿನ ರಸ್ತೆಗೆ ಉರುಳಿ ಬಿದ್ದಿದೆ. ಆಟೊದಲ್ಲಿದ್ದವರು ಸಹ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಮ್‌ನಗರದಿಂದ ಉಧಂಪುರಕ್ಕೆ ಬಸ್ ತೆರಳುತ್ತಿತ್ತು. ಕಡಿದಾದ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ದುರಂತ ಸಂಭವಿಸಿದ್ದು, 100 ಮೀಟರ್ ಕೆಳಕ್ಕೆ ಉರುಳಿಬಿದ್ದಿದೆ. ಸೇನಾ ಬೆಂಗಾವಲು ಪಡೆ ತಕ್ಷಣವೇ ರಕ್ಷಣಾ ಕಾರ್ಯಾಚರಣೆ ನಡೆಸಿತು. ಅಪಘಾತದ ಸಂದರ್ಭದಲ್ಲಿ ಬಸ್‌ನಲ್ಲಿ 50 ಪ್ರಯಾಣಿಕರಿದ್ದರು ಎಂದು ತಿಳಿಸಿದ್ದಾರೆ.


ಜಮ್ಮು ಮತ್ತು ಕಾಶ್ಮೀರದ ಉಧಂಪುರ ಬಳಿ ಅಪಘಾತಕ್ಕೀಡಾದ ಬಸ್
ಪಿಟಿಐ ಚಿತ್ರ

ದುರಂತಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಸಂತಾಪ ಸೂಚಿಸಿದ್ದಾರೆ. ಪ್ರಧಾನಿ ಮೋದಿ ಅವರು ಮೃತಪಟ್ಟವರ ಕುಟುಂಬಕ್ಕೆ ತಲಾ ₹2 ಲಕ್ಷ ಮತ್ತು ಗಾಯಗೊಂಡವರಿಗೆ ತಲಾ ₹50,000 ಪರಿಹಾರ ಘೋಷಿಸಿದ್ದಾರೆ.

ಮಣಿಪುರ ಹಿಂಸಾಚಾರ: 21 ಬಂಧನ

ಇಂಫಾಲ್ (ಪಿಟಿಐ): ಮಣಿಪುರದ ಪಶ್ಚಿಮ ಇಂಫಾಲ್ ಜಿಲ್ಲೆಯಲ್ಲಿ ಶನಿವಾರ ನಡೆದ ಪ್ರತಿಭಟನಾ ರ್‍ಯಾಲಿಯಲ್ಲಿನ ಹಿಂಸಾಚಾರದಲ್ಲಿ ಭಾಗಿಯಾದ ಆರೋಪದ ಮೇಲೆ 21 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದರು.

ಏ.18ರಂದು ನಡೆದ ಹಿಂಸಾಚಾರದಲ್ಲಿ ಭದ್ರತಾ ಪಡೆಗಳ ವಾಹನಗಳಿಗೆ ಕಲ್ಲು ತೂರಾಟ ನಡೆಸಲಾಗಿತ್ತು ಹಾಗೂ ಪೆಟ್ರೋಲ್ ಬಾಂಬ್ ಎಸೆಯಲಾಗಿತ್ತು. ಈ ವೇಳೆ ವಾಹನಗಳು ಜಖಂಗೊಂಡಿದ್ದು, ಮೂವರು ಸಿಬ್ಬಂದಿ ಗಾಯಗೊಂಡಿದ್ದಾರೆ.

ಬಿಷ್ಣುಪುರ ತ್ರೋಂಗ್ಲಾಬಿಯಲ್ಲಿ ನಡೆದ ಬಾಂಬ್ ದಾಳಿಯಲ್ಲಿ ಏ.7ರಂದು ಇಬ್ಬರು ಮಕ್ಕಳು ಸಾವಿಗೀಡಾಗಿದ್ದರು. ಈ ದಾಳಿ ಖಂಡಿಸಿ ಸಂಘಟನೆಗಳು ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಹಿಂಸಾಚಾರ ಭುಗಿಲೆದ್ದಿತು.

ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ 23 ವರ್ಷದ ಯುವಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಬಂದ್ ವೇಳೆ ಕಚೇರಿಗೆ ಗೈರಾದ ನೌಕರರ ವಿರುದ್ಧ ಕ್ರಮ: ಬಂದ್‌ಗೆ ಅವಧಿಯಲ್ಲಿ, ಅಧಿಕೃತವಾಗಿ ರಜೆ ತೆಗೆದುಕೊಳ್ಳದೇ ಕಚೇರಿಗೆ ಗೈರಾದ ನೌಕರರ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಸರ್ಕಾರ ನಿರ್ದೇಶಿಸಿದೆ.

ಬಾಂಬ್ ದಾಳಿಯನ್ನು ವಿರೋಧಿಸಿ ಮಹಿಳಾ ಸಂಘಟನೆಗಳು ಏ.19ರಿಂದ ಐದು ದಿನ ಪೂರ್ವ ಇಂಫಾಲ್, ಪಶ್ಚಿಮ ಇಂಫಾಲ್, ಬಿಷ್ಣುಪುರ, ಕಾಕ್ಚಿಂಗ್ ಹಾಗೂ ಟೆಂಗ್‌ನೌಪಾಲ್ ಜಿಲ್ಲೆಗಳಲ್ಲಿ ಬಂದ್‌ಗೆ ಕರೆ ನೀಡಿವೆ. ಬಂದ್ ನೆಪದಲ್ಲಿ ಕಚೇರಿಗೆ ಬಾರದ ನೌಕರರ ವಿರುದ್ಧ ಕ್ರಮಕ್ಕೆ ಸರ್ಕಾರ ಮುಂದಾಗಿದೆ.

'ಹೆಣದ ಮೇಲೆ ಬಿಜೆಪಿ ರಾಜಕೀಯ'

ಚುನಾವಣಾ ರ್‍ಯಾಲಿಯಲ್ಲಿ ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಆರೋಪ


ಪಶ್ಚಿಮ ಬಂಗಾಳದ ರಾಣಿಬಂದ್ ವಿಧಾನಸಭಾ ಕ್ಷೇತ್ರದ ಟಿಎಂಸಿ ಅಭ್ಯರ್ಥಿ ತನುಶ್ರೀ ಹನ್ಸದ ಪರ ಚುನಾವಣಾ ರ್‍ಯಾಲಿಯಲ್ಲಿ ಭಾಗವಹಿಸಿದ ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ
ಪಿಟಿಐ ಚಿತ್ರ

ಕೋಲ್ಕತ್ತ, ಪಶ್ಚಿಮ ಬಂಗಾಳ (ಪಿಟಿಐ): 'ಬಿಜೆಪಿಯು ಹೆಣದ ಮೇಲೆ ರಾಜಕೀಯ ಮಾಡುತ್ತಿದೆ' ಎಂದು ತೃಣಮೂಲ ಕಾಂಗ್ರೆಸ್‌ನ ನಾಯಕ ಅಭಿಷೇಕ್ ಬ್ಯಾನರ್ಜಿ ಆರೋಪಿಸಿದ್ದಾರೆ.

ಪುರುಲಿಯಾ ಜಿಲ್ಲೆಯ ಬಲರಾಂ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಸಂತಿರಾಮ್ ಮಹತೊ ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಸೋಮವಾರ ಭಾಗವಹಿಸಿದ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

'2018ರಲ್ಲಿ ಬಿಜೆಪಿಯ ಇಬ್ಬರು ಕಾರ್ಯಕರ್ತರು ಅಸ್ವಾಭಾವಿಕವಾಗಿ ಮೃತಪಟ್ಟಿದ್ದರು. ಈ ಸಾವಿಗೆ ಟಿಎಂಸಿ ಪಕ್ಷವೇ ಕಾರಣ ಎಂದು ಆರೋಪಿಸಲಾಗಿತ್ತು. ಬಿಜೆಪಿಯ ಆಗಿನ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಕೂಡ ಸಂತ್ರಸ್ತರ ಮನೆಗೆ ಭೇಟಿ ನೀಡಿ, ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡುವ ಭರವಸೆ ನೀಡಿದ್ದರು. ಆದರೆ, ಇದುವರೆಗೂ ಆ ಕುಟುಂಬಕ್ಕೆ ಏನೂ ನೆರವು ನೀಡಿಲ್ಲ' ಎಂದು ದೂರಿದ್ದಾರೆ.

'ಪುರುಲಿಯಾದ ಬಿಜೆಪಿ ಸಂಸದ ಜ್ಯೋತಿರ್ಮಯಿ ಸಿಂಗ್ ಮಹತೊ ಹಾಗೂ ಬಿಜೆಪಿ ಅಭ್ಯರ್ಥಿ ಕೂಡ ಈ ಬಗ್ಗೆ ಜನರಿಗೆ ಸ್ಪಷ್ಟನೆ ನೀಡಬೇಕು. ಯಾವ ಕಾರಣಕ್ಕಾಗಿ ಉದ್ಯೋಗ ನೀಡಲು ಸಾಧ್ಯವಾಗಲಿಲ್ಲ ಎಂಬುದನ್ನು ವಿವರಿಸಬೇಕು. ಇಬ್ಬರ ಸಾವನ್ನು ರಾಜಕೀಯವಾಗಿ ಬಳಸಿಕೊಂಡ ಬಳಿಕ ಬಿಜೆಪಿ ನಾಯಕರು ಅವರ ಸಂಪರ್ಕವನ್ನು ಕಡಿದುಕೊಂಡಿದ್ದು ಏಕೆ ಎಂಬುದನ್ನು ತಿಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಈ ಸಾವಿನ ಹಿಂದೆ ಟಿಎಂಸಿಯ ಯಾವುದೇ ಕೈವಾಡವಿಲ್ಲ. ಇದೊಂದು ದುರಂತವಾಗಿದ್ದು, ಬಿಜೆಪಿಯು ಈ ಬೆಳವಣಿಗೆಯನ್ನು ಬಳಸಿಕೊಳ್ಳುವ ಮೂಲಕ ಮೃತರಿಗೆ ಅಗೌರವ ತೋರಿದೆ' ಎಂದು ತಿಳಿಸಿದ್ದಾರೆ.

ಕೊನೆ ಅವಕಾಶ: ಯೋಗಿ ಆದಿತ್ಯನಾಥ

ಪಿಂಗ್ಲಾ, ಪಶ್ಚಿಮ ಬಂಗಾಳ (ಪಿಟಿಐ): 'ಟಿಎಂಸಿಯ ದುರಾಡಳಿತದಿಂದ ಹದಗೆಟ್ಟಿರುವ ರಾಜ್ಯದ ಆರ್ಥಿಕತೆ ಪುನರುಜ್ಜೀವನಗೊಳಿಸಲು ಬಂಗಾಳ ಚುನಾವಣೆಯು ಕೊನೆಯ ಅವಕಾಶವಾಗಿದೆ' ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ತಿಳಿಸಿದ್ದಾರೆ.

ಪಶ್ಚಿಮ ಮೇದಿನಿಪುರದ ಪಿಂಗ್ಲಾದಲ್ಲಿ ಬಿಜೆಪಿ ಅಭ್ಯರ್ಥಿ ಪರ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, 'ಇದು ಮಾಮೂಲಿ ಚುನಾವಣೆಯಲ್ಲ. ಬಂಗಾಳವು ನಿರ್ಣಾಯಕ ಸ್ಥಿತಿಯಲ್ಲಿ ನಿಂತಿದೆ. ರಾಜ್ಯದ ದಿಕ್ಕು ಬದಲಾಯಿಸಿ, ಅಭಿವೃದ್ಧಿಯತ್ತ ಕೊಂಡೊಯ್ಯಲು ಕೊನೆಯ ಅವಕಾಶವಾಗಿದೆ' ಎಂದು ಹೇಳಿದ್ದಾರೆ.

'15 ವರ್ಷಗಳು ಸಾಕು. ಭ್ರಷ್ಟಾಚಾರ, ಹಿಂಸಾಚಾರ ಹಾಗೂ ದುರಾಡಳಿತವನ್ನು ಕೊನೆಗಾಣಿಸಲು ಇದು ಸಕಾಲ. ಅಭಿವೃದ್ಧಿಯು ಈಗಲಾದರೂ ಆರಂಭಗೊಳ್ಳಬೇಕಿದೆ' ಎಂದಿದ್ದಾರೆ.

'ಮಹಿಳೆಯರಿಗೆ ಮೋಸ'

ಮಹಿಷಾದಲ್ (ಪಿಟಿಐ): ಮಹಿಳಾ ಮೀಸಲಾತಿ ಜಾರಿಗೊಳಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ವಿರೋಧಿಸುವ ಮೂಲಕ ಟಿಎಂಸಿ ಮಹಿಳೆಯರಿಗೆ ದ್ರೋಹ ಮಾಡಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಆರೋಪಿಸಿದ್ದಾರೆ.

ಭಾರತ ವಿಶ್ವಗುರು ಅಲ್ಲ: ಜೋಶಿ

ನವದೆಹಲಿ (ಪಿಟಿಐ): 'ಭಾರತವು ವಿಶ್ವಗುರು ಆಗಿ ಉಳಿದಿಲ್ಲ. ನಾವು ಆ ಪದ ಬಳಕೆಯಿಂದ ದೂರ ಇರಬೇಕು' ಎಂದು ಬಿಜೆಪಿಯ ಹಿರಿಯ ನಾಯಕ ಮುರಳಿ ಮನೋಹರ ಜೋಶಿ ಸೋಮವಾರ ಹೇಳಿದರು.

ಸಂಸ್ಕೃತ ಭಾರತಿ ಕೇಂದ್ರ ಕಚೇರಿ ಉದ್ಘಾಟನೆಗಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಒಂದು ಕಾಲದಲ್ಲಿ ಭಾರತ ವಿಶ್ವಗುರುವಾಗಿತ್ತು. ಇಂದು ಅದು ವಿಶ್ವಗುರುವಾಗಿ ಉಳಿದಿಲ್ಲ' ಎಂದರು.

'ಸಂಸ್ಕೃತವನ್ನು ಭಾರತದ ಅಧಿಕೃತ ಭಾಷೆಯಾಗಿ ಘೋಷಿಸಬೇಕು. ಡಾ.ಬಿ.ಆರ್.ಅಂಬೇಡ್ಕರ್ ಸೇರಿದಂತೆ ಹಲವಾರು ಜನರು ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದರು' ಎಂದರು.

ಸಂಸ್ಕೃತಕ್ಕೆ ಉತ್ತೇಜನ ಬೇಕು–ಭಾಗವತ್: ದೇಶದಲ್ಲಿ ಸಂಸ್ಕೃತ ಭಾಷೆಗೆ ಉತ್ತೇಜನ ನೀಡಬೇಕು. ಸಂಸ್ಕೃತ ಭಾಷೆಯ ಹೆಚ್ಚೆಚ್ಚು ಪ್ರಸಾರವು ದೇಶದ ಇತರ ಭಾಷೆಗಳನ್ನು ಶ್ರೀಮಂತಗೊಳಿಸುವುದು ಮಾತ್ರವಲ್ಲದೆ, ಅವುಗಳ ಮಧ್ಯೆ ಸೇತುವೆಯಂತೆ ಕೆಲಸ ಮಾಡುತ್ತದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರು ಅಭಿಪ್ರಾಯಪಟ್ಟರು.

'ನ್ಯಾಯಮಂಡಳಿಗಳು ಕಾರ್ಯನಿರ್ವಹಿಸುತ್ತಿಲ್ಲ'

ಒಂದನೇ ಪುಟದಿಂದ...

'ಫಾರಂ 6ರ ಮೂಲಕ ಮತದಾರರ ಸೇರ್ಪಡೆ': 'ಫಾರಂ 6ರ ಮೂಲಕ ಚುನಾವಣಾ ಆಯೋಗವು ಪಶ್ಚಿಮ ಬಂಗಾಳದಲ್ಲಿ 5ಲಕ್ಷದಿಂದ 7 ಲಕ್ಷ ಜನರನ್ನು ಮತದಾರರ ಪಟ್ಟಿಗೆ ಹೊಸದಾಗಿ ಸೇರಿಸಿದೆ. ಇದು ಸುಪ್ರೀಂ ಕೋರ್ಟ್‌ನ ಏಪ್ರಿಲ್ 13ರ ಆದೇಶಕ್ಕೆ ವಿರುದ್ಧವಾಗಿದೆ' ಎಂದು ವಕೀಲೆ ಮೇನಕಾ ಗುರುಸ್ವಾಮಿ ಅವರು ಮೌಖಿಕವಾಗಿ ಸುಪ್ರೀಂ ಕೋರ್ಟ್ ಗಮನಕ್ಕೆ ತಂದರು.

'ನ್ಯಾಯಮಂಡಳಿಗಳು ಯಾರ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿವೆಯೊ ಅಂಥವರಿಗೆ ಮತದಾನಕ್ಕೆ ಅವಕಾಶ ನೀಡಬೇಕು ಎಂದು ನ್ಯಾಯಾಲಯ ಆದೇಶಿಸಿತ್ತು. ಫಾರಂ 6 ಸಲ್ಲಿಕೆಗೆ ಅವಧಿ ಮುಗಿದ ಬಳಿಕ ಸಲ್ಲಿಸಲಾಗುವ ಅರ್ಜಿಗಳಿಗೆ ಅವಕಾಶ ನೀಡಬಾರದು ಎನ್ನುವುದು ಕೂಡ ಆ ಆದೇಶದಲ್ಲಿಯೇ ಇತ್ತು' ಎಂದು ಮೇನಕಾ ವಾದಿಸಿದರು.

'ದೊಡ್ಡ ಪ್ರಮಾಣದಲ್ಲಿ ಫಾರಂ 6 ಸ್ವೀಕರಿಸಲು ನ್ಯಾಯಾಲಯದ ಆದೇಶವನ್ನು ಬಳಸಿಕೊಳ್ಳಲಾಗುತ್ತಿದೆ' ಎಂದೂ ದೂರಿದರು. ವಾದ ಆಲಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ ಮಾಲ್ಯಾ ಬಾಗ್ಚಿ ಅವರ ಪೀಠವು, 'ಅರ್ಜಿ ಸಲ್ಲಿಸದೆ ಮೌಖಿಕವಾಗಿ ಹೇಳುವುದನ್ನೆಲ್ಲಾ ಕೇಳಲು ಸಾಧ್ಯವಿಲ್ಲ. ನೀವು ಅರ್ಜಿ ಸಲ್ಲಿಸಿ. ಆಮೇಲೆ ನೋಡೋಣ' ಎಂದು ಪ್ರತಿಕ್ರಿಯಿಸಿತು.

ಟಿಸಿಎಸ್: ಲೈಂಗಿಕ ಕಿರುಕುಳದ ವಿವರ ಬಿಚ್ಚಿಟ್ಟ ಸಂತ್ರಸ್ತೆ

ಮುಂಬೈ (ಪಿಟಿಐ): ಕಚೇರಿಯಲ್ಲಿ ತಮ್ಮ ಮೇಲಾದ ದೌರ್ಜನ್ಯ ಮತ್ತು ಬಲವಂತದ ಮತಾಂತರ ಯತ್ನದ ಬಗ್ಗೆ ಟಿಸಿಎಸ್ ನಾಸಿಕ್ ಘಟಕದ ಮಹಿಳಾ ಎಂಜಿನಿಯರ್ ಮತ್ತಷ್ಟು ವಿವರವನ್ನು ಬಿಚ್ಚಿಟ್ಟಿದ್ದಾರೆ.

ಮಹಿಳಾ ಉದ್ಯೋಗಿಗಳ ಮೇಲಿನ ಲೈಂಗಿಕ ಶೋಷಣೆ, ಮಾನಸಿಕ ಕಿರುಕುಳ, ಬಲವಂತದ ಮತಾಂತರ ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ 9 ಪ್ರಕರಣಗಳನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸುತ್ತಿದೆ. ಕಾರ್ಯಾಚರಣೆ ವಿಭಾಗದ ವ್ಯವಸ್ಥಾಪಕಿ ಸೇರಿದಂತೆ ಎಂಟು ಜನರನ್ನು ಎಸ್‌ಐಟಿ ಬಂಧಿಸಿದೆ.

ಪ್ರಕರಣದ ಬಗ್ಗೆ ಮತ್ತಷ್ಟು ವಿವರ ಬಹಿರಂಗಪಡಿಸಿರುವ ಸಂತ್ರಸ್ತೆ, 'ಐವರು ಆರೋಪಿಗಳು 2025ರ ಜೂನ್‌ನಿಂದ 2026ರ ಮಾರ್ಚ್‌ವರೆಗೆ ನನ್ನ ಮೇಲೆ ಲೈಂಗಿಕ ಕಿರುಕುಳ, ದೌರ್ಜನ್ಯ ನಡೆಸಿದ್ದರು. ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿದ್ದರು' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ಒಬ್ಬ ಆರೋಪಿ ಹಿಂದೂ ದೇವತೆಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದ. ಮಹಿಳೆಯರು ಬುರ್ಖಾ ಧರಿಸದ ಕಾರಣಕ್ಕೆ ಅತ್ಯಾಚಾರಗಳು ನಡೆಯುತ್ತವೆ ಎಂದು ಹೇಳಿದ್ದ. ತರಬೇತಿ ಸಂದರ್ಭದಲ್ಲಿ ತಂಡದ ಮುಖ್ಯಸ್ಥ ಅನುಚಿತವಾಗಿ ವರ್ತಿಸಿದ್ದ. ಗುಡಿ ಪಡವಾ ಸಂಭ್ರಮಾಚರಣೆ ಸಂದರ್ಭದಲ್ಲಿ ಮತ್ತೊಬ್ಬ ಆರೋಪಿಯು ಲೈಂಗಿಕ ಕಿರುಕುಳ ನೀಡಿದ್ದ. ದಾಂಪತ್ಯ ಜೀವನದ ಬಗ್ಗೆಯೂ ಅವಹೇಳನಕಾರಿಯಾಗಿ ಮಾತನಾಡಿದ್ದ' ಎಂದು ಸಂತ್ರಸ್ತೆ ದೂರಿದ್ದಾರೆ.

ಮೃತರ ಸಂಖ್ಯೆ 25ಕ್ಕೆ ಏರಿಕೆ

ವಿರುಧುನಗರ, (ತಮಿಳುನಾಡು) (ಪಿಟಿಐ): ಇಲ್ಲಿಗೆ ಸಮೀಪದ ಕಟ್ಟನಾರಪಟ್ಟಿ ಪ್ರದೇಶದ ಪಟಾಕಿ ತಯಾರಿಕಾ ಘಟಕವೊಂದರಲ್ಲಿ ಭಾನುವಾರ ಸಂಭವಿಸಿದ ಭಾರಿ ಸ್ಫೋಟಕ್ಕೆ ತುತ್ತಾದ ಮೃತದೇಹಗಳು ಗುರುತು ಸಿಗದಷ್ಟು ಸುಟ್ಟು ಕರಕಲಾಗಿವೆ. ದುರಂತದಲ್ಲಿ ಮೃತಪಟ್ಟವರ ಸಂಖ್ಯೆ 25ಕ್ಕೆ ಏರಿಕೆಯಾಗಿದೆ.

'ಬಹುತೇಕ ದೇಹಗಳು ಸುಟ್ಟು ಕರಕಲಾದ ಕಾರಣ, ಅವರು ಧರಿಸಿದ ಆಭರಣಗಳನ್ನು ಆಧರಿಸಿ ವ್ಯಕ್ತಿಗಳನ್ನು ಗುರುತಿಸಲಾಗುತ್ತಿದೆ. ಗುರುತು ಪತ್ತೆಯ ಅನಿಶ್ಚಿತತೆಯಿಂದಾಗಿ ಕುಟುಂಬಗಳು ಮೃತದೇಹಗಳನ್ನು ಸ್ವೀಕರಿಸಲು ಮುಂದೆ ಬಂದಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಕಾರ್ಖಾನೆಯ ಮಾಲೀಕ ನಾಪತ್ತೆಯಾಗಿದ್ದು, ಇದುವರೆಗೂ ಪತ್ತೆಯಾಗಿಲ್ಲ' ಎಂದು ಹೇಳಿದ್ದಾರೆ.

25 ಮಂದಿಯ ಮರಣೋತ್ತರ ಪರೀಕ್ಷೆ ನಡೆಸಲಾಗಿದ್ದು, ಅದರಲ್ಲಿ 22 ಮಹಿಳೆಯರು, ಮೂವರು ಪುರುಷರಿದ್ದಾರೆ. ಇದಲ್ಲದೇ, ಎಂಟು ಮಹಿಳೆಯರು ತೀವ್ರವಾಗಿ ಗಾಯಗೊಂಡಿದ್ದು, ದೇಹದ ಭಾಗ ಶೇಕಡ 60ರಷ್ಟು ಸುಟ್ಟಿದೆ. ಭಾನುವಾರ ರಾತ್ರಿ ವೇಳೆ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದ್ದಾಗಲೇ ಎರಡನೇ ಸಲ ಸ್ಫೋಟ ಸಂಭವಿಸಿದ್ದು, ಈ ವೇಳೆ 8 ಮಂದಿ ಪೊಲೀಸರು ಸೇರಿದಂತೆ 12 ಮಂದಿ ಗಾಯಗೊಂಡಿದ್ದಾರೆ.

ಪ್ರತಿಭಟನೆ: ಕಾರ್ಖಾನೆ ಮಾಲೀಕರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿ ಸಾವಿರಕ್ಕೂ ಅಧಿಕ ಗ್ರಾಮಸ್ಥರು ರಸ್ತೆ ತಡೆ ನಡೆಸಿ, ಪ್ರತಿಭಟಿಸಿದರು. ಮೃತರ ಪೈಕಿ 20 ಮಂದಿ ಶಿರ್‌ವೈಕರಮಾಂಪಟ್ಟಿ ಗ್ರಾಮದವರಾಗಿದ್ದಾರೆ.

'ರಜಾ ದಿನದಂದು ಅನುಮತಿ ಇಲ್ಲದೇ ಘಟಕ ಕಾರ್ಯನಿರ್ವಹಿಸುತ್ತಿತ್ತು' ಎಂದು ವಿರುಧುನಗರ ಜಿಲ್ಲಾಧಿಕಾರಿ ವಿ.ಪಿ.ಜೆಯಶೀಲನ್ ಅವರು ಖಚಿತಪಡಿಸಿದ್ದಾರೆ.

ಅರವಿಂದ ಕೇಜ್ರಿವಾಲ್ ಅರ್ಜಿ ತಿರಸ್ಕರಿಸಿದ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ

ವಿಚಾರಣೆಯಿಂದ ಹಿಂದೆ ಸರಿಯಲು ನಿರಾಕರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ಹಗರಣ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿಯಬೇಕು ಎಂದು ಕೋರಿ ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರು ತಿರಸ್ಕರಿಸಿದ್ದಾರೆ.

ಅಬಕಾರಿ ಹಗರಣದಲ್ಲಿ ಕೇಜ್ರಿವಾಲ್ ಅವರನ್ನು ವಿಚಾರಣಾ ನ್ಯಾಯಾಲಯ ಖುಲಾಸೆಗೊಳಿಸಿದ್ದನ್ನು ಪ್ರಶ್ನಿಸಿ ಕೇಂದ್ರ ತನಿಖಾ ಸಂಸ್ಥೆ (ಸಿಬಿಐ) ಸಲ್ಲಿಸಿರುವ ಅರ್ಜಿಯನ್ನು ನ್ಯಾ.ಶರ್ಮಾ ವಿಚಾರಣೆ ನಡೆಸುತ್ತಿದ್ದಾರೆ.

ವಿಚಾರಣೆಯಿಂದ ಅವರು ಹಿಂದೆ ಸರಿಯಬೇಕೆಂದು ಕೋರಿ ಎಎಪಿ ನಾಯಕರಾದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ದುರ್ಗೇಶ್ ಪಾಠಕ್ ಸೇರಿದಂತೆ ಹಲವರು ಅರ್ಜಿ ಸಲ್ಲಿಸಿದ್ದಾರೆ.

ಈ ಸಂಬಂಧ ಖುದ್ದಾಗಿ ವಾದ ಮಂಡಿಸಿದ್ದ ಕೇಜ್ರಿವಾಲ್, 'ನೀವು ಆರ್‌ಎಸ್‌ಎಸ್ ಜೊತೆ ನಿಕಟವಾಗಿದ್ದೀರಿ. ನಿಮ್ಮ ಮಕ್ಕಳು ಸಿಬಿಐ ಪರ ವಕೀಲರಾಗಿದ್ದಾರೆ. ಹಿತಾಸಕ್ತಿ ಸಂಘರ್ಷದ ಕಾರಣದಿಂದ ಈ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿಯಿರಿ' ಎಂದು ಮನವಿ ಮಾಡಿದ್ದರು.

ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾ. ಶರ್ಮಾ ಸೋಮವಾರ ಪ್ರಕಟಿಸಿದರು.

'ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ಅರ್ಜಿದಾರರು ನ್ಯಾಯಮೂರ್ತಿಯವರ ಬಗ್ಗೆಯೇ ತೀರ್ಪು ನೀಡಲು ಆಸ್ಪದ ಕೊಡಲಾಗದು. ಅರ್ಜಿದಾರರ ಆಧಾರರಹಿತ ಆತಂಕ ದೂರಮಾಡಲು ನ್ಯಾಯಮೂರ್ತಿಯವರೇ ಪ್ರಕರಣದಿಂದ ಹಿಂದೆ ಸರಿಯಲು ಸಾಧ್ಯವೂ ಇಲ್ಲ' ಎಂದಿದ್ದಾರೆ.

'ನ್ಯಾಯಮೂರ್ತಿಯವರ ಮೇಲಿನ ವೈಯಕ್ತಿಕ ದಾಳಿಯು ನ್ಯಾಯಾಂಗದ ಮೇಲಿನ ದಾಳಿಗೆ ಸಮನಾಗಿದ್ದು, ಯಾವುದೇ ಆಧಾರ, ಸಾಕ್ಷ್ಯಗಳಿಲ್ಲದೆ ರಾಜಕಾರಣಿಯೊಬ್ಬರು ನ್ಯಾಯಾಂಗದ ವರ್ಚಸ್ಸಿಗೆ ಧಕ್ಕೆ ತರಲು ಬಿಡಲಾಗದು. ಈ ನ್ಯಾಯಾಲಯವು ತನ್ನ ಪರವಾಗಿ, ನ್ಯಾಯಾಂಗದ ಪರವಾಗಿ ನಿಲ್ಲಲಿದೆ. ನಾನು ವಿಚಾರಣೆಯಿಂದ ಹಿಂದೆ ಸರಿಯುವುದಿಲ್ಲ' ಎಂದೂ ಶರ್ಮಾ ಹೇಳಿದ್ದಾರೆ.

ರಾಹುಲ್ ಗಾಂಧಿ ವಿರುದ್ಧ ಪ್ರಕರಣ: ಹಿಂದೆ ಸರಿದ ನ್ಯಾಯಮೂರ್ತಿ

ಲಖನೌ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದ್ವಿಪೌರತ್ವ ಹೊಂದಿದ್ದಾರೆ ಎಂಬ ಆರೋಪದ ಕುರಿತ ಪ್ರಕರಣದ ವಿಚಾರಣೆಯಿಂದ ಅಲಹಾಬಾದ್ ಹೈಕೋರ್ಟ್‌ನ ಲಖನೌ ಪೀಠದ ನ್ಯಾಯಮೂರ್ತಿ ಸುಭಾಷ್ ವಿದ್ಯಾರ್ಥಿ ಅವರು ಸೋಮವಾರ ಹಿಂದೆ ಸರಿದಿದ್ದಾರೆ.

ದೂರುದಾರ ವಿಘ್ನೇಶ್ ಶಿಶಿರ್ ನೀಡಿರುವ ಆಕ್ಷೇಪಾರ್ಹ ಹೇಳಿಕೆಯ ಕಾರಣಕ್ಕೆ ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

ದ್ವಿಪೌರತ್ವ ಆರೋಪಕ್ಕೆ ಸಂಬಂಧಿಸಿ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆದೇಶ ನೀಡಿ, ಬಳಿಕ ತನ್ನದೇ ಆದೇಶಕ್ಕೆ ತಡೆ ನೀಡಿರುವ ಬಗ್ಗೆ ದೂರುದಾರ ಕರ್ನಾಟಕದ ಬಿಜೆಪಿ ಕಾರ್ಯಕರ್ತ ವಿಘ್ನೇಶ್ ಶಿಶಿರ್ ಅವರು ನೀಡಿರುವ ಹೇಳಿಕೆಯನ್ನು ನ್ಯಾ.ಸುಭಾಷ್ ವಿದ್ಯಾರ್ಥಿ ಬಲವಾಗಿ ಖಂಡಿಸಿದ್ದಾರೆ.

'ಇದು ಸ್ವೀಕಾರಾರ್ಹವಲ್ಲದ ವರ್ತನೆಯಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಮುಂಬೈ ಇಂಡಿಯನ್ಸ್‌ಗೆ ಜಯದ 'ತಿಲಕ'

ಮಿಂಚಿನ ಶತಕ ಬಾರಿಸಿದ ಎಡಗೈ ಬ್ಯಾಟರ್ • ಅಶ್ವನಿ ಕುಮಾರ್‌ಗೆ ನಾಲ್ಕು ವಿಕೆಟ್

ಅಹಮದಾಬಾದ್ (ಪಿಟಿಐ): ರನ್ ಬರ ಎದುರಿಸುತ್ತಿದ್ದ ತಿಲಕ್ ವರ್ಮಾ ಕೊನೆಗೂ ಲಯಕ್ಕೆ ಮರಳಿದರು. ಅವರ ಸಿಡಿಲಬ್ಬರದ ಅಜೇಯ ಶತಕದ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡವು ಸೋಮವಾರ ಗುಜರಾತ್ ಟೈಟನ್ಸ್ ವಿರುದ್ಧ 99 ರನ್‌ಗಳ ಸುಲಭ ಗೆಲುವು ದಾಖಲಿಸಿತು.

ಹಾಲಿ ಟೂರ್ನಿಯಲ್ಲಿ ಸತತ ನಾಲ್ಕು ಪಂದ್ಯಗಳನ್ನು ಸೋತು ಅಂಕಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದ್ದ ಐದು ಬಾರಿಯ ಚಾಂಪಿಯನ್ ಮುಂಬೈ ತಂಡವು ಕೊನೆಗೂ ನೈಜ ಆಟವನ್ನು ಪ್ರದರ್ಶಿಸಿ, ಗೆಲುವಿನ ಹಳಿಗೆ ಮರಳಿತು. ಆರು ಪಂದ್ಯಗಳಲ್ಲಿ ಎರಡನೇ ಗೆಲುವು ದಾಖಲಿಸಿ ಏಳನೇ ಸ್ಥಾನಕ್ಕೆ ಏರಿತು. ಶುಭಮನ್ ಗಿಲ್ ಪಡೆಯು ಹ್ಯಾಟ್ರಿಕ್ ಗೆಲುವಿನ ಬಳಿಕ ಸೋಲು ಅನುಭವಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ತಿಲಕ್ (ಔಟಾಗದೇ 101;45ಎ, 4x8, 6x7) ಮತ್ತು ನಮನ್ ಧೀರ್ (45;32ಎ, 4x6, 6x1) ಅವರ ಬ್ಯಾಟಿಂಗ್ ಬಲದಿಂದ ಮುಂಬೈ 5 ವಿಕೆಟ್‌ಗೆ 199 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಟೈಟನ್ಸ್ ತಂಡವನ್ನು ಎಡಗೈ ವೇಗದ ಬೌಲರ್ ಅಶ್ವನಿ ಕುಮಾರ್ (24ಕ್ಕೆ 4), ಅಲ್ಲಾಹ ಘಜನಫರ್ (17ಕ್ಕೆ 2), ಮಿಚೆಲ್ ಸ್ಯಾಂಟ್ನರ್ (16ಕ್ಕೆ 2) ಮತ್ತು ಜಸ್‌ಪ್ರೀತ್ ಬೂಮ್ರಾ (15ಕ್ಕೆ 1) ಬಿಗಿ ದಾಳಿ ನಡೆಸಿ ನಿಯಂತ್ರಿಸಿದರು. ಹೀಗಾಗಿ, ಗಿಲ್ ಪಡೆ 15.5 ಓವರ್‌ಗಳಲ್ಲಿ 100 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಇನಿಂಗ್ಸ್‌ನ ಮೊದಲ ಎಸೆತದಲ್ಲೇ ವೇಗಿ ಜಸ್‌ಪ್ರೀತ್ ಬೂಮ್ರಾ ಆಘಾತ ನೀಡಿದರು. ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಅವರನ್ನು ಔಟ್ ಮಾಡಿದರು. ಈ ಮೂಲಕ ಬೂಮ್ರಾ ಹಾಲಿ ಲೀಗ್‌ನಲ್ಲಿ ವಿಕೆಟ್ ಖಾತೆ ತೆರೆದರು. ಅಗ್ರ ಬ್ಯಾಟರ್‌ಗಳಾದ ಶುಭಮನ್ (14), ಜೋಸ್ ಬಟ್ಲರ್ (5) ಬೇಗನೆ ಪೆವಿಲಿಯನ್ ಸೇರಿಕೊಂಡರು. ವಾಷಿಂಗ್ಟನ್ ಸುಂದರ್ (26;17ಎ) ಕೊಂಚ ಪ್ರತಿರೋಧ ತೋರಿದರು. ನಂತರ ಬಂದವರು ಕ್ರೀಸ್‌ನಲ್ಲಿ ಹೆಚ್ಚುಹೊತ್ತು ನಿಲ್ಲಲಿಲ್ಲ.

ತಿಲಕ್ ಅಬ್ಬರ: ದಕ್ಷಿಣ ಆಫ್ರಿಕಾದ ವೇಗಿ ಕಗಿಸೊ ರಬಾಡ (4-0-33-3) ಮುಂಬೈ ತಂಡಕ್ಕೆ ಆರಂಭದಲ್ಲಿ ಲಗಾಮು ಹಾಕಿದ್ದರು. ಅವರು ಹೊಸಬ ದಾನಿಶ್ ಮಾಳೆವಾರ್ (2), ಕ್ವಿಂಟನ್ ಡಿಕಾಕ್ (15) ಮತ್ತು ನಾಯಕ ಸೂರ್ಯಕುಮಾರ್ ಯಾದವ್ (15) ಅವರ ವಿಕೆಟ್‌ಗಳನ್ನು ಕಬಳಿಸಿದ್ದರು.

ಈ ಪಂದ್ಯಕ್ಕೆ ಮೊದಲು 5 ಇನಿಂಗ್ಸ್‌ಗಳಿಂದ ಕೇವಲ 43 ರನ್ ಗಳಿಸಿದ್ದ ತಿಲಕ್ ತಂಡಕ್ಕೆ ಅಗತ್ಯವಿದ್ದ ವೇಳೆಯೇ ಲಯ ಕಂಡುಕೊಂಡರು. ಈ ಪಂದ್ಯದಲ್ಲಿ ಅವರು ಆಡಲು ಇಳಿದಾಗ ತಂಡದ ಮೊತ್ತ 3 ವಿಕೆಟ್‌ಗೆ 44 (5.5 ಓವರ್). ಈ ಹಂತದಲ್ಲಿ ಅವರು ನಮನ್ ಧೀರ್ (45, 32 ಎಸೆತ) ಜೊತೆ 52 ರನ್ ಜೊತೆಯಾಟದ ಮೂಲಕ ಚೇತರಿಕೆ ನೀಡಿದರು.

ನಾಯಕ ಹಾರ್ದಿಕ್ ಪಾಂಡ್ಯ ಜೊತೆ ಐದನೇ ವಿಕೆಟ್‌ಗೆ ಕೇವಲ 38 ಎಸೆತಗಳಲ್ಲಿ 81 ರನ್‌ಗಳ ಜೊತೆಯಾಟವಾಡಿದರು. ಇದರಲ್ಲಿ ತಿಲಕ್ ಅವರದ್ದೇ ಸಿಂಹಪಾಲು. ಪಾಂಡ್ಯ ಗಳಿಸಿದ್ದು 16 ಎಸೆತಗಳಲ್ಲಿ 15 ರನ್‌ಗಳನ್ನಷ್ಟೇ.

ತಿಲಕ್ ಅವರು ಅಶೋಕ್ ಶರ್ಮಾ ಮಾಡಿದ 18ನೇ ಓವರ್‌ನಲ್ಲಿ 26 ರನ್ (3 ಸಿಕ್ಸರ್, 2 ಬೌಂಡರಿ) ಬಾಚಿದರು. ಪ್ರಸಿದ್ಧ ಕೃಷ್ಣ ಮಾಡಿದ ಕೊನೆಯ ಓವರಿನಲ್ಲಿ 21 ರನ್ ಸಿಡಿಸಿದರು. ಇದರೊಂದಿಗೆ ಐಪಿಎಲ್‌ನಲ್ಲಿ ತಮ್ಮ ಚೊಚ್ಚಲ ಶತಕ ಪೂರೈಸಿ, ತಂಡದ ಮೊತ್ತವನ್ನೂ 200ರ ಹೊಸ್ತಿಲಿಗೆ ತಲುಪಿಸಿದರು. ಕೊನೆಯ 6 ಓವರುಗಳಲ್ಲಿ ಮುಂಬೈ ತಂಡ 96 ರನ್ ದೋಚಿತು.

ಎಡಗೈ ಬ್ಯಾಟರ್ ತಿಲಕ್ ಕೊನೆಯ 14 ಟಿ20 ಇನಿಂಗ್ಸ್‌ಗಳಲ್ಲಿ ಒಂದೂ ಅರ್ಧ ಶತಕ ಗಳಿಸಿರಲಿಲ್ಲ. ಇದು ಮುಂಬೈ ಇಂಡಿಯನ್ಸ್ ತಂಡದ ಆಟಗಾರನೊಬ್ಬ ಗಳಿಸಿದ ಜಂಟಿ ಅತಿ ವೇಗದ ಶತಕ. ಈ ಹಿಂದೆ ಸನತ್ ಜಯಸೂರ್ಯ ಕೂಡ 45 ಎಸೆತಗಳಲ್ಲಿ ಶತಕ ಬಾರಿಸಿದ್ದರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 199 (ನಮನ್ ಧೀರ್ 45, ಸೂರ್ಯಕುಮಾರ್ ಯಾದವ್ 15, ತಿಲಕ್ ವರ್ಮಾ ಔಟಾಗದೇ 101, ಹಾರ್ದಿಕ್ ಪಾಂಡ್ಯ 15; ಮೊಹಮ್ಮದ್ ಸಿರಾಜ್ 25ಕ್ಕೆ1, ಕಗಿಸೊ ರಬಾಡ 33ಕ್ಕೆ3, ಪ್ರಸಿದ್ಧ ಕೃಷ್ಣ 54ಕ್ಕೆ1). ಗುಜರಾತ್ ಟೈಟನ್ಸ್: 15.5 ಓವರ್‌ಗಳಲ್ಲಿ 100 (ಶುಭಮನ್ ಗಿಲ್ 14, ವಾಷಿಂಗ್ಟನ್ ಸುಂದರ್ 26, ಶಾರುಕ್ ಖಾನ್ 17; ಅಶ್ವನಿ ಕುಮಾರ್ 24ಕ್ಕೆ4, ಅಲ್ಲಾಹ ಘಜನಫರ್ 17ಕ್ಕೆ2, ಮಿಚೆಲ್ ಸ್ಯಾಂಟ್ನರ್ 16ಕ್ಕೆ2, ಜಸ್‌ಪ್ರೀತ್ ಬೂಮ್ರಾ 15ಕ್ಕೆ1, ಹಾರ್ದಿಕ್ ಪಾಂಡ್ಯ 18ಕ್ಕೆ1).
ಪಂದ್ಯದ ಆಟಗಾರ: ತಿಲಕ್ ವರ್ಮಾ.



ತಿಲಕ್ ವರ್ಮಾ
ರನ್ 101*
ಎಸೆತ 45
ಬೌಂಡರಿ 8
ಸಿಕ್ಸರ್ 7



4 ವಿಕೆಟ್ ಪಡೆದ ಅಶ್ವನಿ ಕುಮಾರ್

82
ಇದು ತಿಲಕ್ ವರ್ಮಾ ಕೊನೆಯ ಆರು ಓವರುಗಳಲ್ಲಿ ಗಳಿಸಿದ ರನ್‌ಗಳು. ಐಪಿಎಲ್‌ನಲ್ಲಿ ಇದು ದಾಖಲೆ. ಕ್ವಿಂಟನ್ ಡಿಕಾಕ್ 2022ರಲ್ಲಿ ಲಖನೌ ಸೂಪರ್ ಜೈಂಟ್ಸ್ ಪರ (ಕೆಕೆಆರ್ ವಿರುದ್ಧ) ಗಳಿಸಿದ 80 ರನ್‌ಗಳು ಈ ಹಿಂದಿನ ದಾಖಲೆ ಆಗಿತ್ತು.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯ ಇಂದು

ಹ್ಯಾಟ್ರಿಕ್ ಜಯದ ನಿರೀಕ್ಷೆಯಲ್ಲಿ ಸನ್

ಹೈದರಾಬಾದ್ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಪಾಯಿಂಟ್ ಪಟ್ಟಿಯ ಮಧ್ಯದಲ್ಲಿವೆ. ಎರಡೂ ತಂಡಗಳು ಮಂಗಳವಾರ ಹೈದರಾಬಾದಿನಲ್ಲಿ ಮುಖಾಮುಖಿ ಆಗಲಿದ್ದು, ಸನ್‌ರೈಸರ್ಸ್ ತಂಡವು ತವರಿನ ಅಂಗಳದಲ್ಲಿ ಆಡುವ ಲಾಭವನ್ನು ಪಡೆಯಲು ಯತ್ನಿಸಲಿದೆ.

ಎರಡೂ ತಂಡಗಳು ತಲಾ ಆರು ಪಾಯಿಂಟ್ಸ್ ಪಡೆದಿವೆ. ಒಂದು ಪಂದ್ಯ ಹೆಚ್ಚು ಆಡಿರುವ ಡೆಲ್ಲಿ ತಂಡವು ಉತ್ತಮ ನೆಟ್ ರನ್ ರೇಟ್ ಆಧಾರದಲ್ಲಿ ಚೂರು ಮುಂದಿದೆ.

ಕಾಯಂ ನಾಯಕ ಪ್ಯಾಟ್ ಕಮಿನ್ಸ್ ಅನುಪಸ್ಥಿತಿಯಲ್ಲಿ ತಂಡದ ಬೌಲಿಂಗ್ ಆರಂಭದಲ್ಲಿ ಪರಿಣಾಮಕಾರಿ ಎನಿಸಿರಲಿಲ್ಲ. ಆಸ್ಟ್ರೇಲಿಯಾದ ವೇಗಿ ತಂಡವನ್ನು ಸೇರಿಕೊಂಡಿದ್ದರೂ ಮಂಗಳವಾರದ ಪಂದ್ಯಕ್ಕೂ ಲಭ್ಯರಿಲ್ಲ.

ಆದರೆ ಎರಡು ಪಂದ್ಯಗಳಿಂದ ಹೊಸಬರು ದೊರೆತ ಅವಕಾಶಗಳನ್ನು ಬಾಚಿಕೊಂಡಿದ್ದಾರೆ. ವಿದರ್ಭದ ಪ್ರಫುಲ್ ಹಿಂಗೆ, ಬಿಹಾರದ ಸಾಕಿಬ್ ಹುಸೇನ್, ಶಿವಾಂಗ್ ಕುಮಾರ್ ಅವರು ಹುರುಪಿನಿಂದ ಬೌಲಿಂಗ್ ಮಾಡಿದ್ದಾರೆ. ದಾಳಿಗೆ ಜೀವಂತಿಕೆ ತುಂಬಿದ್ದಾರೆ. ರಾಜಸ್ಥಾನ ರಾಯಲ್ಸ್ ವಿರುದ್ಧ ಪಂದ್ಯದಲ್ಲಿ ಪ್ರಫುಲ್, ಸಾಕಿಬ್ ಮಿಂಚಿದರೆ, ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಇಶಾನ್ ಮಾಲಿಂಗ ನೇತೃತ್ವದಲ್ಲಿ ಬೌಲರ್‌ಗಳು ಸಾಂಘಿಕ ದಾಳಿ ನಡೆಸಿದ್ದರು. ತಂಡ ಇತ್ತೀಚೆಗೆ ಗೆಲುವಿನ ಹಳಿಗೆ ಮರಳಲು ಈ ಸುಧಾರಣೆ ಪ್ರಮುಖ ಪಾತ್ರ ವಹಿಸಿದೆ.



ಅಭಿಷೇಕ್ ಶರ್ಮಾ

ಆದರೆ ಬ್ಯಾಟಿಂಗ್ ವಿಷಯದಲ್ಲಿ ಇದೇ ಮಾತು ಹೇಳುವಂತಿಲ್ಲ. ಆಕ್ರಮಣಕಾರಿ, ಹೈರಿಸ್ಕ್ ಮನೋಭಾವ ಬದಲಾಗಿಲ್ಲ. ಆದರೆ ಪ್ರತಿ ಬಾರಿ ಫಲ ಸಿಗುತ್ತಿಲ್ಲ. ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಹಂಗಾಮಿ ನಾಯಕ ಇಶಾನ್ ಕಿಶನ್ ಮೂರೂ ಮಂದಿ ಒಟ್ಟಿಗೆ ಮಿಂಚಿಲ್ಲ. ಇದರಿಂದ ಕ್ಲಾಸೆನ್ ಹೆಗಲಮೇಲೆ ಹೊಣೆಬೀಳುತ್ತಿದೆ. ಅವರು ಮೊದಲು ತಂಡಕ್ಕೆ ಚೇತರಿಕೆ ನೀಡಿ ನಂತರ ರನ್‌ವೇಗ ಹೆಚ್ಚಿಸುವ ಜವಾಬ್ದಾರಿ ವಹಿಸಬೇಕಿದೆ.

ಡೆಲ್ಲಿ ಕ್ಯಾಪಿಟಲ್ಸ್ ಆಟದಲ್ಲಿ ಅಸ್ಥಿರತೆಯಿದೆ. ಕೆ.ಎಲ್.ರಾಹುಲ್, ಪಥುಮ್ ನಿಸಾಂಕ ಮತ್ತು ಟ್ರಿಸ್ಟನ್ ಸ್ಟಬ್ಸ್ ರನ್ ಗಳಿಸುತ್ತಿದ್ದಾರೆ. ಆದರೆ ತಂಡ ಅವರಿಂದ ಹೆಚ್ಚಿನದನ್ನು ನಿರೀಕ್ಷಿಸುತ್ತಿದೆ. ಮೊದಲ ಎರಡು ಪಂದ್ಯಗಳಲ್ಲಿ ಅಬ್ಬರಿಸಿದ್ದ ಸಮೀರ್ ರಿಜ್ವಿ ಆಟ ನಂತರ ಸೊರಗಿದೆ.

ಬೌಲಿಂಗ್ ವಿಭಾಗದಲ್ಲಿ ವೈವಿಧ್ಯತೆ, ಆಯ್ಕೆಗಳಿವೆ. ಅನುಭವಿ ಮಿಚೆಲ್ ಸ್ಟಾರ್ಕ್ ಗೈರುಹಾಜರಿಯಲ್ಲಿ ದಕ್ಷಿಣ ಆಫ್ರಿಕಾದ ವೇಗಿ ಲುಂಗಿ ಎನ್‌ಗಿಡಿ ಹೊಸಚೆಂಡಿನ ದಾಳಿಯಲ್ಲಿ ಯಶಸ್ಸು ಕಾಣುತ್ತಿದ್ದಾರೆ. 5 ಪಂದ್ಯಗಳಿಂದ 7 ವಿಕೆಟ್ ಗಳಿಸಿದ್ದಾರೆ.

ನಾಯಕ ಅಕ್ಷರ್ ಪಟೇಲ್ ಮಧ್ಯಮ ಹಂತದ ಓವರುಗಳಲ್ಲಿ ಮಿತವ್ಯಯಿಯಾಗಿದ್ದಾರೆ. ಕುಲದೀಪ್ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ವೇಗಿಗಳಾದ ಮುಕೇಶ್ ಕುಮಾರ್ ಮತ್ತು ಟಿ.ನಟರಾಜನ್ ಅಲ್ಲೊಮ್ಮೆ ಇಲ್ಲೊಮ್ಮೆ ಎನ್ನುವಂತೆ ಭರವಸೆ ಮೂಡಿಸಿದ್ದಾರೆ.



ಕೆ.ಎಲ್. ರಾಹುಲ್

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಪಿಬಿಕೆಎಸ್	6	5	0	1	11	1.420
ಆರ್‌ಸಿಬಿ	6	4	2	0	8	1.171
ಆರ್ ಆರ್	6	4	2	0	8	0.599
ಎಸ್‌ಆರ್‌ಎಚ್	6	3	3	0	6	0.566
ಡಿ ಸಿ	5	3	2	0	6	0.310
ಜಿ ಟಿ	6	3	3	0	6	- 0.821
ಎಂ ಐ	6	2	4	0	4	0.067
ಸಿಎಸ್‌ಕೆ	6	2	4	0	4	- 0.780
ಎಲ್‌ಎಸ್‌ಜಿ	6	2	4	0	4	- 1.173
ಕೆಕೆಆರ್	7	1	5	1	3	- 0.879

ಆರೆಂಜ್ ಕ್ಯಾಪ್–ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (283 ರನ್)
ಪರ್ಪಲ್ ಕ್ಯಾಪ್–ಅನ್ಷುಲ್ ಕಂಬೋಜ್, ಸಿಎಸ್‌ಕೆ (13 ವಿಕೆಟ್)

ಇಂದಿನ ಪಂದ್ಯ

ಸನ್‌ರೈಸರ್ಸ್ ಹೈದರಾಬಾದ್ V/s ಡೆಲ್ಲಿ ಕ್ಯಾಪಿಟಲ್ಸ್
ತಾಣ: ಹೈದರಾಬಾದ್, ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಬಲಾಬಲ ಒಟ್ಟು ಪಂದ್ಯ 26

ಸನ್‌ರೈಸರ್ಸ್ ಜಯ	12
ಕ್ಯಾಪಿಟಲ್ಸ್ ಗೆಲುವು	13
ಫಲಿತಾಂಶವಿಲ್ಲ	1

ಡೋಪಿಂಗ್: ವಿಶ್ವ ಅಥ್ಲೆಟಿಕ್ಸ್‌ನ ಇಂಟೆಗ್ರಿಟಿ ಘಟಕ ಎಚ್ಚರಿಕೆ

ತೀವ್ರ ಅಪಾಯ ಎದುರಿಸುತ್ತಿರುವ ಭಾರತ

ಮೊನಾಕೊ (ಪಿಟಿಐ): ಎರಡು ವರ್ಷಗಳಿಂದ ಡೋಪಿಂಗ್ ನಿಯಮ ಉಲ್ಲಂಘಿಸುವ ಕ್ರೀಡಾಪಟುಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನದಲ್ಲಿದೆ. ಇದೀಗ ವಿಶ್ವ ಅಥ್ಲೆಟಿಕ್ಸ್‌ನ ಅಥ್ಲೆಟಿಕ್ಸ್ ಇಂಟೆಗ್ರಿಟಿ ಘಟಕವು (ಎಐಯು), ಭಾರತವನ್ನು 'ಉದ್ದೀಪನ ಮದ್ದುಸೇವನೆ ವಿಷಯದಲ್ಲಿ ಅತಿ ಹೆಚ್ಚಿನ ಅಪಾಯ ಎದುರಿಸುತ್ತಿರುವ ದೇಶ' ಎಂದು ವರ್ಗೀಕರಿಸಿದೆ.

ಈ ಬೆಳವಣಿಗೆಯಿಂದಾಗಿ ಅಥ್ಲೀಟುಗಳು ಉದ್ದೀಪನ ಮದ್ದುಸೇವನೆ ತಡೆ ನಿಯಮಗಳಿಗೆ ಮೊದಲಿಗಿಂತ ಕಟ್ಟುನಿಟ್ಟಾಗಿ ಒಳಗಾಗಬೇಕಾಗುತ್ತದೆ.

ವಿಶ್ವ ಅಥ್ಲೆಟಿಕ್ಸ್‌ನ ಉದ್ದೀಪನ ಮದ್ದುಸೇವನೆ ತಡೆ ನಿಯಮಗಳ 15ನೇ ವಿಧಿಯಡಿ ಇಂಟೆಗ್ರಿಟಿ ಘಟಕವು, ಭಾರತ ಅಥ್ಲೆಟಿಕ್ಸ್ ಫೆಡರೇಷನ್‌ಅನ್ನು 'ಬಿ' ವಿಭಾಗದಿಂದ 'ಎ' ವಿಭಾಗಕ್ಕೆ (ಕೆಟಗರಿಗೆ) ಸೇರ್ಪಡೆ ಮಾಡಿದೆ.

'ಭಾರತದಲ್ಲಿ ಉದ್ದೀಪನ ಮದ್ದುಸೇವನೆ ಪರಿಸ್ಥಿತಿ ದೀರ್ಘಕಾಲದಿಂದ ಅಪಾಯಕಾರಿ ಮಟ್ಟದಲ್ಲಿಯೇ ಇದೆ. ಉದ್ದೀಪನ ಮದ್ದುಸೇವನೆ ಪ್ರಕರಣಗಳಿಗೆ ತಡೆಯೊಡ್ಡುವ ಯೋಜನೆಗಳ ಗುಣಮಟ್ಟ ದುರದೃಷ್ಟವಶಾತ್ ಪರಿಣಾಮಕಾರಿಯಾಗಿಲ್ಲ' ಎಂದು ಎಐಯು ಮಂಡಳಿಯ ಮುಖ್ಯಸ್ಥ ಡೇವಿಡ್ ಹೌಮನ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.



ಉದ್ದೀಪನ ಮದ್ದುಸೇವನೆ ತಡೆ ನಿಯಮಗಳಿಗೆ ಸಂಬಂಧಿಸಿ ಸುಧಾರಣೆ ತರಲು ಭಾರತ ಅಥ್ಲೆಟಿಕ್ ಫೆಡರೇಷನ್ ಯತ್ನಿಸಿದರೂ ಪ್ರಗತಿ ಗಮನಾರ್ಹವಾಗಿಲ್ಲ. ಈ ಹಿಂದೆ 'ಎ' ವಿಭಾಗದ ಇತರ ಸದಸ್ಯ ಫೆಡರೇಷನ್‌ಗಳ ಜೊತೆ ಕಾರ್ಯನಿರ್ವಹಿಸಿದಂತೆ, ಉದ್ದೀಪನ ಮದ್ದು ಪಿಡುಗಿಗೆ ಪರಿಣಾಮಕಾರಿ ಕ್ರಮಗಳ ಜಾರಿಗೆ ಭಾರತದ ಫೆಡರೇಷನ್ ಜೊತೆ ಎಐಯು ಕೈಜೋಡಿಸಲಿದೆ' ಎಂದು ಅವರು ಹೇಳಿದ್ದಾರೆ.

2022 ರಿಂದ 2025ರ ಅವಧಿಯಲ್ಲಿ ಅಥ್ಲೆಟಿಕ್ಸ್‌ನಲ್ಲಿ ಡೋಪಿಂಗ್ ನಿಯಮಗಳ ಅತಿ ಹೆಚ್ಚು ಉಲ್ಲಂಘನೆಯಲ್ಲಿ ಭಾರತವು ವಿಶ್ವದ ಅಗ್ರ ಎರಡರಲ್ಲಿ ಸ್ಥಾನ ಪಡೆದಿದೆ.

ವಿಶ್ವ ಅಥ್ಲೆಟಿಕ್ಸ್‌ನ ಡೋಪಿಂಗ್ ನಿಗ್ರಹ ನಿಯಮಗಳಿಗೆ ಸಂಬಂಧಿಸಿ ಎಐಯು, ಮೂರು ವಿಭಾಗಗಳನ್ನು ಮಾಡಿದೆ. ಎ ವಿಭಾಗದಲ್ಲಿ ಅತಿ ಹೆಚ್ಚು ಅಪಾಯವಿರುವ ದೇಶಗಳ ಫೆಡರೇಷನ್‌ಗಳು ಇವೆ. ಬಿ ವಿಭಾಗದಲ್ಲಿ ಮಧ್ಯಮ ಪ್ರಮಾಣದ ರಿಸ್ಕ್ ಇರುವ ದೇಶಗಳು ಇವೆ. ಸಿ ವಿಭಾಗದ ಸದಸ್ಯ ಫೆಡರೇಷನ್‌ಗಳಲ್ಲಿ ಡೋಪಿಂಗ್ ಉಲ್ಲಂಘಿಸುವ ಪ್ರಕರಣಗಳು ತೀರಾ ಕಡಿಮೆ ಇರುತ್ತವೆ.

ಭಾರತದಲ್ಲಿ ಡೋಪಿಂಗ್ ನಿಯಮ ಉಲ್ಲಂಘಿಸಿ ಅಮಾನತುಗೊಂಡ 148 ಕ್ರೀಡಾಪಟುಗಳಿದ್ದಾರೆ. ಈ ವಿಷಯದಲ್ಲಿ ಭಾರತವು, ಅಗ್ರಸ್ಥಾನದಲ್ಲಿದ್ದ ಕೆನ್ಯಾವನ್ನು ಹಿಂದೆಹಾಕಿದೆ.

ಮೂರು ವರ್ಷಗಳಿಗೊಮ್ಮೆ ಎಐಯು ಮಂಡಳಿಯು ವಿಭಾಗಗಳಲ್ಲಿರುವ ಫೆಡರೇಷನ್ ಸ್ಥಾನಗಳ ಬಗ್ಗೆ ವಿವೇಚನೆಯ ಮೇರೆಗೆ ನಿರ್ಧಾರ ಕೈಗೊಳ್ಳುತ್ತದೆ.

ಎ ಕೆಟಗರಿಯಲ್ಲಿರುವ ಸದಸ್ಯ ಫೆಡರೇಷನ್, ನಿಯಮಗಳನ್ನು ಪರಿಣಾಮಕಾರಿ, ಚುರುಕಾಗಿ ಪಾಲಿಸಬೇಕಾಗುತ್ತದೆ. ವಾರ್ಷಿಕ ಪರೀಕ್ಷಾ ಯೋಜನೆಗಳ ವಿವರ ನಿರ್ವಹಣೆ ಮಾಡಬೇಕಾಗುತ್ತದೆ. ಅವುಗಳ ಅನುಷ್ಠಾನ ಅಂತರರಾಷ್ಟ್ರೀಯ ಮಟ್ಟದಲ್ಲಿರುವಂತೆ ನೋಡಿಕೊಳ್ಳಬೇಕಾಗುತ್ತದೆ.

ಲಖನೌ ತಂಡಕ್ಕೆ ಜೋಶ್ ಇಂಗ್ಲಿಸ್



ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಬ್ಯಾಟರ್ ಜೋಶ್ ಇಂಗ್ಲಿಸ್ ಅವರು ಮೇ 4ರಂದು ಮುಂಬೈ ಇಂಡಿಯನ್ಸ್ ವಿರುದ್ಧದ ಐಪಿಎಲ್ ಪಂದ್ಯಕ್ಕೂ ಮುನ್ನ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಸೇರಿಕೊಳ್ಳುವ ಸಾಧ್ಯತೆ ಇದೆ.

ತಮ್ಮ ವಿವಾಹದ ಕಾರಣದಿಂದ 31 ವರ್ಷದ ಇಂಗ್ಲಿಸ್ ಅವರು ಐಪಿಎಲ್ ಋತುವಿನ ಮೊದಲಾರ್ಧದ ಪಂದ್ಯಗಳಿಗೆ ಅಲಭ್ಯರಾಗಿದ್ದರು. ಏಪ್ರಿಲ್ 18ರಂದು ಅವರ ವಿವಾಹ ನಡೆದಿದೆ. ಅವರು ಮುಂದಿನ ತಿಂಗಳು ಭಾರತಕ್ಕೆ ಬರುವ ನಿರೀಕ್ಷೆಯಿದೆ. ಲಖನೌ ತಂಡವು ಇಂಗ್ಲಿಸ್ ಅವರನ್ನು ₹8.6 ಮೊತ್ತಕ್ಕೆ ಖರೀದಿಸಿತ್ತು.

ರಿಷಭ್ ಪಂತ್ ನೇತೃತ್ವದ ತಂಡವು ಕಳೆದ ಮೂರು ಪಂದ್ಯಗಳಲ್ಲಿ ಸೋತು ಪಾಯಿಂಟ್ ಪಟ್ಟಿಯಲ್ಲಿ ಎಂಟನೇ ಸ್ಥಾನದಲ್ಲಿದೆ. ಆರು ಪಂದ್ಯಗಳಲ್ಲಿ ಎರಡನ್ನು ಮಾತ್ರ ಗೆದ್ದಿದೆ. ಲಖನೌ ತಂಡವು ತನ್ನ ಮುಂದಿನ ಪಂದ್ಯವನ್ನು ಏಪ್ರಿಲ್ 22ರಂದು ರಾಜಸ್ಥಾನ ರಾಯಲ್ಸ್ ವಿರುದ್ಧ ಆಡಲಿದೆ.

ಗುರು ಹಾಕಿ ಕ್ಲಬ್ ಜಯಭೇರಿ

ಬೆಂಗಳೂರು: ಕಾರ್ತಿಕ್ ಹಾಗೂ ಸಂದೀಪ್ ಅವರು ಗಳಿಸಿದ ತಲಾ ಎರಡು ಗೋಲುಗಳ ನೆರವಿನಿಂದ ಗುರು ಹಾಕಿ ಕ್ಲಬ್ ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಲೀಗ್ ಪಂದ್ಯದಲ್ಲಿ ಸೋಮವಾರ 4–2ರಿಂದ ರೇಂಜರ್ಸ್ ಹಾಕಿ ಕ್ಲಬ್ ತಂಡದ ವಿರುದ್ಧ ಜಯಿಸಿತು.

ಶಾಂತಿನಗರದ ಹಾಕಿ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಬಾಂಬರ್ಸ್ ಹಾಕಿ ಕ್ಲಬ್ 6–0ಯಿಂದ ಕೂರ್ಗ್ ಹಾಕಿ ಅಸೋಸಿಯೇಷನ್ ತಂಡವನ್ನು ಸೋಲಿಸಿತು.

ಓಜಸ್‌ಗೆ ಆಘಾತ ನೀಡಿದ ಪ್ರಕಾಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಪ್ರಕಾಶ್ ಸರನ್ ಅವರು ಸೋಮವಾರ ಆರಂಭಗೊಂಡ ಎಐಟಿಎ ಟಿಎನ್‌ಆರ್ ಸ್ಮರಣಾರ್ಥ ಟೆನಿಸ್ ಟೂರ್ನಿಯ ಪುರುಷರ ಮೊದಲ ಸುತ್ತಿನಲ್ಲಿ ಅಗ್ರ ಶ್ರೇಯಾಂಕದ ಆಟಗಾರ ಓಜಸ್ ತೇಜೊ ಅವರಿಗೆ ಆಘಾತ ನೀಡಿದರು.



ಪ್ರಕಾಶ್ ಸರನ್

17 ವರ್ಷ ವಯಸ್ಸಿನ ಪ್ರಕಾಶ್ ಅವರು ಇಲ್ಲಿನ ಟಾಪ್‌ಸ್ಪಿನ್ ಟೆನಿಸ್ ಅಕಾಡೆಮಿಯಲ್ಲಿ ನಡೆದ ಪಂದ್ಯದಲ್ಲಿ 6-4, 2-6, 7-6(5)ರಿಂದ ತಮಿಳುನಾಡಿನ ಆಟಗಾರ ಓಜಸ್ ಅವರನ್ನು ಮಣಿಸಿದರು. ಪುರುಷರ ವಿಭಾಗದ ಮೊದಲ ಸುತ್ತಿನ ಉಳಿದ ಪಂದ್ಯಗಳು ಮಂಗಳವಾರ ನಡೆಯಲಿವೆ.

ಮಹಿಳೆಯರ ವಿಭಾಗದಲ್ಲಿ ಶ್ರೇಯಾಂಕ ರಹಿತ ಆಟಗಾರ್ತಿ ಧರಣಿ ಡಿ. ಅವರು 6-2, 6-3ರಿಂದ ಐದನೇ ಶ್ರೇಯಾಂಕದ ಆಟಗಾರ್ತಿ ಸಯೇಶಾ ಟಿ. ವಿರುದ್ಧ ಜಯಿಸಿದರು. ಹೃದೇಯಶಿ ಪಿ., ಹೀರಾ ವಿ., ಅನನ್ಯಾ ಜೆ., ನಿಧಿ ಬಿ., ಅನನ್ಯಾ ಎಸ್.ಆರ್., ರೀಟ್ ಜೆ. ಹಾಗೂ ಧನಶ್ರೀ ಪಿ. ಅವರೂ ಎರಡನೇ ಸುತ್ತಿಗೆ ಮುನ್ನಡೆದರು.

ಹೃದೇಯಶಿ ಅವರು ಮೊದಲ ಸುತ್ತಿನಲ್ಲಿ 7-6(8), 6-2ರಿಂದ ನೇರ ಸೆಟ್‌ಗಳಲ್ಲಿ ಅರ್ಘ್ಯಾನ್ ಕೆ. ಅವರನ್ನು ಸೋಲಿಸಿದರು. ಹೀರಾ 6-0, 6-1ರಿಂದ ನಿಕಾಂಶಿ ವಿರುದ್ಧ ನಿರಾಯಾಸ ಗೆಲುವು ಸಾಧಿಸಿದರು. ಅನನ್ಯಾ ಜೆ. ಅವರು 6-2, 6-2ರಿಂದ ಪ್ರಾಚಿ ವಿರುದ್ಧ ಹಾಗೂ ನಿಧಿ ಅವರು ಇದೇ ಅಂತರದಲ್ಲಿ ನಮಿರಾ ಅವರನ್ನು ಸೋಲಿಸಿದರು.

ಅನನ್ಯಾ ಎಸ್.ಆರ್. 6-4, 6-2ರಿಂದ ಇರಾ ತ್ರಿಪಾಠಿ ಅವರನ್ನು ಹಿಮ್ಮೆಟ್ಟಿಸಿದರು. ರೀಟ್ ಅವರು 6-0, 6-0ಯಿಂದ ಟಿ.ವಿ.ದೇವಶ್ರೀ ವಿರುದ್ಧ ಹಾಗೂ ಧನಶ್ರೀ 6-1, 6-1ರಿಂದ ಹಂಸಿಕಾ ವಿರುದ್ಧ ಸುಲಭ ಜಯ ಸಾಧಿಸಿದರು.

ಸಂಕ್ಷಿಪ್ತ ಸುದ್ದಿ

ಶೂಟರ್‌ಗಳ ಮೇಲೆ ನಿರೀಕ್ಷೆ

ಕೈರೊ (ಪಿಟಿಐ): ಭಾರತದ ಉದಯೋನ್ಮುಖ ಶೂಟರ್‌ಗಳು ಮಂಗಳವಾರ ಇಲ್ಲಿ ಆರಂಭವಾಗುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ. ಕರ್ನಾಟಕದ ಅನುಷ್ಕಾ ತೋಕೂರು ಕೂಡ ಸ್ಪರ್ಧಾಕಣದಲ್ಲಿದ್ದಾರೆ.



ಅನುಷ್ಕಾ ತೋಕೂರು

ಭಾರತದಿಂದ 71 ಶೂಟರ್‌ಗಳ ಬಲಿಷ್ಠ ತಂಡ ಕಣಕ್ಕಿಳಿಯಲಿದೆ. ನೆರವು ಸಿಬ್ಬಂದಿ ಸೇರಿದಂತೆ 58 ಮಂದಿಯ ಮೊದಲ ಬ್ಯಾಚ್ ಭಾನುವಾರ ಕೈರೊಗೆ ತಲುಪಿದೆ. 10 ಮೀಟರ್ ಏರ್ ರೈಫಲ್, 10 ಮೀಟರ್ ಏರ್ ಪಿಸ್ತೂಲ್, 25 ಮೀಟರ್ ಪಿಸ್ತೂಲ್ ಮತ್ತು ಸ್ಕೀಟ್ ಸೇರಿದಂತೆ ವಿವಿಧ ಜೂನಿಯರ್ ವಿಭಾಗಗಳಲ್ಲಿ ಪದಕಗಳಿಗಾಗಿ ಸ್ಪರ್ಧೆ ನಡೆಯಲಿದೆ.

ಹಾಕಿ ಶಿಬಿರಕ್ಕೆ ಮನ್‌ಪ್ರೀತ್

ನವದೆಹಲಿ (ಪಿಟಿಐ): ಅನುಭವಿಗಳಾದ ಹರ್ಮನ್‌ಪ್ರೀತ್ ಸಿಂಗ್, ಮನ್‌ಪ್ರೀತ್ ಸಿಂಗ್ ಸೇರಿದಂತೆ 36 ಆಟಗಾರರನ್ನು ಸೀನಿಯರ್ ಪುರುಷರ ರಾಷ್ಟ್ರೀಯ ತರಬೇತಿ ಶಿಬಿರಕ್ಕೆ ಹಾಕಿ ಇಂಡಿಯಾ ಆಯ್ಕೆ ಮಾಡಿದೆ.

ಏಪ್ರಿಲ್ 20ರಿಂದ ಮೇ 9 ರವರೆಗೆ ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿ ಶಿಬಿರ ನಡೆಯಲಿದೆ. 2025-26ರ ಪ್ರೊ ಲೀಗ್‌ನ ಯುರೋಪ್ ಲೆಗ್, ವಿಶ್ವಕಪ್ ಮತ್ತು ಏಷ್ಯನ್ ಗೇಮ್ಸ್ ಸೇರಿದಂತೆ ಅಂತರರಾಷ್ಟ್ರೀಯ ಋತುವಿಗೆ ತಂಡವನ್ನು ಸಿದ್ಧಗೊಳಿಸುವ ಭಾಗವಾಗಿ ಈ ಶಿಬಿರ ನಡೆಯಲಿದೆ.

ಸಂಭಾವ್ಯ ಆಟಗಾರರ ತಂಡದಲ್ಲಿ ಅನುಭವಿ ಮತ್ತು ಹೊಸಮುಖಗಳ ಮಿಶ್ರಣವಿದೆ.

'ಕೆ.ಡಿ.ಜಾಧವ್‌ಗೆ ಪದ್ಮವಿಭೂಷಣ: ಮೇ4ರೊಳಗೆ ನಿರ್ಧಾರಕ್ಕೆ ಬನ್ನಿ'

ಮುಂಬೈ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಪದಕ ಗೆದ್ದ ಸ್ವತಂತ್ರ ಭಾರತದ ಮೊದಲ ಕ್ರೀಡಾಪಟು, ಪೈಲ್ವಾನ್ ಕಶೋಬಾ ದಾದಾಸಾಹೇಬ್ ಜಾಧವ್ ಅವರಿಗೆ ಮರಣೋತ್ತರವಾಗಿ ಪದ್ಮ ವಿಭೂಷಣ ಪುರಸ್ಕಾರ ನೀಡುವ ಸಂಬಂಧ ಮೇ 4ರ ಒಳಗೆ ನಿರ್ಧರಿಸುವಂತೆ ಬಾಂಬೆ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

ಹೈಕೋರ್ಟ್‌ನ ಕೊಲ್ಹಾಪುರ ಪೀಠದ ನ್ಯಾಯಮೂರ್ತಿಗಳಾದ ಮಾಧವ ಜಮದಾರ ಮತ್ತು ಪ್ರವೀಣ್ ಪಾಟೀಲ್ ಅವರು ಏಪ್ರಿಲ್ 15ರಂದು ಆದೇಶ ಹೊರಡಿಸಿದ್ದು, ಜಾಧವ್ ಅವರು ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎಂಬುದರಲ್ಲಿ ವಿವಾದವಿಲ್ಲ ಎಂದು ಹೇಳಿದ್ದಾರೆ.

ಕಶೋಬಾ ಅವರ ಪುತ್ರ ರಣಜೀತ್ ಯಾದವ್ ಸ್ಥಾಪಿಸಿರುವ 'ಕುಸ್ತಿವೀರ ಕಶೋಬಾ ಜಾಧವ್ ಪ್ರತಿಷ್ಠಾನ' ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನಡೆಸುತ್ತಿದೆ. ಮುಂದಿನ ವಿಚಾರಣೆಯನ್ನು ಮೇ 5ಕ್ಕೆ ಮುಂದೂಡಲಾಗಿದೆ.

ರೆಡ್ಸ್ ಯುನೈಟೆಡ್‌ಗೆ ಮಣಿದ ಟೆಕ್ನಿಕೊ

ಬೆಂಗಳೂರು: ಮೊದಲಾರ್ಧದಲ್ಲಿ ಚಾರ್ವಿ ಎ. ಅವರು ಗಳಿಸಿದ ಗೋಲು ಹಾಗೂ ದ್ವಿತೀಯಾರ್ಧದಲ್ಲಿ ಯುಕ್ತಿ ಪಿ. ಗುಪ್ತಾ ಅವರ ಉಡುಗೊರೆ ಗೋಲಿನ ನೆರವಿನಿಂದ ರೆಡ್ಸ್ ಯುನೈಟೆಡ್ ತಂಡವು ಕೆಎಸ್‌ಎಫ್‌ಎ ಎ ಡಿವಿಷನ್ ಲೀಗ್ ಮಹಿಳಾ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಸೋಮವಾರ 2–0ಯಿಂದ ಟೆಕ್ನಿಕೊ ಫುಟ್‌ಬಾಲ್ ಫೌಂಡೇಶನ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ರೆಡ್ಸ್ ಯುನೈಟೆಡ್ ತಂಡದ ಚಾರ್ವಿ ಅವರು 16ನೇ ನಿಮಿಷದಲ್ಲಿ ಗೋಲಿನ ಖಾತೆ ತೆರೆದರು. ಟೆಕ್ನಿಕೊ ತಂಡದ ಯುಕ್ತಿ ಅವರು 68ನೇ ನಿಮಿಷದಲ್ಲಿ ಎದುರಾಳಿ ತಂಡಕ್ಕೆ ಗೋಲಿನ ಉಡುಗೊರೆ ನೀಡಿದರು.

ಕೊಡವ ಕೌಟುಂಬಿಕ ಹಾಕಿ: ಪುದಿಯೊಕ್ಕಡ ತಂಡಕ್ಕೆ ಗೆಲುವು

ನಾಪೋಕ್ಲು (ಕೊಡಗು ಜಿಲ್ಲೆ): ಇಲ್ಲಿನ ಚೆರಿಯ ಪರಂಬುವಿನಲ್ಲಿ ನಡೆಯುತ್ತಿರುವ ಚೇನಂಡ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಪುದಿಯೊಕ್ಕಡ ತಂಡವು ಸೋಮವಾರ 5–1ರಿಂದ ಮರುವಂಡ ವಿರುದ್ಧ ಭರ್ಜರಿ ಜಯ ಗಳಿಸಿತು.

ಪರದಂಡ 4–1ರಿಂದ ನಂಬುಡುಮಾಡ ವಿರುದ್ಧ; ಮಂಡೇಟಿರ 3–0ರಿಂದ ಕೈಬುಲಿರ ವಿರುದ್ಧ; ಬೊಳ್ಳೇಪಂಡ 3–0ಯಿಂದ ಮಂದೆಯಡ ವಿರುದ್ಧ; ಮಚ್ಚಾರಂಡ 1–0ಯಿಂದ ನಾಳಿಯಂಡ ವಿರುದ್ಧ; ಮಂಡೇಪಂಡ 3-0ಯಿಂದ ಕಡೇಮಡ ವಿರುದ್ಧ; ಕಾಡ್ಯಮಾಡ 1–0ಯಿಂದ ತೀತಿಮಾಡ ವಿರುದ್ಧ ಗೆಲುವು ದಾಖಲಿಸಿದವು.

ಇಟ್ಟೀರ 1-0ಯಿಂದ ಐಚಂಡ ವಿರುದ್ಧ; ಐಚೆಟ್ಟೀರ 1–0ಯಿಂದ ಅಲೇಮಾಡ ವಿರುದ್ದ; ಕುಪ್ಪಂಡ (ನಾಂಗಾಲ) 2-0ಯಿಂದ ಪಂದ್ಯಂಡ ವಿರುದ್ಧ; ಚೇಂದಂಡ 1–0ಯಿಂದ ಮುಕ್ಕಾಟಿರ (ಕಡಗದಾಳು) ವಿರುದ್ಧ; ಕಾಳೇರ 2–0 ಯಿಂದ ಮಾಚಿಮಂಡ ವಿರುದ್ದ; ಕೊಂಗಂಡ 2–0ಯಿಂದ ಮುಕ್ಕಾಟಿರ (ಬೋಂದ) ವಿರುದ್ದ; ಪಟ್ಟಚೆರುವಾಳಂಡ 2–0ಯಿಂದ ಕುಂದೀರ ವಿರುದ್ಧ; ಮೂಕೊಂಡ 4–0 ರಿಂದ ಚಿಮ್ಮಣಮಾಡ ವಿರುದ್ಧ ಗೆಲುವು ಸಾಧಿಸಿದವು.

ಮೇರಿಯಂಡ 5–4ರಿಂದ ಮಂಡೇಟಿರ ವಿರುದ್ಧ; ಸಣ್ಣುವಂಡ 2–1ರಿಂದ ಕುಮ್ಮಂಡ ವಿರುದ್ಧ; ಮೇಕೆರಿರ 4–3ರಿಂದ ಕಾಂಗಂಡ ವಿರುದ್ಧ ಟೈ ಬ್ರೇಕರ್‌ನಲ್ಲಿ ಜಯಿಸಿದವು. ನೆಲ್ಲಮಕ್ಕಡ ತಂಡ ವಾಕ್ ಓವರ್ ಪಡೆಯಿತು. ಕಾಯಪಂಡ- ಪಾಡೆಯಂಡ ತಂಡಗಳ ನಡುವಿನ ಪಂದ್ಯವನ್ನು ಮಳೆಯಿಂದಾಗಿ ಮುಂದೂಡಲಾಯಿತು.